# ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು

ಡಾ।। ನಿಂಗಣ್ಣ ಸಣ್ಣಕ್ಕಿ



# ಜನಪದ ಸಾಹಿತ್ಯದಲ್ಲಿ
# ಸ್ವಾತಂತ್ರ್ಯದ ಪರಿಕಲ್ಪನೆಗಳು

ಗ್ರಾಮಸಂಸ್ಕೃತಿ ಮಾಲೆ

# ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು

ಡಾ॥ ನಿಂಗಣ್ಣ ಸಣ್ಣಕ್ಕಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

**JANAPADA SAHITHYADALLI SWATHANTRYADA PARIKALPANE**

**A Collection of Articles**


*Writer*

**Dr. Ninganna Sannakki,**

Gokak, Belguam Dist.



*Publisher*

**N. Thippeswamy**

Administrative Officer

Kannada Pustaka·Pradhikara

Kannada Book Authority

Chamarajapet, Bangalore - 560 018



© : **Author**



First Impression : 2003

ISBN No. 81-7713-162-1

Pages : xii + 80

**Price : 40/-**

*Printed at :*

**Sathyasri Printers Pvt. Ltd.,**

164, 5th Main, Chamarajapet

Bangalore - 560 018. **Phone : 6525 736**

# ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನಸಂಪತ್ತನ್ನು ಉಳಿಸಿ ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್ ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯು ರಕ್ಷಣೆ ಪಾಲನೆ ಮತ್ತು ಪೋಷಣೆ ಎಂದೆಂದೂ ನಮಗೆ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ, ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಅಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ನಾನು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದೇ ಬೇಡವೇ? ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ, ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆ ಮುಡುಕುಗಳಲ್ಲಿ ಇಡುವುದು ನಮ್ಮ ಕತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರ ದೂರದ ಕತ್ತಲೆಯ ಜಾಗಗಳೂ ಅಜ್ಞಾತ ವಲಯಗಳೂ ಬೆಳಗು ವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ ಗ್ರಾಮಾಂತ್ರಗಳಿಗೂ ತಾಲ್ಲೂಕು ತಾಲ್ಲೂಕಾಂತರಗಳ ಕಡೆಗೂ

ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳು ಮನಸ್ಸನ್ನು ತಿಳಿಯಾಗಿಸುವ, ಅಕ್ಷರ ಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ ಕನ್ನಡ ಪುಸ್ತಕ ಪ್ರಾಧಿಕಾರ ಎಂಬ ಮಾತಿಗೆ ಬೆಲೆ ಬರುತ್ತದೆ, ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು.

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು. ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು. ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳು ಮತ್ತು ಸಂಕಟಗಳು ಉಂಟು. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ. ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ. ಅನೇಕ ತಳವರ್ಗದ ಜನಸ್ತೋಮಗಳು ಮೊದಲ ಬಾರಿಗೆ ಅಕ್ಷರ ಸೂರ್ಯನಿಗೆ ನಮಸ್ಕರಿಸಿದ್ದುಂಟುಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಲಸದಾಕಾಲ ಹಂಬಲಿಸುವ ಆಶಯ ಆಗಬೇಕು. ಆ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೋ, ರೂಪಗಳಲ್ಲೋ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ – ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದವು. 1820ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು – ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣೆ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ಈ ಮಾಲೆಗಳಲ್ಲಿ ಗ್ರಾಮಸಂಸ್ಕೃತಿ ಮಾಲೆಯೂ ಒಂದು. ಡಾ॥ ನಿಂಗಣ್ಣ ಸಣ್ಣಕ್ಕಿಯವರು ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು ಎಂಬ ಪುಸ್ತಕವು ಈ ಮಾಲೆಯಲ್ಲಿ ಈಗ ಪ್ರಕಟಗೊಳ್ಳುತ್ತಿದೆ.

ಈ ಪುಸ್ತಕವು ವಿಶಿಷ್ಟವಾದುದು. ಇದು ಜನಪದವನ್ನು ಹಿನ್ನೆಲೆಯಾಗಿಟ್ಟುಕೊಂಡು ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ವಿವರಿಸುತ್ತದೆ. ಈ ಪುಸ್ತಕದ ಲೇಖಕರು ಜನಪದ ಸಾಹಿತ್ಯ ಮತ್ತು ವಿಚಾರ ಸಾಹಿತ್ಯದಲ್ಲಿ ನುರಿತವರು. ಅವರು ವಸಾಹತುಶಾಹಿ ಕಾಲಘಟ್ಟದ ಸಾಮಾಜಿಕ ಕ್ಷೇತ್ರದ ಮುಖ್ಯ ನೆಲೆಗಳನ್ನು, ವಿಚಾರಗಳನ್ನು ಕುರಿತು ಬರೆದಿದ್ದಾರೆ. ಹೀಗಾಗಿ, ಇದೊಂದು ಹೊಸ ಬಗೆಯ ಪುಸ್ತಕ. ಸಮಾಜಶಾಸ್ತ್ರ ಮತ್ತು ಜನಪದದ ಅಂತರಶಿಸ್ತೀಯ ಅಧ್ಯಯನಕ್ಕೆ ಇದು ಉಪಕಾರಿ ಪುಸ್ತಕವೆನಿಸಿದೆ. ಆ ಕ್ಷೇತ್ರದ ವ್ಯಾಸಂಗಿಗಳು ಹೆಚ್ಚಿನ ಅಧ್ಯಯನ ಮಾಡಲು ಇದು ಪ್ರೇರಿಸುತ್ತದೆ. ಇಂಥ ಪುಸ್ತಕವನ್ನು ಪ್ರಾಧಿಕಾರದ ಮೂಲಕ ಪ್ರಕಟಿಸಲು ಒಪ್ಪಿಗೆ ಕೊಟ್ಟ ಡಾ॥ ನಿಂಗಣ್ಣ ಸಣ್ಣಕ್ಕಿಯವರನ್ನು ನಾನು ಮನವಾರೆ ಅಭಿನಂದಿಸುತ್ತೇನೆ.

ಈ ಪುಸ್ತಕದ ಪ್ರಕಟಣೆಯ ಸಂದರ್ಭದಲ್ಲಿ ನೆರವಿಗೆ ನಿಂತ ಸದಸ್ಯ ಮಿತ್ರರೆಲ್ಲರನ್ನೂ ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್ ಗೆಳೆಯರನ್ನೂ ಅಭಿನಂದಿಸುತ್ತೇನೆ. ಇವರೆಲ್ಲರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಕ್ಷೇತ್ರದ ವ್ಯಾಸಂಗಿಗಳೂ ಆಸಕ್ತರೂ ಈ ಹೊತ್ತಗೆಯನ್ನು ಆದರದಿಂದ ಸ್ವೀಕರಿಸಬೇಕೆಂದು ಆಶಿಸುತ್ತೇನೆ.

# ಎರಡು ಮಾತು

'ಜನಪದದಲ್ಲಿ ಭಾರತ ಸ್ವಾತಂತ್ರ್ಯದ ಪರಿಕಲ್ಪನೆಗಳು' ಬಹುದೊಡ್ಡ ವಿಷಯವಾಗಿ ತೋರುತ್ತಿದೆ. ಇಡೀ ಭಾರತ ರಾಷ್ಟ್ರದಲ್ಲೆಲ್ಲ ಈ ಬಗೆಯಾಗಿ ತೋರುವ ಇತಿಹಾಸದಲ್ಲಿ 'ಕರ್ನಾಟಕದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ'ಯ ಮುಖ್ಯ ಘಟನೆಗಳನ್ನು ವಿವರಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಕ್ರಿ.ಶ. ೧೮೦೦ ರಿಂದ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಅಲ್ಲಲ್ಲಿ ವಿಚಾರಗಳ ತಲೆದೋರಿದವು. ಈ ದೃಷ್ಟಿಯಿಂದ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಸಿಡಿದೆದ್ದವರು. ಕಿತ್ತೂರ ಸಂಸ್ಥಾನದ ವೀರರು ಮತ್ತು ವೀರ ಮಹಿಳೆ ಕಿತ್ತೂರು ಚೆನ್ನಮಾಜಿ ಎಂಬುದು ಕ್ರಿ.ಶ. ೧೮೨೪ ಐತಿಹಾಸಿಕ ಸತ್ಯವಾಗಿದೆ. ಚೆನ್ನಮ್ಮಾಜಿಯ ನಂತರ ಝಾನ್ಸಿ ರಾಣಿ ಲಕ್ಷ್ಮೀಬಾಯಿಯ ಇತಿಹಾಸ ನಿಲ್ಲುತ್ತದೆ. ಬಂಟ ಸಂಗೊಳ್ಳಿ ರಾಯಣ್ಣ ಹಾಗೂ ಅವನು ಕಟ್ಟಿದ ಸೈನಿಕರು ಪ್ರಮುಖರು ಎಂಬುದು ಸತ್ಯಸ್ಯ ಸತ್ಯ ಘಟನೆಯಾಗಿರುವುದನ್ನು ನೆನಪಿಸುವ ಕೆಲಸ ನಾಡಿನವರದ್ದು.

ಇಂತಹ ವೀರರನ್ನು ವೀರ ಮಹಿಳೆಯರನ್ನು, ನಡೆದ ಘಟನೆಗಳನ್ನು, ಜನಪದ ಸಾಹಿತಿಗಳು, ಜನಪದರ ನಾಲಿಗೆಯ ಮೇಲೆ ಬಿತ್ತಿದರು. ಜನ ಜಾಗ್ರತಿಯನ್ನುಂಟು ಮಾಡಿದರು. ಅವರವರ ಪರಿಕಲ್ಪನೆಗಳು ಸತ್ಯವಾಗಿ ತೋರಿದವು. ಹತ್ತೊಂಬತ್ತನೆಯ ಶತಮಾನದ ಸರ್ವ ಬೆಂಬಲದಿಂದ ಇಪ್ಪತ್ತನೆಯ ಶತಮಾನದ ಮಹಾತ್ಮಾ ಗಾಂಧೀಜಿಯವರ ಮುಖತ್ವದಲ್ಲಿ ಭಾರತ ಸ್ವಾತಂತ್ರ್ಯದ ಬಿಡುಗಡೆಯು ಆಯಿತು.

ಜನಪದರು ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ, ಜನಪದ ಗೀತ ಸಾಹಿತ್ಯದಲ್ಲಿ ವೀರತನದ ಪರಿಕಲ್ಪನೆ, ಜನಪದದಲ್ಲಿ ಮೈಲಾರ ಮಹಾದೇವ ಮತ್ತು ರಮಾನಂದ ತೀರ್ಥರು, ಸ್ವಾತಂತ್ರ್ಯ ಸಂಗ್ರಾಮ ಮತ್ತು ಹೈದರಾಬಾದ ವಿಮೋಚನೆ ಇವು ಇಲ್ಲಿಯ ಪ್ರಮುಖ ಬರಹಗಳಾಗಿವೆ. ಇವುಗಳಂತೆ ಶಿವಪುರ ಧ್ವಜಸತ್ಯಾಗ್ರಹ, ವಿದುರಾಶ್ವತ್ಥದ ಗಲಭೆ, ಈ ಸೂರ ಬಂಡಾಯ, ಇವು ಪ್ರಮುಖವಾದವುಗಳೇ ಆಗಿವೆ.

ನರಗುಂದ ಬಂಡಾಯ, ಹಲಗಲಿ ಬಂಡಾಯ, ಮುಂಡರಗಿ ಬಂಡಾಯ ಇತ್ಯಾದಿಗಳೆಲ್ಲವೂ ಬ್ರಿಟಿಷರ ವಿರುದ್ಧದ ಹೋರಾಟಗಳಾಗಿವೆ. ಇವುಗಳು ಪ್ರಮುಖವಾಗಿ ಸಾಹಿತ್ಯಿಕವಾಗಿ ಸಾಹಿತ್ಯಿಕ ಕೃತಿಗಳಾಗಿ, ಕರ್ನಾಟಕ ಇತಿಹಾಸದ ಮಹತ್ವದ ಘಟ್ಟಗಳಾಗಿವೆ.

ಶಿವಪುರವು ಬೆಂಗಳೂರು ಮತ್ತು ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಪ್ರಾಚೀನವಾಗಿಯೂ ಆದರ್ಶ ಗ್ರಾಮವೇ ಆಗಿದೆ. ಶಿಂಷಾ ನದಿಯ ದಡದಲ್ಲಿರುವ ಮಹತ್ವದ ಗ್ರಾಮವಾಗಿದೆ. ಬೆಂಗಳೂರು – ಮೈಸೂರಿನ ರೈಲು ದಾರಿಯ ರೈಲು ನಿಲ್ದಾಣವನ್ನು ಹೊಂದಿದೆ. ಕೃಷಿಯೇ ಅಲ್ಲಿಯ ಮುಖ್ಯ ಉದ್ಯೋಗವಾಗಿದೆ.

ಮೈಸೂರು ಸಂಸ್ಥಾನದಲ್ಲೂ ೧೯೩೮ನೇ ಏಪ್ರಿಲದಲ್ಲಿ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಸುಮಾರು ೪೦,೦೦೦ (ನಲ್ವತ್ತು ಸಾವಿರ) ಜನರು ಕೂಡಿದ್ದರು. ಇವರಿಗೆಲ್ಲ ಸತ್ಯಾಗ್ರಹದ ಮಾಡುವ ಚೇತನವನ್ನು ಈ ಧ್ವಜ ಸತ್ಯಾಗ್ರಹ ನೀಡಿತು. ದಿನಾಂಕ ೧೧-೪-೧೯೩೮ರಂದು ಧ್ವಜ ಸತ್ಯಾಗ್ರಹವೆಂದು ಹೆಸರು ಪಡೆದು ಇತಿಹಾಸದಲ್ಲಿ ಮೈಸೂರಿಗೆ ಶ್ರೇಷ್ಠಸ್ಥಾನ ದೊರಕಿಸಿಕೊಟ್ಟ ದಿನ ಶಿವಪುರದ ಧ್ವಜ ಸತ್ಯಾಗ್ರಹವಾಗಿದೆ.

ಇದರಂತೇ ವಿದುರಾಶ್ವತ್ಥದ ಗಲಭೆಯೂ ಭಾರತ ಸ್ವಾತಂತ್ರ್ಯಕ್ಕೆ ಸ್ಫೂರ್ತಿಯನ್ನು ನೀಡಿದೆ. ವಿದುರಾಶ್ವತ್ಥವು ಕೋಲಾರ ಜಿಲ್ಲೆಯ ಗೌರೀಬಿದನೂರಿನ ದೊಡ್ಡ ಕುರಗೋಡು ಗ್ರಾಮದ ಹತ್ತಿರ ಪಿನಾಕಿನ ನದಿಯ ದಂಡೆಯ ಪ್ರಸಿದ್ಧಯಾತ್ರಾಸ್ಥಳವಾಗಿದೆ.

ಇಲ್ಲಿ ಶಿವಪುರದ ಧ್ವಜ ಸತ್ಯಾಗ್ರಹದ ನಂತರ, ಜನರು ಸ್ಫೂರ್ತಿಗೊಂಡು ಸುತ್ತಮುತ್ತಲಿನ ಹಳ್ಳಿ ಪಟ್ಟಣಗಳಿಂದ ಬಂದ ಸುಮಾರು ರೂ. ೫೦೦೦ ಜನರು ದಿನಾಂಕ ೨೫-೪-೧೯೩೮ರಂದು ನೆರೆದಿದ್ದರು. ವಿದುರ ನಾರಾಯಣ ಸ್ವಾಮಿಯ ಗುಡಿಯ ಎದುರು ಧ್ವಜ ಸತ್ಯಾಗ್ರಹವನ್ನು ನೆರವೇರಿಸಿದರು.

ಪೋಲೀಸರು ೬೨ ಸುತ್ತು ಗುಂಡು ಹಾರಿಸಿದರು. ನಿರಪರಾಧಿ ಹಳ್ಳಿಗರು ಸತ್ತರು. ವನದಲ್ಲಿರುವ ಮಂಗಗಳು ಹೌಹಾರಿ ಚೀರಿದವು. ಹಕ್ಕಿ-ಪಕ್ಷಿಗಳ ಹಾರಾಟ-ಚೀರಾಟ ಭಯಂಕರವಾಗಿತ್ತು. ಈ ದೃಶ್ಯಗಳೆಲ್ಲವೂ ಜನಪದದದಲ್ಲಿ ದಾಖಲಾಗಿವೆ. ವಿವಿಧ ಪ್ರಕಾರದ ಜನಪದ ಹಾಡುಗಳು ಸತ್ಯ ಸಂಗತಿಗಳನ್ನೇ ವಿವರಿಸುತ್ತಿವೆ. ಅಂದು ವಿದುರಾಶ್ವತ್ಥ ರಣರಂಗವಾಗಿ ಇತಿಹಾಸ ಪ್ರಸಿದ್ಧವಾಗಿದೆ. 'ಶಿವಪುರ ಮತ್ತು ವಿದುರಾಶ್ವತ್ಥ' ಧ್ವಜ ಸತ್ಯಾಗ್ರಹವನ್ನು ಕುರಿತು ಲಾವಣಿಕಾರ ಬಿ. ನೀಲಕಂಠರವರ ಪ್ರಸಿದ್ಧ ಲಾವಣಿ ಚಿತ್ರಿತವಾಗಿದೆ. ಅದರಂತೆ 'ಕಾಂಗ್ರೆಸ್ ಲಾವಣಿ'. ಡಿ.ಎಸ್. ರಾಮಸ್ವಾಮಿ ಅವರಿಂದ ರಚನೆಯಾಗಿದೆ.

ಇದೇ ಬಗೆಯಾಗಿ ಸ್ವಾತಂತ್ರ್ಯ ಹೋರಾಟದ ಕಿಡಿ ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮದಲ್ಲಿ ನಡೆಯಿತು. 'ಈಸೂರಿನ ಬಂಡಾಯ' ಎಂದೇ

ಪ್ರಸಿದ್ಧಿಯನ್ನು ಪಡೆಯಿತು. 'ಮಾಡು ಇಲ್ಲವೆ ಮಡಿ'- ಸ್ವಾತಂತ್ರ್ಯದ ಮಂತ್ರವು ಸತ್ಯವಾಗಿ ತೋರಿತು. ೬೦೦ ಮನೆಗಳಿರುವ ಈ ಗ್ರಾಮವು ಸ್ವಾತಂತ್ರ್ಯದ ಆದರ್ಶಗ್ರಾಮವೇ ಗಂಟೆಯ ಕರೆಗಂಟೆಯಾಗಿ ನಿಂತಿದೆ.

ಈ ಬಗೆಯ ಇಡೀ ಭಾರತದ ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಕೂಡಿ ಗ್ರಂಥ ರಚನೆಯಾಗುವುದು ಅವಶ್ಯ ಈ ವಿಷಯ ಒಂದು ವಿಶ್ವಕೋಶವೇ ಆಗಬಹುದು. ಕರ್ನಾಟಕದಲ್ಲಿ ಒಟ್ಟು ಸ್ವಾತಂತ್ರ್ಯದ ಪರಿಕಲ್ಪನೆಗಳ ದಾಖಲೆಯಲ್ಲಿ ಇದೊಂದು ಸಣ್ಣ ಪ್ರಯತ್ನವೆಂದು ಓದುಗರಿಗೆ ಅನಿಸದೆ ಇರಲಾರದು. ಪರಿಕಲ್ಪನೆ ರಾಷ್ಟ್ರೀಯತೆಯಲ್ಲಿ ತ್ಯಾಗ-ಬಲಿದಾನಗಳಿಗೆ, ರಕ್ತಹರಿಸುವಿಕೆ, ನರಹತ್ಯಾಕಾಂಡಕ್ಕೆ ನಡೆದ ಘಟನೆಗಳ ಬಗೆಯಾಗಿದೆ. ವಿವರಗಳ ಈ ಪುಟ್ಟ ಕೃತಿ ಸಾಕ್ಷಿಯಾಗಿದೆ.

ಪ್ರೀತಿಯಿಂದ ಈ ಕೃತಿಯು ಹೊರಬರಲು ಸಹಾಯಕರಾದ ಕನ್ನಡ ಪುಸ್ತಕ ಪ್ರಾಧಿಕಾರದ ಹಿಂದಿನ ಅಧ್ಯಕ್ಷರಾದ ಡಾ|| ಎಚ್. ಜೆ. ಲಕ್ಕಪ್ಪಗೌಡರನ್ನೂ ಈಗ ಪುಸ್ತಕ ಪ್ರಕಟಗೊಳ್ಳಲು ಕಾರಣರಾದ ಅಧ್ಯಕ್ಷರಾದ ಪ್ರೊ|| ಮಲ್ಲೇಪುರಂ. ಜಿ. ವೆಂಕಟೇಶ ಅವರನ್ನೂ ಹಾಗೂ ಸರ್ವಸದಸ್ಯರನ್ನೂ ನೆನೆಯದೇ ಇರಲಾರೆನು. ಇವರಿಗೆಲ್ಲರಿಗೂ ಧನ್ಯವಾದಗಳು. ಪುಸ್ತಕ ಕೊಂಡು ಓದುವ ಓದುಗರ ಬಳಗಕ್ಕೂ ಅಭಿನಂದನೆ ಸಲ್ಲಿಸುವೆನು.

ಗೋಕಾಕ್ ಡಾ|| ನಿಂಗಣ್ಣ ಸಣ್ಣಕ್ಕಿ
ನವೆಂಬರ್ ೧, ೨೦೦೩

## ಪರಿವಿಡಿ


| | |
|---|---|
| ಅಕ್ಷರಸೂರ್ಯನಿಗೆ ನಮನ | iii |
| ಎರಡು ಮಾತು | vi |
| ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ | ೧ |
| ಜನಪದ ಗೀತಸಾಹಿತ್ಯದಲ್ಲಿ ವೀರತನದ ಪರಿಕಲ್ಪನೆ | ೩೦ |
| ಜನಪದದಲ್ಲಿ ಮೈಲಾರ ಮಹಾದೇವ ಮತ್ತು ರಮಾನಂದತೀರ್ಥರು | ೪೭ |
| ಸ್ವಾತಂತ್ರ್ಯ ಸಂಗ್ರಾಮ ಮತು ಹೈದರಾಬಾದ ವಿಮೋಚನೆ | ೭೪ |

# “ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ”

**ಭಾ**ರತದಲ್ಲಿ ಕರ್ನಾಟಕವು ಜಾನಪದ ತವರೂರು ಎಂಬ ಹೆಗ್ಗಳಿಕೆಗೆ ಪ್ರಸಿದ್ಧಿಯನ್ನು ಪಡೆದಿದೆ. ಕನ್ನಡ ಜಾನಪದವು ಹಲವಾರು ಪ್ರಕಾರಗಳಲ್ಲಿ ಹಿರಿಮೆ-ಗರಿಮೆಯನ್ನು ಪಡೆದಿದೆ. ಅದರಂತೆ ಭಾರತದ ಸ್ವಾತಂತ್ರ್ಯದ ಪೂರ್ವಕಾಲದಲ್ಲೂ ಬ್ರಿಟೀಷರಿಂದ ದೇಶ ಬಿಡುಗಡೆಗೆ ಜನಪದ ಕವಿಗಲು ಜನತೆಗೆ ಮಹತ್ವದ ತಿಳುವಳಿಕೆಯನ್ನು ನೀಡಿಯಾಗಿದೆ. ಇಲ್ಲಿಯ ವರೆಗೆ ಜನಪದ ಗಂಗೋತ್ರಿ ಸಾಗುತ್ತಲೇ ಇದೆ. ಇಂತಹ ಜಾನಪದವು ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಮೂರು ಕಾಲಗಳಲ್ಲಿ ಅರಿಯಬಹುದಾಗಿದೆ. ೧) ಸ್ವಾತಂತ್ರ್ಯದ ಪೂರ್ವಕಾಲದ ಪರಿಕಲ್ಪನೆ ೨) ಸ್ವಾತಂತ್ರ್ಯ ಕಾಲದ ಪರಿಕಲ್ಪನೆ ಮತ್ತು ೩) ಸ್ವಾತಂತ್ರ್ಯದ ನಂತರದ ಪರಿಕಲ್ಪನೆ, ಈ ಪರಿಕಲ್ಪನೆಯಲ್ಲಿ ಕನ್ನಡ ಜನಪದ ಕವಿಗಳು ಮತ್ತು ಹಾಡುಕಾರರು ನೀಡಿದ ಉತ್ತೇಜನವನ್ನು ತಿಳಿಯುವುದವಶ್ಯವಿದೆ.

ನಮ್ಮ ರಾಷ್ಟ್ರ ಭರತಭೂಮಿಗೆ ಭೌಗೋಳಿಕವಾಗಿ ದ್ವೀಪಕಲ್ಪ ಜಂಬೂದ್ವೀಪ ಹಿಂದುದೇಶ, ಹಿಂದುಸ್ಥಾನ ಭಾರತ (ಇಂಡಿಯಾ) ಹೀಗೆ ಕರೆಯಲಾಗಿದೆ.

## ರಾಷ್ಟ್ರದ ಕಲ್ಪನೆ

ಕನ್ನಡದಲ್ಲಿ ಐಹೊಳೆ ಶಾಸನದಲ್ಲಿ ಮೂರು ಮೂರು ಮಹಾರಾಷ್ಟ್ರಗಳು ಎಂಬ ದಾಖಲೆ ಇದೆ. ನಾಡು ಎಂಬುದಕ್ಕೆ ರಾಷ್ಟ್ರ ಎಂಬುದಾಗಿ ರವಿಕೀರ್ತಿ ಎಂಬ ಮಹಾ ಕವಿಯು ಎರಡನೆಯ ಪುಲಕೇಶಿ ಗೆದ್ದ ನೆಲಗಳಿಗೆ ಹೆಸರಿಟ್ಟಿದ್ದುಂಟು. ಅಂದರೆ ಅವನ ದಿಗ್ವಿಜಯವನ್ನು ವರ್ಣಿಸಿದ್ದುಂಟು ಎಂಬುದ್ದಾಗಿ 'ಮಹಾರಾಷ್ಟ್ರದ ಮೂಲ' (ಪು.೪೩) ಎಂಬ ಕೃತಿಯಲ್ಲಿ ಡಾ|| ಶಂ.ಬಾ.ಜೋಶಿಯವರು ಸ್ಪಷ್ಟ ಪಡಿಸಿದ್ದಾರೆ. ನಮ್ಮ ಅರಸರೇ ರಾಷ್ಟ್ರಕೂಟ ಎಂಬ ಹೆಸರನ್ನು ಹೊಂದಿರುವುದು ಸರ್ವ ಸತ್ಯ ಸಂಗತಿಯಾಗಿದೆ. ಹತ್ತನೆಯ ಶತಮಾನದಲ್ಲಿ ಮಹಾಕವಿ ಪಂಪನು, 'ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ನಾಡಿನ ಅಭಿಮಾನವನ್ನು ಸೂಚಿಸಿದ್ದಾನೆ. ಒಟ್ಟಾರೆ ಕನ್ನಡ ರಾಜರು ಮತ್ತು ಕವಿಗಳು ಆಯಾ ಪ್ರದೇಶಕ್ಕೆ ತಮ್ಮ ನಾಡೊಂದು ದೇಶವೆಂದೂ, ಅರ್ಥಬರುವಂತೆ

ಅರಿಕೆಯಾಗಿದೆ. ರಾಷ್ಟ್ರವೆಂಬುದು ಬಹು ವಿಶಾಲ ಪ್ರದೇಶ ಎಂಬುದಾಗಿ ಬರಬರುತ್ತ ತಿಳಿದರು. ನಾಡು, ರಾಜ್ಯ, ದೇಶ, ಪ್ರಾಂತ ರಾಷ್ಟ್ರ ಈ ಪದ ಪ್ರಯೋಗಗಳು ಭಾರತ ಸ್ವಾತಂತ್ರದ ನಂತರ ಸರಿಯಾದ ಪರಿಕಲ್ಪನೆಗೆ ಬಂದವುಗಳಾದವು. ರಾಷ್ಟ್ರದಲ್ಲಿ ರಾಜ್ಯಗಳು, (ರಾಜ್ಯಕ್ಕೆ ಪ್ರಾಂತವೆಂದೂ ಪ್ರದೇಶವೆಂದು) ಇರುತ್ತವೆ ಎಂಬ ಪರಿಕಲ್ಪನೆಯು ನಮ್ಮವರಿಂದಲೂ ಪಾಶ್ಚಾತ್ಯರಿಂದಲೂ ತಿಳಿದು ಬಂದಿತು. ಸ್ವಾಮಿ ವಿವೇಕಾನಂದರು ಪಾಶ್ಚ್ಯತ್ಯರಿಗೆ ಭಾರತ ರಾಷ್ಟ್ರದ ಪರಿಕಲ್ಪನೆಯನ್ನು ನೀಡಿದ್ದು ಅತ್ಯಂತ ಶ್ರೇಷ್ಠತಮ ಕಾರ್ಯವಾಗಿದೆ.[1]

## ೧) ಸ್ವಾತಂತ್ರ್ಯದ ಪೂರ್ವಕಾಲದ ಪರಿಕಲ್ಪನೆ

ಭಾರತ ಸ್ವಾತಂತ್ರ್ಯದ ಪೂರ್ವಕಾಲದವು ಮಹಾನ ಮಹಾನ ಮಹಾತ್ಮರ, ದಾರ್ಶನಿಕರ, ನಾಯಕರ, ವೀರರ, ವೀರಶ್ರೀಗಳ, ಭಗವದ್ ಮಾನ್ಯರೆ ಮುಂತಾದವರ ಕಾರ್ಯಗಳು ಅಲ್ಲಲ್ಲಿ ರಾಷ್ಟ್ರ ಬಿಡುಗಡೆಗೆ ಸಜ್ಜಾಗಿ ನಿಂತವು. ಕ್ರಿ.ಶ. ೧೮೦೦ ಪ್ರಾರಂಭದಲ್ಲಿಯೇ ಬ್ರಿಟಿಷರಿಗೆ ವಿರೋಧಾಭಾಸಗಳು ಎದುರಾಗಿ ನಿಂತವು.

ಕನ್ನಡ ನೆಲ (ಕರ್ನಾಟಕ)ದಲ್ಲಿ ಬ್ರಿಟಿಷರಿಗೆ ಅರಸನಾಗಿ ಎದುರು ನಿಂತವರಲ್ಲಿ ಹೈದರಾಲಿಯ ಮಗ ವೀರ ಟೀಪುಸುಲ್ತಾನ ಮಾತ್ರ ಎದ್ದು ತೋರುವ ಗಂಡುಗಲಿಯಾಗಿದ್ದಾನೆ. ಕ್ರಿ.ಶ. ೧೭೯೯ರಲ್ಲಿ ನಡೆದು ಶ್ರೀರಂಗಪಟ್ಟಣದ ಕಾಳಗವು ಕನ್ನಡಿಗರಿಗೆ ವೀರಶ್ರೀಯನ್ನು ಚೇತನವನ್ನು ನೀಡಿದ್ದು, ಟೀಪುವನ್ನು ಕುರಿತು ಅವನ ಅವಸಾನದ ಕಾಲದಲ್ಲಿ ಹಾಡಿಕೊಂಡ ಜನಪದ ಹಾಡುಗಳಲ್ಲಿ ಕನ್ನಡ ಲಾವಣಿ ವಿದ್ವಾನ್ ಬಿ. ನೀಲಕಂಠಯ್ಯ ರಚಿಸಿದ ಲಾವಣಿ, ಈ ಲಾವಣಿ ಗ್ರಾಮಫೋನ್ ಟ್ವಿನ್ ರಿಕಾರ್ಡುಗಳಲ್ಲಿ ಹಾಡಿರುವ ಹೈದರ ಮತ್ತು ಟೀಪು ಸುಲ್ತಾನ ಲಾವಣಿ

ಲಾವಣಿ:

ಬೇಷಕ್ ತಮಾಷಾ ಟೈಗರ ನಿಶಾನಾ
ಟೀಪುಸುಲ್ತಾನನ ಬಿರುದಾಯ್ತು
ಮಸಲತ್ಮಾಡಿದ ಮೀರಸಾಧಕನಿಗೆ
ದೇಶದ್ರೋಹಿ ಎಂಬೆಸರಾಯ್ತು ॥ಪ॥

ಹೀಗೆ ಪಲ್ಲದೊಂದಿಗೆ ಸುರುವಾಗುವ ಲಾವಣಿಯ, ಮೈಸೂರು ಹುಲಿ ಎಂದು ಹೆಸರಾದ ಟೀಪು ಸುಲ್ತಾನನ ವೀರತನವನ್ನು ತಿಳಿಸುವಂತಹದು ಆದರೆ ಅವನಿಗೆ ಮೋಸ ಮಾಡಿದವನು ಮೀರಸಾಧಕನಾಗಿದ್ದಾನೆ.

---

1. ರಾಷ್ಟ್ರ ಅರ್ಥಕ್ಕೆ ಇಂಗ್ಲಿಷಿನ Nation ಮತ್ತು Country ಸಮಾನಾರ್ಥ ಪದಗಳನ್ನು ಶಬ್ದಕೋಶಗಳಲ್ಲಿ ಒಪ್ಪಿಯಾಗಿದೆ.

+ Concept ಪರಿಕಲ್ಪನೆ ಸರಿಯಾದ ಅರ್ಥ ಮತ್ತು ವಿವೇಚನೆ.

ಲಾವಣಿಯಲ್ಲಿ ಪ್ರಮುಖವಾದುದು ಟೀಪು ಸುಲ್ತಾನನು ಆಂಗ್ಲರ ಜೊತೆ ಹೋರಾಡಿದ್ದು ಮತ್ತು ವೀರ ಮರಣವನ್ನು ಹೊಂದಿರುವಂತಹದು.

ಹರಮಾಖೋರನ ಖಿರಾಮತ್ತರಿತನು
ಟೀಪುಸುಲ್ತಾನನು ನಿಮಿಷದಲಿ।
ಅರೆ ಹಮಾರೆ ನಮ್ಮಿಬ್ಬರಾಮ ಕರೇಸೊ
ಕಾಮ್ಮೆಂದ ಮನಸಿನಲಿ
ಸ್ವರಾಜ್ಯ ರಕ್ಷಣೆಗೋಸ್ಕರ ಸುಲ್ತಾನ
ರಣಾಗ್ರಕ್ಕೊದಗಿನು ರೋಷದಲಿ।
ಫರಂಗಿ ಸೋಲ್ಜರ್ ತರಂಗ ಮಧ್ಯದಲಿ
ತುರಂಗ ಬಿಟ್ಟನು ತ್ವರಿತದಲಿ।
ಪರಂಪರೆಯ ಹರ ವಿರೋಧಿ ಫೌಜನು
ಕುರಿಗಳಂದದಿ ಖಡ್ಗದಲಿ।
ಸರಾಸರಿ ಇಲ್ಲ, ಬರೆಯಲು ಸಾಗದು
ತರಿದನು ಎಷ್ಟೋ ಶಿರಬದಲಿ।
ಪರಾಕ್ರಮದಿ ಬಲು ಹೋರಾಡಿ ಬಿದ್ದನು
ಸಾರಂಗ ಬಾಗಲ ಗವಿಯ ಬಳಿ।
ಫರಂಗಿ ಫೌಜಿನ ತರಂಗ ನುಗ್ಗಿತು
ಶ್ರೀ ರಂಗಧಾಮನ ಪಟ್ಟದಲಿ॥

– ಲಾವಣಿಕಾರ ಬಿ. ನೀಲಕಂಠಯ್ಯ ಅವರು ಟೀಪುವಿನ ವೀರತನದ ಬಗೆಗೆ ॥ ಚಿಕ್ಕ ಉಡನ್॥ ದಲ್ಲಿ ಹೇಳುವ ಮಾತುಗಳು

ಹುಲಿ ಸೀಳಿದ ದೊರೆ ಅಳಿದೊಡ ಮೇಲೆ ರಣದಲ್ಲಿ।
ಗಲಬೆಯ ಎದ್ದಿತು ಶ್ರೀರಂಗಪಟ್ಟಣದಲ್ಲಿ॥
ಸುಲಿಗೆಯನೆ ಮಾಡಿದರು ಶತ್ರು ಜನರು ಬರದಲ್ಲಿ।
ಬಳಿಕಾರದ ವೀರರ ಬರದೇನು ಫಲವಿಲ್ಲ॥

ಈ ಲಾವಣಿಯ ಹಾಡಲು ಸರಳವಾಗಿದೆ. ಸುಂದರವಾಗಿದೆ. ಪಲ್ಲ, ಚಾಲ, ಉಡನ್, ಗುಲ್ ಉಡನ್, ದೊಡ್ಡ ಉಡನ್, ಚಿಕ್ಕುಡನ್, ಶ್ಲೋಕ ಭಾಗಗಳನ್ನು ಮಾಡಲಾಗಿದೆ. ಕೆಲವರ ವಾದದಂತೆ ಈ ಲಾವಣಿ ಹೊರತಿಲ್ಲ ಎಂಬುವಿದೆ ಆದರೆ, ನನಗೆ ಈ ಲಾವಣಿಯ ಪೂರ್ಣದೊರಕಿರುವ ಪುಸ್ತಕಗಳು ನನ್ನಲ್ಲಿವೆ.[೨]

ನಾನು ಸಂಗ್ರಹಿಸಿದ ನಾಗು ಗೌಸ ಬಾಗಲಕೋಟೆಯಲ್ಲಿ ವಾಸವಾದ ಮೋಹರಂ ಹಾಡುಗಳ ರಚನಾಕರನು ೧೫ ನುಡಿಗಳಲ್ಲಿ ಟೀಪುವಿನ ಬಗೆಗೆ ವಿವರಗಳನ್ನು ನೀಡುತ್ತಾನೆ.[೩]

---

೨. ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ಸಂಪಾದಿಸಿದ ಸುಲ್ತಾನನ ದೌಲತ್ತು

ಏರು :
ಮದ್ದು ಗುಂಡು ಹಾರ್ಯಾವದುಂದಾ
ಟೀಪು ಕೇಳಿ ಆಗ ಬಂದಾ
ಶಾರ ಮದ್ರಾಸಾಕ ಅನಿಸಿ
ಧೀರ ಆ ಸುಲ್ತಾನನು
ದಾಬುಕತ್ತಿ ಕೈಯ ಬಳಗ
ಗುಂಡುಗಳು ಸುಲ್ತಾನನಿಗೆ ಬಿಡದು
ಪ್ರಾಣ ಹೋದಿತೊ ಆಗ। ತಿಳಿಯಲ್ಲಿಲ್ಲ

'ಜಾನಪದ ಝೇಂಕಾರ' ಎಂಬ ಸಂಗ್ರಹದಲ್ಲಿ ಶ್ರೀ ಎ.ಜಿ. ನೀಲಗಾರ ಅವರು ಟೀಪು ಸುಲ್ತಾನನ ಬಗೆಗೆ ಜನಪದ ಹಾಡೊಂದನ್ನು ಸಂಗ್ರಹಿಸಲಾಗಿದೆ ಇಲಿಯಾಗಿ ನೂರು ವರುಷ ಬಾಳೋದು ಬ್ಯಾಡಾಂತ ಹುಲಿಯಾಗಿ ಮೂರು ವರುಷ ಬಾಳೋದು ಪಾಡಂತ, ವೀರಶ್ರೀಯನ್ನುಂಟು ಮಾಡುತ್ತದೆ. ವೀರಟೀಪುವಿಗೆ ಶ್ರೀರಂಗನಾಥನು ಒಲಿದಿದ್ದನು ಎಂಬ ಕಲ್ಪನೆಯ ಕೂಡ ಅಷ್ಟೇ ಮಹತ್ವವುಳ್ಳದ್ದು

ಹಾಡು:
ಇಂಗ್ಲಿಷರೊಡನೆ ಕಾದುತ್ತ।
ದೇಶ ರಕ್ಷಣಾ ಮಾಡುತ್ತ
ವೀರತನ ತೋರುತ್ತ।
ವೈರಿಯನು ಹಣಿಯುತ್ತ
ಟೀಪು ಕುಣಿಯುತ್ತ ನಿಂತು।
ಅವನಿಗೆ ಒಲವಿದ್ದ ರಂಗನಾಥ।।
ದೇಶದ್ರೋಹಿ ಮಾಡಿದ ಘಾತಾ।
ಖಡ್ಗ ಹಿಡಿದು ಕಾದುತ್ತಾ ನಿಂತಾ।।
ಟೀಪು ಪ್ರಾಣ ಬಿಟ್ಟ ಕಾದುತ್ತಾ।
ಅವನಿಗೆ ಒಲಿದಿದ್ದ ರಂಗನಾಥ।।

ಹೋದುದು ಎಂಬ ಕೋಲು ಪಠವು ದೊರೆಯುತ್ತದೆ. ಮಳಲಿ ವಸಂತ ಕುಮಾರರು ಸಂಪಾದಿಸಿದ' ಕೋಲು ಪದಗಳು ಜನಪದ ಕೃತಿಯಲ್ಲಿ ಟೀಪುವಿನ ವೀರವತ್ತಾದ ವೃತ್ತಾಂತ ದೊರಕುತ್ತದೆ. ಇದಲ್ಲದೆ ಕಲವಾದಿ ವಿ. ಮಳವಳ್ಳಿ ರಾಚಯ್ಯ ಬರೆದಿಟ್ಟುಕೊಂಡ ಟೀಪುವಿನ ಪದವನ್ನು ಜೀಶಂಪ ಅವರು ದಕ್ಷಿಣದ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು ಮಹಾಪ್ರಬಂಧದಲ್ಲಿ ಪ್ರಕಟಿಸಿದ್ದಾರೆ.

ಹಿಂದು-ಮುಸ್ಲಿಮರ ಭಾವೈಕ್ಯವನ್ನು ಸೂಸುವ ಪದವೊಂದನ್ನು ಧಾರವಾಡ ಬೆಳಗಾವಿ ಜಿಲ್ಲೆಗಳಲ್ಲಿ ಮೋಹರಂ ಹೆಜ್ಜೆಗಳಲ್ಲಿ ಕಾಣಬಹುದು.

ಶೇಲ. ಲಾಲಿ ನಾಡಬೇಕೂ ॥ಪ॥
ಮುಸ್ಲೀಮರ ಟೇಪೂ ಬಹಾದ್ದೂರನೋ
ಬ್ರಿಟಿಷರನು ಸಂಹಾರ ಮಾಡಿದನೋ
ಕರ್ನಾಟಕದ ಹುಲಿ ಅನಿಸಿದನೋ
ಉಕ್ಕಿನ ಅಂಗಿಯ ಧರಿಸಿದನೋ

ಸ್ವಾತಂತ್ರ್ಯದ ಶೂರ ಟೇಪುವಿನ ಬಗೆಗೆ ಹಾಡುಗಳನ್ನು ಕೇಳುತ್ತಿದ್ದಂತೆ ಆಂಗ್ಲರ ಮೇಲೆ ಸಹಜಸಿಟ್ಟು ಹುಟ್ಟುತ್ತದೆ. ನಮ್ಮ ಸ್ವಾತಂತ್ರ್ಯದ ಪರಿಕಲ್ಪನೆ ಹೆಚ್ಚುತ್ತದೆ. ನಮ್ಮ ಸ್ವಾತಂತ್ರ್ಯದ ಪರಿಕಲ್ಪನೆ ಹೆಚ್ಚುತ್ತದೆ.

ಇಡೀ ಕರ್ನಾಟಕದಲ್ಲಿ ವೀರ ಟೇಪುಸುಲ್ತಾನನ ಬಗೆಗೆ ತೋರಿದ ಪ್ರೇಮ ಕ್ರಾಂತಿ ವೀರ ಸಂಗೊಳ್ಳಿರಾಯಣ್ಣನ ಲಾವಣಿ ಹಾಡುಗಳು ಕೇಳುಗರನ್ನು ವೀರರನ್ನಾಗಿ ಮಾಡುತ್ತವೆ. ಅದೇ ರೀತಿ ರಾಷ್ಟ್ರೀಯತೆಯಲ್ಲಿ ಶೂರ ಸುಭಾಷಚಂದ್ರ ಭೋಸರ ಬಗೆಗೂ ಕೇಳಬರುತ್ತದೆ.

## ಸಂಗೊಳ್ಳಿರಾಯಣ್ಣ

ಶೂರ ಸಂಗೊಳ್ಳಿ ರಾಯಣ್ಣ ನಿಜ ಚರಿತ್ರೆ ದೊರಕುವುದು ಲಾವಣಿ ಸಾಹಿತ್ಯದಲ್ಲಿ ಎಂಬುದು ಖಚಿತವಾಗಿದೆ. ಈಗ ದೊರಕಿರುವ ಲಾವಣಿಗಳು ರಾಯಣ್ಣನ ಬಗೆಗೆ ರಾಯಣ್ಣನ ಸಮಕಾಲೀನ ಲಾವಣಿಕಾರರಾದ ೧) ಸಂಗವಳ್ಳಿ (ಸಂಗೊಳ್ಳಿ) ಮೋದಿನ ಸಾಬ, ೨) ಮಂಡಲ ಹೆಬ್ಬಳ್ಳಿಯ ಬಸವಕವಿ ೩) ನೇಸರಗಿಯ ಚೌಬಾರಿ ಅಡಿವೆಪ್ಪಗೌಡ ೪) ಸಂಗೊಳ್ಳಿಯ ಬಡಿಗ್ಯಾ ಮತ್ತು ಬೈಲಹೊಂಗಲದ ಶಾಹೀರ ಶ್ಯಾಮರಾವ ಇವರುಗಳಿಂದ ಎಂಬುದಾಗಿ ತಿಳಿದು ಬರುತ್ತದೆ. ಸ್ವಲ್ಪ ಕಾಲ ಸಮದಯ ನಂತರ (ರಾಯಣ್ಣನ ಕೊಲೆಯಾದ ಮೇಲೆ) ಬಹು ಜನ ಲಾವಣಿಕಾರರು ಬೇರೆ ಬೇರೆ ಪ್ರಸಂಗಗಳನ್ನು ರಚಿಸಿದ್ದಾರೆ. ಸಂಗವಳ್ಳಿಯ ಮೋದಿನ ಸಾಬ ತಿಳಿಸಿದ್ದು,

ಬೆಳಗಾವಿ ಜಿಲ್ಲಾ ಪೈಕಿ ಸಂಪಗಾವಿ ತಾಲೂಕಿನೊಳಗ
ಸಂಗವಳ್ಳಿ ಎಂಬ ಸಣ್ಣ ಹಳ್ಳಿ ಇತ್ತೋ ಹದ್ದಿನೊಳಗ
ತಾಯಿ ಕೆಂಚವ್ವನ ಹೊಟ್ಯಾಗ ಬೆಳೆದಾ ನೋ ರಾಯಣ್ಣಾಗ
ಭರಮಪ್ಪ ಎಂಬವ ತಂದಿ ಇದ್ದನವಗ
ರೋಗಣ್ಣವರ ರಾಯನೆಂದು ಹೆಸರು ಆದಾನು ದೇಶದ ಮ್ಯಾಗ
ಜಾತಿಯಿಂದ ರಾಯಣ್ಣ ತಾನು ಕುರುಬನಾಗಿದ್ದನಾಗ
ಸಂಗವಳ್ಳಿ ವಾಲೇಕಾರಕಿ ಆವರ ವಂಶಕ್ಕಾಗ,

ರಾಯಣ್ಣನಿಗೂ ಕುಲಕರ್ಣಿ ಬಾಳಪ್ಪನಿಗೂ ಹೊಲದ ಪಾಳಿಯ ಸಲುವಾಗಿ ತಂಟೆ–ತಕರಾರುಗಳು ಸುರುವಾದವು. ತಾಯಿ ಕೆಂಚಮ್ಮನನ್ನು ಕರೆಯಿಸಿ, ಹೊಲದ ಪಾಳಿಯ ಸಲುವಾಗಿ ಆಕೆಯ ಬೆನ್ನು ಮೇಲೆ ಅಗಸಿಯಲ್ಲಿ ಜನ ನೋಡುವಂತೆ ಕಲ್ಲು ಹೇರಿಸುತ್ತಾನೆ.

ಆಗ ರಾಯಣ್ಣನು ಊರಲ್ಲಿ ಇಲ್ಲದುದು ಕುಲಕರ್ಣಿಗೆ ಗೊತ್ತಾಗಿ, ಓಡಿಬಂದು ಕಲ್ಲನ್ನು ತೆಗೆದೊಗೆಯುತ್ತಾರೆ. ರಾಯಣ್ಣ ಊರಿಗೆ ಬಂದಾಗ, ಸಂಗತಿ ತಿಳಿದೊಡನೆ ಕುಲಕರ್ಣಿಯ ಮನೆಗೆ ಹೋಗಿ, ಅವನ ಚೆಂಡು ಕಡಿಯಲು ಗೊತ್ತಾದಾಗ, ಕುಲಕರ್ಣಿಯ ಹೆಂಡತಿ ತನ್ನ ಗಂಡನ ಪ್ರಾಣಭಿಕ್ಷೆ ಬೇಡುತ್ತಾಳೆ. ಕರುಣೆ ತೋರಿ ರಾಯಣ್ಣ ಮನೆಗೆ ಬರುತ್ತಾನೆ. ಮನೆಯಲ್ಲಿ ಅಡಗಿಕೊಂಡಿದ್ದ ಕುಲಕರ್ಣಿ ಮತ್ತೆ ತನ್ನ ಮೋಸತನ ಬೀಸಿ, ರಾಯಣ್ಣ ಬಂದಿತನಾಗುವಂತೆ ಮಾಡುತ್ತಾನೆ. ತನ್ನ ಸ್ವಾಭಿಮಾನಕ್ಕೆ ಪೆಟ್ಟುಬಿದ್ದ ರಾಯಣ್ಣನು ಬ್ರಿಟಿಷರಿಗೆ ಹೊಲ ಪಾಳೆ ಕೊಡುವುದನ್ನು ಪ್ರತಿಭಟಿಸುತ್ತಾನೆ. ಆ ಕಡೆಗೆ ಕಿತ್ತೂರ ಸಂಸ್ಥಾನಕ್ಕೆ ಪೀಡೆಯಾಗಿದ್ದ ಬ್ರಿಟಿಷರ ವಿರುದ್ಧ ಹೋರಾಡಲು ಸಜ್ಜಾಗುತ್ತಾನೆ. ಕಿತ್ತೂರಿನ ಮಲ್ಲಸರ್ಜ ಮಡಿದ ನಂತರ ಚಿಂತೆಯಲ್ಲಿದ್ದ ರಾಣಿ ಚೆನ್ನಮ್ಮನನ್ನು ಭೆಟ್ಟಿಯಾಗಿ ಆಂಗ್ಲರನ್ನು ದೂರ ಅಟ್ಟುವ ಹಟ ತೊಡುತ್ತಾನೆ. ಈ ಎಲ್ಲ ಪ್ರಸಂಗಗಳನ್ನು ಲಾವಣಿಕಾರರು ರಸವತ್ತಾಗಿ ಬರೆಯುತ್ತಾರೆ.

ಸಂಗೊಳ್ಳಿ ರಾಯಣ್ಣನಲ್ಲಿರುವ ಸ್ವಾತಂತ್ರ್ಯದ ಪರಿಕಲ್ಪನೆ ಅವನ ಹೋರಾಟದಿಂದ ಹೊರ ರೂಪ ಪಡೆಯುತ್ತದೆ. ಕಕ್ಕೇರಿ ಬಿಷವ್ವನಲ್ಲಿರುವ ಭಕ್ತಿ ಹಂಡಿ ಬಡಗ ನಾಥನಲ್ಲಿರುವ ನಿಷ್ಠೆ, ಗೆಳೆಯ ಅಮಟೂರ ಬಾಳಪ್ಪ, ಬಿಚ್ಚುಗತ್ತಿ ಚನಬಸಪ್ಪ, ಒಡ್ಡಯಲ್ಲಮ್ಮ, ಹಬಸಿ ಮುಂತಾದ ವೀರರು ಕೂಡಿ, ಸೈನ್ಯ ಕೂಡಹಾಕಿ ಯುದ್ಧತಂತ್ರ ನಡೆಯಿಸಿತ್ತು ಸ್ವಾತಂತ್ರ್ಯದ ಅಭಿಮಾನದ ಧ್ಯೋತಕವಾಗುತ್ತದೆ.

ಅನೇಕ ಸಲ ಆಂಗ್ಲರ ಸಿಪಾಯಿಗಳು ಸಾವನ್ನಪ್ಪುತ್ತಾರೆ. ರಾಯಣ್ಣನನ್ನು ಹಿಡಿಯುವ ತಂತ್ರ ಮುಂದೊರೆಯುತ್ತದೆ. ಆದರೂ ಅವನಾಗಲಿ ಅವನ ಗೆಳೆಯರಾಗಲೀ ಬ್ರಿಟಿಷ ಸಿಪಾಯಿಗಳಿಗೆ ದೊರಕುವುದಿಲ್ಲ! ಬ್ರಿಟಿಷರನ್ನು ಕಿತ್ತೂರ ಸಂಸ್ಥಾನದ ಗೊಡವೆಗೆ ಬರದಂತೆ ಮಾಡುವುದೊಂದೇ ಗುರಿಯಾಗಿತ್ತು.

ಕಿತ್ತೂರಿನಿಂದ ವೀರರ ಪಡೆ ಒಕ್ಕಟ್ಟನ್ನು ಪಡೆಯಿತು. ರಾಣಿ ಚೆನ್ನಮ್ಮ ವೀರರಿಗೆಲ್ಲ ಚೇತನವಾಗಿ ತಾಯಿಯಾಗಿ ಕಂಡಳು. ಕಿತ್ತೂರಿನ ವೀರರ ಹೋರಾಟಗಳನ್ನು ರಾಣಿ ಚೆನ್ನಮ್ಮ ತಿಳಿದುಕೊಳ್ಳುತ್ತಿದ್ದಳು.

ಇಂಗ್ಲಿಷರ ದಂಡಿಗೆ ರಾಯಣ್ಣ ತಾನೆಂದೂ ಮಣಿಯಲಿಲ್ಲ, ತಾನು ಒಂದುಕಡೆ ಇದ್ದಂತೆ ತೋರಿ, ಮತ್ತೊಂದೆಡೆಗೆ ಹಿಂದಿನಿಂದ ಬಂದು ವೈರಿಗಳನ್ನು ಸಂಹರಿಸುವ ಇನ್ನೊಂದು ಪ್ರಸಂಗವನ್ನು ಇಲ್ಲಿ ಕಾಣಬಹುದು. ಲಾವಣಿಕಾರನಾದ ಶಾಹೀರ ಶ್ಯಾಮರಾವ ಹೇಳಿದುದು ಇಲ್ಲಿ ಸಾಕ್ಷಿಯಾಗಿದೆ.

ಬಹಾದ್ದೂರ ಇಂಗ್ಲಿಷರ ದಂಡು ಬಂದಿತೊಲಗುಬಗಿ
ಕೇಪಬಾಳಿಗುಂದಿ ಹಾಕ್ಯರೋ ಮುತ್ತಗಿ

ಆದರ ಸೂಚನ ಮುಟ್ಟಿತೋ ರಾಯಣ್ಣಾ ಹೋಗಿ
ಆವನ ಕಲ್ಪನಾ ತಿಳಿಯಬಾರಕ ಇಲ್ಲಿಯಾರ್ಯಾರಿಗಿ
ಗುಡ್ಡದೊಳಗ ಇರುವಂತಹ ಗಿಡಗೆಂಟೆಗಳನ್ನೆಲ್ಲಾ
ಮಂಡಮಾಡಿ ಅರವಿಸುತ್ತಿ ಹಚ್ಚಾರೋ ಬ್ಯಾಗಿ
ರಾಯಣ್ಣನ ದಂಡು ಇಲ್ಲೇ ಐತಿ, ಮಾಡತೈತಿ ಅನ್ನ-ಅಡುಗಿ
ಉರಿಯ ನೋಡಿ ಭ್ರಮಾ ಆಗಿ, ಇಂಗ್ರೇಜರ ಬಿಗಿಲ್ ಮಾಡಿ
ಬಂದಾರೋ ಲಗುಬಗಿ ಗುರಿಯ ಹೂಡಿ ಹೊಡೆಧಾರೋ
ಕತ್ತಲ ಕವದಿತು ಆಗ ತುಂಬಿ ಹೋಗಿ
ಕೂಗ ಹೊಡೆದೋ ರಾಯಣ್ಣಾ ಆವನ ದಂಡು ಬಂತೋವರ‍್ಯಾಗಿ
ಎಳ ಎಳದ ಕೊಂದಾರಣ್ಣಾ ಇಂಗ್ರೇಜಿಯವರನ್ನಾ
ತುಳ ತುಳದ ಒಬ್ಬೊಬ್ಬರನ್ನಾ ಹೊರ ಹೊರಳಿಸಿ ತರದಾರೋ
ನಿತ್ತ ಚಿತ್ತರ ಬಲ್ಲಾಂಗ ಕತ್ತಿಲಿ ರಾಯಣ್ಣಾ ಕಡದಾನೋ
ಸತ್ತ ಬಿದ್ದಾವ ಹೆಣಾ ರಕ್ತ ಹರಿದಿತೋ ಧರಿಗಿ
ಸುತ್ತ ಗಟ್ಟಿ ಹೊಡೆದಾರೊ ಒಬ್ಬರು ಹೋಗಿಲಿಲ್ಲ ತಿರುಗಿ."

ಸಂಗೊಳ್ಳಿ ರಾಯಣ್ಣನ ಬಲ ಹೆಚ್ಚುತ್ತದೆ. ಬ್ರಿಟಿಷರ ವಿರುದ್ಧ ಎಲ್ಲ ಕಡೆಗೂ (ಗ್ರಾಮ-ಪಟ್ಟಣದ ಜನತೆಗೆ) ರಾಯಣ್ಣನ ಪ್ರೀತಿ-ಹೆಚ್ಚುತ್ತದೆ. ಹೋರಾಟ ಉಗ್ರರೂಪ ತಾಳುತ್ತದೆ. ಕಿತ್ತೂರ ಕ್ರಾಂತಿ ಎಂಬ ಕೂಗು ಮೊಳಗುತ್ತದೆ. ಬ್ರಿಟಿಷರಿಗೆ ಆಪತ್ತು ಕಾಯ್ದು ಕುಳಿತು, ಭಯ ಹಬ್ಬುತ್ತದೆ.

ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ' ಕೃತಿಯು ಇಡೀ ರಾಯಣ್ಣನ ಹೋರಾಟ ಹಾಗೂ ಕಿತ್ತೂರಿನ ಕ್ರಾಂತಿಯ ನಿಜ ಇತಿಹಾಸವನ್ನು ನೀಡುತ್ತದೆ. ಇನ್ನು ಹಾಗೇ ಜನಪದ ಹಾಡುಗಳು ಈ ಬಗೆಗೆ ದೊರಕುತ್ತಲೇ ಇವೆ ಸ್ವಾತಂತ್ರ್ಯದ ಹೋರಾಟದ ನಾಂದಿ ಸಿಪಾಯಿಗಳ ಬಂಡಾಯವೆಂದು ಕರೆದ ಝಾಂಸಿ ರಾಣಿ ಲಕ್ಷ್ಮೀಬಾಯಿಯ ಹೋರಾಟಕಿಂತಲೂ ಮೂರು ದಶಕ ಮೊದಲು ಕನ್ನಡ ನೆಲದಲ್ಲಿ ನಡೆಯಿತು ಎಂಬುದನ್ನು ಕನ್ನಡದ ಜನತೆ-ಭಾರತೀಯರು ತಿಳಿಯುವಂತಹದಾಗಿದೆ. ಸಂಗೊಳ್ಳಿ ರಾಯಣ್ಣನು ಬ್ರಿಟಿಷರ ಮೊಸಕ್ಕೆ ಬಲಿಯಾದನು. ಮೊಸಗಾರರಾದ ಬ್ರಿಟಿಷರನ್ನು ಭಾರತದಿಂದ ಹೊರಹಬ್ಬಲು, ತಮ್ಮ ಸ್ವಾತಂತ್ರ್ಯದ ಕಲ್ಪನೆಯನ್ನು ಜನ ಆಗಲೇ ಗೊತ್ತು ಮಾಡುತ್ತಾ ಬಂದಿತು.

ಕಿತ್ತೂರಿನ ರಾಣಿ ಚೆನ್ನಮ್ಮನ ಬಗೆಗೂ ಅನೇಕ ಬಗೆಯ ವೀರವತ್ತಾದ ಜನಪದ ಹಾಡುಗಳು ಜನತೆಗೆ ಉತ್ತೇಜನವನ್ನು ನೀಡಿವೆ ಕಿತ್ತೂರಿನ ಸಂಸ್ಥಾನವು ಒಂದು ಸ್ವತಂತ್ರವಾದಿ ಸಣ್ಣ ರಾಜ್ಯವೇ ಆಗಿ ಆಳಲ್ಪಟ್ಟು ಜನ ಸುಖ-ಶಾಂತಿಗಳಿಂದಿದ್ದರು. ಈ ಸಂಸ್ಥಾನದ ರಕ್ಷಣೆಗಾಗಿ ೧೨ ಸಾವಿರ ಸೈನ್ಯವಿತ್ತು, ಅವಶ್ಯಬಿದ್ದಾಗ ಹಳ್ಳಿಯ ಓಲೆಕಾರರನ್ನು ಕರೆಯಿಸಿಕೊಂಡು ಈ ಸಂಖ್ಯೆ ಹೆಚ್ಚಿಸಿಕೊಳ್ಳುತ್ತಿತ್ತು. ಪ್ರತಿಯೊಬ್ಬ ಓಲೆಕಾರನಿಗೂ ಕತ್ತಿ, ಢಾಲು, ಭಾಲೆ, ಪಟ್ಟಾಗಳ ಉಪಯೋಗ ತಿಳಿದಿರುತ್ತಿತ್ತು. ಯುದ್ಧದ ಉಪಯೋಗಕ್ಕಾಗಿ ಅರವತ್ತು

ತೋಪಗಳಿದ್ದವು. ಅಂತೆಯೇ ಸಮಕಾಲೀನ ಕವಿ ಚಾಬಾರಿ ಅಡಿವೆಪ್ಪಗೌಡರು ತನ್ನ ಕವಿತೆಗಳಲ್ಲಿ ಕೆಳಗಿನಂತೆ ವರ್ಣಿಸಿದ್ದಾನೆ.

ಚೆಪ್ಪನ್ನ ದೇಶಕೆ ಒಪ್ಪುವ ಕಿತ್ತೂರು-ಅಪ್ಪಮಲ್ಲಸರ್ಜಾನ ದೊರಿತಾನೋ
ಮುತ್ತಿನ ಪಲ್ಲಕ್ಕಿಯ ಸುತ್ತಗಟ್ಟಿ ಹಿಡಿದ ಅಪ್ತಗಿರಿ
ಒತ್ತಿ ಮುಂಡಾಸ ಸುತ್ತು ವಂತಹಬಂಟರು ಬೇರೆ ಬರೇ
ಬತ್ತಲಗುದುರೆಯ ಹತ್ತುವಂತಹಭಂಟರು ಬೇರೆಬೇರೆ
ಬತ್ತಲಗುದುರೆಯ ಹತ್ತುವಂಥಾ ಬಾರಿನ ಮಂದಿ ಐತೋಬಹಳ

ಜನಪದ ಕೋಲು ಪದಗಳಲ್ಲಿ ತ್ರಿಪದಿಗಳಲ್ಲಿ, ಹೋಳಿ ಹಾಡುಗಳಲ್ಲಿ ಹಂತಿ. ಬಲೋರಿ ಹಾಡುಗಳಲ್ಲಿ ರಾಣಿ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ರಾಯಣ್ಣನ ಸೈನ್ಯ ಸಾಹಸಗಳು, ಆಂಗ್ಲರ ಮೋಸತನ ಇತ್ಯಾದಿಗಳೆಲ್ಲ ವರ್ಣಿತವಾಗಿವೆ. ಈಗಲೂ ಜನತೆಗೆ ಸ್ಫೂರ್ತಿಯನ್ನು ನೀಡುತ್ತಿವೆ.

ಕಿತ್ತೂರಿನ ಬಂಡಾಯದ ಪರಿಸರದಂತೆ. ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಹಲಗಲಿ ಬೇಡರ ಲಾವಣಿ, ಮಂಜರಗಿ ಭೀಮರಾಯನ ಬಂಡಾಯ, ನರಗುಂದದ ಕ್ರಾಂತಿವೀರ ಬಾಬಾ ಸಾಹೇಬನ ಲಾವಣಿ (ನರಗುಂದ ಬಂಡಾಯ) ಸ್ವಾತಂತ್ರ್ಯದ ಪೂರ್ವದಕಾಲದಲ್ಲಿ ಜನಪದರ ನಾಲಿಗೆಯಿಂದ ನಾಲಿಗೆಗೆ ಹರಿದು, ಸ್ವಾತಂತ್ರ್ಯದ ಪರಿಕಲ್ಪನೆಗೆ ಹದ ನೀಡಿದುದು ನಮಗೆಲ್ಲ ಸಾಕ್ಷಿಯಾಗಿವೆ.

ಹಲಗಲಿಯ ಬೇಡರು ಜಡಗಾ-ಬಾಲಾರ ಮುಖ್ಯತ್ವದಲ್ಲಿ ತಮ್ಮ ಹೋರಾಟವನ್ನು ನರಗುಂದದ ಬಾಬಾಸಾಹೇಬ ಮತ್ತು ಮಂಡರಿಗಿ ಭೀಮರಾಯ ನಡೆಯಿಸಿದ ಹೋರಾಟ ತಮ್ಮ ಸ್ವತಂತ್ರ ಉಳಿಸಿಕೊಳ್ಳುವುದಕ್ಕಾಗಿ ನಡೆದರೂ ಅದು ಬ್ರಿಟಿಷರು ವಿರುದ್ಧವಾಗಿತ್ತು. ಜನತೆಗೆ ಬ್ರಿಟಿಷರು ಬೇಡವಾಗಿದ್ದರು. ಅವರು ಭಾರತದಲ್ಲಿ ಇರುವುದು ಸಹಬೇಕಾಗಿರಲಿಲ್ಲ.

ಹತ್ತೊಂಬತ್ತನೆಯ ಶತಮಾನದ ಪ್ರಾರಂಭವು, ಹದಿನೆಂಟನೆಯ ಶತಮಾನದ ಭಾರತ ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿಯನ್ನು ಗುರುತಿಸಿಕೊಂಡೇ ಸ್ವಾತಂತ್ರ್ಯದ ಅರುಣೋದಯದ ಕಾಲದ ಸ್ಪಷ್ಟತೆಯನನು ತೋರುತ್ತದೆ.

ಕ್ರಿ.ಶ. ೧೮೮೫ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನವು ಬುದ್ಧಿಜೀವಿಗಳಿಗೆ ಸ್ವಾತಂತ್ರ್ಯದ ಪರಿಕಲ್ಪನೆ ಸ್ಪಷ್ಟತೆಯನ್ನು ತೋರುತ್ತದೆ.

ಜನಪದ ಕವಿಗಳಾದ ತತ್ವದ ಪದಕಾರರರು ಅಲ್ಲಲ್ಲಿ ಹಾಡಿಕೊಂಡಿದ್ದುಂಟು.

ಗೋಕಾವಿಯ ಸಾತು-ಶ್ಯಾಮಣ್ಣ (೧೮೯೦-೧೯೬೨) ಭಾರತ ಧ್ವಜದ ಪರಿಕಲ್ಪನೆಯ ಹಾಡು ಉತ್ತರ ಕರ್ನಾಟಕದಲ್ಲಿ ಬಹು ಪ್ರಸಿದ್ಧಿ ಪಡೆದಿತ್ತು.

ಬೆಳಗಾವಿಯ ಬಸವನ ಕುಡಚಿಯ ಮಲ್ಲಪ್ಪ (೧೮೮೦-೧೯೬೭) ಭಾರತ ಮಾತೆಯ ಪರಿಕಲ್ಪನೆಯ ಲಾವಣಿಯ ಜನತೆಗೆ ಚೇತೋಹಾರಿಯಾಗಿತ್ತು. ಕುವೆಂಪು ಅವರ ನೂರು ದೇವರು ನೂಕಾಚೆದೂರಾ ಭಾರತಮಾತೆಯೋರ್ವಳೆ ದೇವಿ ಪೂಜಿಸುವ ಬಾರಾ' ಎಂಬಂತೆ ರಾಷ್ಟ್ರನಿಷ್ಠೆಯನ್ನು ತೋರುವಂತಹದು.

ಬನ್ನಿ ನಮ್ಮ ತಾಯಿ ಭಾರತಿ
ಆಕೆಗೆ ನೀಡಿರಿ ನಮ್ಮ ಆರತಿ

ಎಂಬ ಪಲ್ಲದೊಂದಿಗೆ ಸುರುವಾಗುವ ಹಾಡು ಸರ್ವರಿಗೂ ಚೇತನ ನೀಡುವಂತಹದು

ಮಮದಾಪೂರದ ಮಾರುತೆಪ್ಪ (೧೮೮೦-೧೯೫೦) ಮಹಾತ್ಮ ಗಾಂಧೀಜಿಯವರ ವ್ಯಕ್ತಿತ್ವವನ್ನು ಭಾರತಮಾತೆಯ ಹಿರಿಯ ಸುಪುತ್ರರೆಂದು ಹಾಡುವ ಮಹಾತ್ಮಾ ಗಾಂಧೀಜಿ ಲಾವಣಿ ಸರ್ವವಿಧದಲ್ಲೂ ಶ್ರೇಷ್ಠತಮವಾದುದು.

ಬೆಳಗಾವಿಯ ಕವಿದ್ವಾರಪಾಲನು ಯುರೋಪಖಂಡದ ಪ್ರಥಮ ಮಹಾಯುದ್ಧದ ಲಾವಣಿಯೊಂದನ್ನು ಬರೆದಿರುವನು. ಇದು ಅತ್ಯಂತ ಪ್ರಚಲಿತವಾದ ಲಾವಣಿಯಾಗಿದೆ ಪ್ರಥಮ ಮಹಾಯುದ್ಧ (೧೯೧೪-೧೯೧೮) ಎಂತೆಂದಹ ಮಹಾಕವಿಗಲೂ ಹಾಡದೆ ಮರೆತು ಬಿಟ್ಟ ಒಂದು ಮಹಾ ಐತಿಹಾಸಿಕ ಘಟನೆಯನ್ನು ತೆಗೆದುಕೊಂಡು, ಒಬ್ಬ ಸಾಮಾನ್ಯ ಕವಿ ಹಾಡು ಕಟ್ಟಿ ಬರೆದಿಟ್ಟುದುದು ಆಶ್ಚರ್ಯದ ಸಂಗತಿಯಾಗಿದೆ.

ಆದಿನಾಥ ನಿನ್ನ ಪಾದಾರವಿಂದಕೆ
ಸದಾ ನನ್ನ ಶಿರಸಾ ಸದಾ ನನ್ನ ಶಿರಸಾ।
ಚಾಚಿ ಬೇಡುವೆನು ಬೇಸಾ।

ಹೀಗೆ ಪ್ರಾರಂಭವಾಗುತ್ತದೆ ಈ ಹಾಡು. ಅಲ್ಲಿ ಸರಸ್ವತಿಯ ಪ್ರಾರ್ಥನೆಯೂ ನಡೆಯುತ್ತದೆ.

ಕಾಮದೇನು ಕಲ್ಪವೃಕ್ಷ ನೀ
ಸಮಾಜಕ್ಕೆ ಪರಮ ಪವಿತ್ರ ಜನನೀ
ವಿದ್ಯಾದಾಯಿ ಬುದ್ಧಿವಂತಿ
ಸದ್ಯ ನಡೆದ ಯುದ್ಧದ ಪದಾ
ಶುದ್ಧವಾಗಿ ಸಿದ್ಧ ಪಡಿಸು
ಪಾದ ಪದ್ಮ ಮುದದಿ ಪೂಜಿಪೆ।

ಬಳಿಕ ಯುರೋಪ ಖಂಡದ ಸ್ಥಿತಿಗತಿಯನ್ನು ಕವಿ ವಿವರಿಸುತ್ತಾನೆ.

ರತ್ನಮಯಿ ಯುರೋಪವು
ಕತ್ತಲಿಯಾಯ್ತು ಕರ್ಮದಿಂದ

.............................................
ಜರ್ಮನ ತುರ್ಕಿ ಆಸ್ಟ್ರಿಯಾ ಬಲ್ಗೇರಿಯಾ
ಒತ್ತಟ್ಟಾಗಿ ನಿಂತಾರೋ ಹಿಡಿದ ಗುರಿಯಾ।
ಇಂಗ್ಲಂಡ ಇಟಾಲಿ ಫ್ರಾನ್ಸ್ ರಶಿಯಾ ಸರ್ವಿಯಾ
ಅವರೋಳಗೆ ಕೂಡಿದಾರೊ ಬೆಲ್ಜಿಯಮ್ ರುಮಾನಿಯಾ

ಯುದ್ಧದಲ್ಲಿ ಕಲಿಯಾಗಿ ಕಾಯುವುದು ಲೇಸು ಎಂಬುದಕ್ಕೆ ಕವಿಯ ಊಹೆಯನ್ನು ನೋಡಬೇಕು.

ಹೆಣ್ಣಾನಾಂಗ ಸೀರೆ ಉಟ್ಟು
ಕೋಣೆವಳಗ ಕುಳಿತುಕೊಂಡು
ಬಣ್ಣದ ಮಾತ ಹೇಳಿದರ ಅಲ್ಲ ಶೂರಾ।
ತಿಂದ ತಿಂದ ಹಾಲ್ಮಸರಾ।
ಹೆಣಗಳು ಮ್ಯಾಲ ನಿಂತು
ರಣ ಜಯಿಸಿ ಬರುವಂಥಾ
ಜಾಣಗ ದೊರಕುವುದು ಛತ್ರ ಚಾಮರಾ।
ಚತುರಂಗ ದಳ ಧಾರಾ।

ಇದೇ ಲಾವಣಿಯಲ್ಲಿ ಯುದ್ಧ ಭೂಮಿಯ ವರ್ಣನೆಯೂ ಇದೆ.

ಹೆಣಗಳು ಬಿದ್ದಾವ್ವೋ ಅಲ್ಲಿ
ಎಷ್ಟು ತಿಂದಾವ್ವೋ ಕಾಗಿ-ನಾಯಿ ಹದ್ದು
.............................................
ಯುರೋಪ ಖಂಡಕೆ ಬಂದಿತು ಹೆಣಗಲು ಪೂರ
ಅಲ್ಲಿ ಮಡಿದಾರ ದೊಡ್ಡ ದೊಡ್ಡ ಶೂರ ಸರದಾರಾ
ಜಗತ್ತಿನಾದ್ಯಂತ ದುಃಖ ಉಕ್ಕಿತು. ಭಾರತಕ್ಕೂ ಬಿಸಿ
ತಟ್ಟಿತು. ಇಂಗ್ಲಿಷರ ದಂಡಿನಲ್ಲಿ ಭಾರತೀಯರು ಮಡಿದರು

ಭಾರತದ ಜನತೆಗೂ ಎಚ್ಚರ ಎಚ್ಚರ ಮೂಡಿತು. ನಷ್ಟದ ಬಗೆಗೆ ಲಾವಣಿಕಾರನು ತಿಳಿಸುವ ಬಗೆ

ವಿಮಾನ ತೆಗದಾರೋ ಉತ್ಕಷ್ಟಾ
ಆಕಾಶದಿಂದ ಬರತಾರೋ ಹೊಂಟಾ।
ಬಾಂಬ ಗುಂಡಗಳ ಚೆಲ್ಲಿ ವೈರಿಯ ಮೇಲೆ
ಜರ್ಮನಿ ಮಾಡ್ಯಾನೋ ತುಡುಗ ಹಲ್ಲೆ।
ಸಂಯುಕ್ತ ಸೈನ್ಯ ಒಳೆ ನೀ ಸಿಟ್ಟಾ
ಗುಂಡು ಹೊಡೆದ ಮಾಡ್ಯಾರೋ ಸಿಟ್ಟಾ
ತುಕುಡಿ ತುಕುಡಿಯಾಗಿ ಬಿದ್ದಾರೋ ಕೆಳಗೆ

ಉಳಿಲಿಲ್ಲ ಎಲುವು ಎಳ್ಳಷ್ಟು ಆಗ
ಪುರ ಪಟ್ಟಣ ಆಗ್ಯಾವ ನಷ್ಟಾ
ಸಾಧು ಮಂದಿ ಹೊಂಟಾರೋ ದೇಶಬಿಟ್ಟ!
ಘನ ದುಃಖ ತುಂಬಿ ತುಳುಕಿತ್ತ ಎಲ್ಲೆಲ್ಲಿ
ನೆನಸ್ಯಾರೊ ದವರಲ್ಲಿ ಧ್ಯಾನಿಟ್ಟು ಅಲ್ಲಿ!

ಈ ಅವಧಿಯಲ್ಲಿ ಅನೇಕ ವೀರರ ಜನಪದ ಗೀತಗಳನ್ನು ಅಲ್ಲಲ್ಲಿ ಕಾಣುತ್ತೇವೆ. ಭಾರತಕ್ಕೆ ಸ್ವಾತಂತ್ರ್ಯದ ಬರುವಿಕೆಯ ಪೂರ್ವದಲ್ಲಿ ವೀರರು ಹೆಸರುವಾಸಿಗಳಾದರು. ಅವರಲ್ಲಿ ಸಿಂಧೂರ ಲಕ್ಷ್ಮಣನೂ ಒಬ್ಬನಾಗಿದ್ದಾನೆ. ಉತ್ತರ ಕರ್ನಾಟಕದಲ್ಲಿ ಅವನು ಜನತೆಗೆ ಸ್ಫೂರ್ತಿ ನೀಡಿದ ವ್ಯಕ್ತಿ ಮತ್ತು ಶಕ್ತಿಯಾಗಿದ್ದಾನೆ. ಜತ್ತಿ-ಉಮರಾಣಿ ಸಂಸ್ಥಾನದಲ್ಲಿ ಸಿಂಧೂರ ಲಕ್ಷ್ಮಣ ವೀರಶ್ರೀ ಹರಡಿ ಇಡೀ ಕರ್ನಾಟಕಕ್ಕೂ ಮುಟ್ಟಿಯಾಯಿತು. ಅವನ ವ್ಯಕ್ತಿತ್ವ ತಿಳಿಸುವ ಪರಿಯ ಹಾಡು.

ಪಾಂಡವರೊಳಗೆ ಇದ್ದಾಂಗೋ ಭೀಮಾ
ಚೆಲುವ ಚಂದ್ರಾನು ಥೇಟ ಹೋಳಿಕಾಮಾ ರೂಪದಲ್ಲಿ ದೌಲಾ
ಎಂಥಾ ತಾಯಿ ಹೊಟ್ಟೇಲಿ ಹುಟ್ಟಿದಾನೋ ಪ್ರಭಲಾ

ಸಿಂಧೂರ ಲಕ್ಷ್ಮಣನ ಹೋರಾಟದ ವೀರಶ್ರೀ ಯನ್ನು ಜನ ಮೆಚ್ಚಿತ್ತು.

ಹುಟ್ಟಬೇಕು ಲಕ್ಷ್ಮಣ ನಂಥವರಾ
ಭಪ್ಪರೆ ಮಗಾ ಬಹಾದ್ದೂರಾ!

ಈ ಲಾವಣಿಯೆ ಆಧಾರ ಹಾಗೂ ಲಕ್ಷ್ಮಣನ ಜೀವನ ವೃತ್ತಾಂತ ಕುರಿತು ಆಧುನಿಕ ಕವಿಯೊಬ್ಬರು ಮಹಾಕಾವ್ಯವನ್ನು ಬರೆದರು. ಬಿಡುಗಡೆ ಮಾಡಿದರು. ಎಂಬ ಸಂದೇಶ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ.

ಕಟ್ಟಿ ಚೆನ್ನನ ಬಗೆಗಿನ ಲಾವಣಿ, ಬೆಳಗಾವಿಯ ಪವಣಂಜೆಯ ಲಾವಣಿ ಕ್ರಿ.ಶ. ೧೯೨೦ರ ಸುಮಾರಿಗೆ ಜನತೆಗೆ ವೀರೋಚಿತವಾಗಿ ತೋರಿವೆ.

ಲಾವಣಿಗಳನ್ನು ಯಾರು ಬೇಕಾದರೂ ಹಾಡಬಹುದು. ಜನಪದ ಎಲ್ಲೆಗಟ್ಟಿಲ್ಲ, ಉತ್ತರ ಕರ್ನಾಟಕದಲ್ಲಿ ಕೀರ್ತನಕಾರರರೂ ಜನಪದ ವೃತ್ತಿದಾಯಕರಾದ ಗೊಂದಲಿಗರು ಲಾವಣಿಗಳನ್ನು ಪ್ರಚಾರ ಮಾಡುವಲ್ಲಿ ಬಹುದೊಡ್ಡ ಪಾತ್ರವನ್ನು ನಿರ್ವಹಿಸಿದ್ದಾರೆ. ಗೊಂದಲಿಗರಲ್ಲಿ ಲಾವಣಿಗಳು ಒಮ್ಮೊಮ್ಮೆ ನಾಟಕೀಯವಾಗಿಯೂ ಪ್ರದರ್ಶನ ಗೊಂಡುದುದುಂಟು. ಧಾರವಾಡ ಜಿಲ್ಲೆಯ ರಾಣೆಬೆನ್ನೂರು ಒಂದು ತಾಲ್ಲೂಕು ಸ್ಥಳವಾಗಿದ್ದು. ಅಲ್ಲಿ ೧೮೪೫ರಲ್ಲಿ ಜನಿಸಿದ ರಾಣೆ ಬೆನ್ನೂರಿನ ಸಮ್ಮದ ಸಾಹೇಬ ನೂರಾರು ಲಾವಣಿಗಳನ್ನು ಬರೆದು ಪ್ರಸಿದ್ಧವಾಗಿದ್ದಾನೆ. ಇಸ್ಲಾಂ ಧರ್ಮವನ್ನು ಪಾಲಿಸಿದರೂ, ಭಾರತೀಯ

ಮುಸಲ್ಮಾನನೆಂದೂ ಕನ್ನಡಿಗನೆಂದೂ ಅಭಿಮಾನದಿಂದ ತಿಳಿಸಿದ್ದಾನೆ. ಕೆಲವು ಮೋಹರಂ ಹಾಡುಗಳನ್ನು ರಚಿಸಿದ್ದಾನೆ. ಮೋಹರಂ ತಿಥಿಯಲ್ಲಿ ಭಾರತದ ಬಗೆಗೆ ಸ್ವಾತಂತ್ರ್ಯದ ಬಗೆಗೆ ಸ್ವಾತಂತ್ರ್ಯಯೋಧರ ಬಗೆಗೂ ಹಾಡಿಕೊಂಡಿದ್ದಾನೆ. ಮೈಲಾರ ಮಹಾದೇವಪ್ಪ ಮತ್ತು ವಾಲಿ ಚೆನ್ನಪ್ಪ ಅವರನ್ನು ಕುರಿತು ಹಾಡಿಕೊಂಡ ಲಾವಣಿಗಳು ತುಂಬಾ ಮಹತ್ವದವುಗಳಾಗಿವೆ.

ಬೆಳಗಾವಿ ಹುಲಕುಂದದ ಶಿವಲಿಂಗ ಕವಿಯು (೧೮೯೦-೧೯೫೫) ಸಾವಿರಾರು ಲಾವಣಿಗಲನ್ನು ರಚಿಸಿದ್ದಾನೆ. ನಾನು ಅನೇಕ ಅವರ ಲಾವಣಿಗಲನ್ನು ಸಂಗ್ರಹಿಸಿದ್ದೇನೆ. ಲಾವಣಿಗಳನ್ನು ಗೀಗೀ ಪದಗಳನ್ನಾಗಿ ಹಾಡುತ್ತಿದ್ದಾರೆ. ಹುಲುಕುಂದ ಶಿವಲಿಂಗಸ್ವಾಮಿ ರಚಿತ ಕನ್ನಡ ಗೀಗೀ ಪದಗಳು ಎಂಬ ಕೃತಿಯನ್ನು ದುಂಡಿರಾಜ ಲಿಮಯೆ ಎಂಬುರರು ಪ್ರಕಟಿಸಿದ್ದಾರೆ. ಈ ಕೃತಿಗೆ ಪ್ರಸ್ತಾವನೆಯನ್ನು ನಾನು ಬರೆದಿರುವೆನು. ಶ್ರೀ ಲಿಮಯ್ಯೆ ಅವರು ಶಿವಲಿಂಗ ಕವಿಯ ಶಿಷ್ಯರಾಗಿದ್ದರು. ಶಿವಲಿಂಗ ಸ್ವಾಮಿಯವರು ದೇಶಬಕ್ತಿ ರಾಷ್ಟ್ರನಾಯಕರು ಮಹಾತ್ಮಾಗಾಂಧೀಜಿ, ಸಾಮಾಜಿಕ ರೀತಿ ನೀತಿ, ಖಾದಿಯ ಮಹತ್ವ ಕುಟುಂಬ ಪ್ರೇಮ ಇತ್ಯಾದಿ ವಿಷಯಗಳ ಕುರಿತಾಗಿ ಬರೆದಿದ್ದಾರೆ. ನೂರಾರು ಶಿಷ್ಯ ಬಳಗ ಕಟ್ಟಿ ಅವುಗಳನ್ನು ಪ್ರಚಾರ ಮಾಡಿದ್ದಾರೆ. ಆಡು ಮುಟ್ಟದ ಗಿಡವೇ ಇಲ್ಲಯ ಎನ್ನುವಂತೆ ಶಿವಲಿಂಗ ಸ್ವಾಮಿಯವರು ಬರೆಯದ ವಿಷಯವೇ ಇಲ್ಲ ಎಂದು ಶ್ರೀ ಲಿಮಯೆ ತಮ್ಮ ಗುರುವಿನ ಪರಿಚಯದಲ್ಲಿ ತಿಳಿಸಿದ್ದಾರೆ. ಮರಾಠಿಯ ಪೋವಾಡಗಳನ್ನು ಹಾಡುವ ಪ್ರಸಿದ್ಧ ಗಾಯಕರಾಗಿದ್ದರು. ಅದೇ ರೀತಿ ಕನ್ನಡ ಲಾವಣಿಗಳನ್ನು ಹಾಡುತ್ತಿದ್ದರು. ೫-೬ ಸಲ ನನ್ನೊಡನೆ ನಾನು ಅವರೊಡನೆ ಚರ್ಚೆಗೆ ಇಳಿದಿದ್ದೆವು. ಈಗ ನಮ್ಮೊಡನೆ ಇದ್ದು ಇಲ್ಲಿ ಗೌರವ ಪಡೆಯುತ್ತಿರುವ ಶ್ರೀಮತಿ ಫಕೀರವ್ವ ಗುಡಿಸಾಗರ ಶಿವಲಿಂಗ ಕವಿಯ ಶಿಷ್ಯಳು ಎಂಬ ಹೆಮ್ಮೆಯನ್ನು ತಿಳಿಯಸಾಗುವುದು ಸವದತ್ತಿ ತಾಲೂಕಿನ ಚಿಕ್ಕುಂಬಿಯಲ್ಲಿ ಲಾವಣಿ ಗೀಗೀಕಾರರ ಮೇಳಗಳ ಸಾಲಿಯನ್ನೇ ತೆರೆದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಕವಿಯು ರಚಿಸಿ ಹಾಡಿಸಿದ ನಾಡಿಗೆ ಸಲ್ಲಿಸಿದ ಸೇವೆ ಅಪಾರವಾದುದು.

ಶಿವಲಿಂಗಕವಿಯ ಭಾರತ ಮಾತೆಯ ಸ್ತುತಿ ಹಾಡಿನ ಸಖಿ ಪದವನ್ನು ತಿಳಿಯುವುದವಶ್ಯ

ಭಾರತಮಾತಾ ನಿನ್ನ ಪಾದತೀರ್ಥ
ಪ್ರಸಾದವನು ಆರ್ತಿಯಿಂದ ಪಾನಮಾಡಿ
ಸಾರ್ಥಕಾತು ಎನ್ನ ಜನ್ಮ
ಭಾರತ ಸ್ವಾತಂತ್ರ್ಯಕಾರ್ಯ
ಪೂರ್ತಿಯಾಗಬೇಕೆಂದು ವರವ
ಬೇಡುವೆನಮ್ಮ ತಾಯಿ ಭಾರತಮ್ಮಾ
ತಾಯಿ ಭಾರತಮ್ಮಾ ತಾಯಿ ಭಾರತಮ್ಮಾ ॥ಪ॥

ಭಾರತ ಮಾತೆಯ ಸರ್ವಲಕ್ಷಣಗಳನ್ನು ಹೇಳುವ ಪದ ಇದಾಗಿದ್ದು. ಹಾಗೇ

ಇನ್ನೂ ಮೂರು ನಾಲ್ಕು ಪದಗಳು ಭಾರತ ಮಾತೆಯ ಸ್ತುತಿಯ ಸಲುವಾಗಿಯೇ ರಚನೆಗೊಂಡಿವೆ.

ಇಂಗ ಮಾರಲಿಕೆ ಬಂದ ಮಂಗ್ಯಾನ ಮಾರಿ ಇಂಗ್ಲಿಷರು
ಶೃಂಗಾರ ಹಿಂದುಸ್ಥಾನ ಭಂಗ ಬಿಡಿಸಿಬಿಟ್ಟಾರು
ಮಾಂಗಲ್ಯಕ್ಕೆ ಒಂದು ಗುಂಜಿ ಬಂಗಾರ ಬೆಳ್ಳಿ ಬಿಡಲಿಲ್ಲ
ಬಳದ ಓದಾರಮ್ಮ ಉಳಿಯಲಿಲ್ಲಮ್ಮ ಉಳಿಯಲಿಲ್ಲಮ್ಮ
ಉಳಿಯಲಿಲ್ಲಮ್ಮ ತಾಯಿ ಭಾರತಮ್ಮ॥೩॥

ಹಿಂದುಸ್ಥಾನದಲ್ಲಿರುವ ಕುಂದು ಕೊರತೆ ದೂರಮಾಡಿ
ನಂದದಿಂದ ಪಾಲಿಸೆಂದ। ಚಂದಗ್ರಾಮಹುಲಕುಂದ
ತಂದಿ ಹಿರೇಮಠೇಶನ ಕಂಡ ಶಿವಲಿಂಗ ಕವಿ
ತಾಯಿ ಭಾರತಮ್ಮಾ ಅಮ್ಮ ನಮ್ಮಮ್ಮ॥೪॥

ಇನ್ನೊಂದು ಸಖಿ ಭಾರತ ಮಾತೆಯ ಸ್ತುತಿಯಲ್ಲಿ ಕವಿಯ ಪರಿಕಲ್ಪನೆಯನ್ನು ಕೇಳೋಣ

ಶಾಂತಿ ಸುಮನೋಹರ ಕಾಂತೆ
ವಿಮಲ ವಿಖ್ಯಾತೆ
ಸುಮದೆ ಸುಲಲೀತೆ
ಮಾತೆ ಮಧುರತೆ
ಮತಿಯ ನೀಡಮ್ಮಾ
ಮತಿಯ ನೀಡಮ್ಮ
ಪಾಮರ ಬಾಲಕನ
ಪೊರೆಯೆ ತಾಯೆ-ಭಾರತಮ್ಮ

ಹೀಗೆ ಕವಿ ತನ್ನ ೨೦-೨೫ ವರುಷದವನಿರುವಾಗ ಬರೆದ ಬರಹಗಳನ್ನು ಗಮನಿಸಬೇಕು. ಸ್ವಾತಂತ್ರ್ಯ, ಭಾರತ ದೇಶ ಸ್ವಾತಂತ್ರ್ಯದ ಪದ, ಭೂಮಾತಾ ವಂದನಾ, ಧ್ವಜವಂದನಾ ಮುಂತಾದ ಪದಗಳು ಕವಿಗೆ ರಚನೆಯೊಂದಿಗೆ ಮುಖಪಾಠವಿರುವುದಾಗಿ ತಿಳಿದುಬರುತ್ತದೆ. ಲಾವಣಿ. ವಿದ್ವಾನ್ ಬಿ. ನಿಲಕಂಠಯ್ಯ ಅವರು ಶಿವಲಿಂಗ ಕವಿಯನ್ನು ಕಂಡು ಚೇತನ ಭರಿತರಾದರು ಎಂಬುದನ್ನು ಹುಲಿಕುಂದದ ಕೆಲವು ಗೀಗೀಕಾರರು ಈಗಲೂ ತಿಳಿಸುತ್ತಾರೆ.

ಶಿವಲಿಂಗ ಕವಿಯು ಭಾರತ ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯದ ಸಮಯ ಮತ್ತು ಸ್ವಾತಂತ್ರ್ಯದ ನಂದರದಲ್ಲೂ ಬಾಳಿ-ಬದುಕಿ, ಜೀವನದ ಕೊನೆಯ ವರೆಗೂ ಹಾಡುಗಳನ್ನು ರಚಿಸಿ, ಸಫಲಾಹ ಸೃಷ್ಟಿಯನ್ನಾಗಿ ನಾಡಿಗೆ ಬಳುವಳಿ ನೀಡಿದ ಶ್ರೇಷ್ಠತಮ ಜನಪದ ಕವಿಯಾಗಿದ್ದಾರೆ.

ಅವರ ಅನೇಕ ಶಿಷ್ಯರು ತಾವು ಕವಿಗಳಾಗಿ ಪರಿಣಮಿಸಿದವರಲ್ಲಿ ಹೆಬ್ಬಾಳದ ಹನುಮಂತು, ಫಕೀರವ್ವ ಗುಡಿಸಾಗರ ಮನಿಕಟ್ಟಿ ಗಂಗವ್ವ, ಬಾಡಗಿ ಗಂಗವ್ವ ಹೊಸೂರ ನೀಲಪ್ಪ ಹೊಸೂರ ಸೋಮಲಿಂಗಪ್ಪ ಪ್ರಮುಖರಾಗಿದ್ದಾರೆ. ಹಾಡುಗಳು ಜನತೆಗೆ ಸ್ಫೂರ್ತಿಯನ್ನು ನೀಡುವುದನ್ನು ಕಂಡು, ಸ್ವಾತಂತ್ರ್ಯದ ಪೂರ್ವದಲ್ಲಿ ಕೆಲವು ಗೀಗೀಕಾರರನ್ನು ಕಾರಾಗೃಹಕ್ಕೆ ಅಟ್ಟಿದುದುಂಟು. ಕಲಬುರ್ಗಿ ಜಿಲ್ಲೆಯ ಸಿರಗಾಪುರ ಬಂಡೆಪ್ಪ (೧೯೦೦-೧೯೫೫) ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಕೊಳ್ಳೂರ ಹುಸೇನ ಸಾಹೇಬ (೧೯೦೦-೧೯೭೦) ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ತಿಮ್ಮಾಪ್ಪೂರದ ದುರ್ಗಾದಾಸ (೧೯೦೭) ಬೆಳಗಾವಿ ಜಿಲ್ಲೆಯ ತಿಗಡೊಳ್ಳಿಯ ಬಿಟ್ಟಪ್ಪ, ಹುಕ್ಕೇರಿ ಬಾಳಪ್ಪ (ಮುರಗೋಡದ ಬಾಳಪ್ಪ) ಮುಂತಾದ ಕವಿಗಳು ಸಮೂಹ ಮಾಧ್ಯಮವಾದಿ ಜನಪದ ಹಾಡುಗಾರಿಕೆಯಲ್ಲಿ ಹಾಡುಗಳ ರಚನೆಯಲ್ಲಿ ಮಹತ್ವದ ಸೇವೆಯನ್ನು ಮಾಡಿದ್ದಾರೆ. ನಮ್ಮ ದೇಶ ನಮ್ಮ ಸ್ವತಂತ್ರ ನಮ್ಮ ಸ್ವಾತಂತ್ರ್ಯದ ಬಗೆ, ನಮ್ಮ ಸಂಸ್ಕೃತಿ ತಿಳಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರ ರಚನೆಗಳೇ ಒಂದೊಂದು ಸಾಹಿತ್ಯ ಕೃತಿಗಳಾಗುವಷ್ಟು ಇವೆ.

ದಕ್ಷಿಣ ಕರ್ನಾಟಕದಲ್ಲಿ ಕನ್ನಡ ಲಾವಣಿ ವಿದ್ವಾನ್ ಬಿ. ನೀಲಕಂಠಯ್ಯ, ತುರಾ ಬಿರದಾಂಕಿತ ಸಿ. ಸುಬ್ಬಣ್ಣ, ಎನ್. ವಿಷಕಂಠರಾವ್, ಪಂಡಿತ ಎನ್. ಬಿ. ನಾರಾಯಣ ಸ್ವಾಮಪ್ಪ ಡಿ.ಎಸ್. ರಾಮಸ್ವಾಮ್ಯ ಮುಂತಾದ ಲಾವಣಿಕಾರರ ತಮ್ಮ ಲಾವಣಿಗಳ ಮೂಲಕ ಹಾಡುಗಳ ವೈಖರಿಗಳಿಂದ ರಾಷ್ಟ್ರ, ಜನ, ಸಂಪತ್ತು, ರಾಜಕಾರಣ, ದೇಶಪ್ರೇಮ, ಸ್ವಾತಂತ್ರ್ಯ ಕುರಿತಾದ ಸಂಗತಿಗಲನ್ನು ಜನಮನಕ್ಕೆ ಮುಟ್ಟಿಸಿದ್ದಾರೆ.

ಕ್ರಿ.ಶ. ೧೯೩೬ರಲ್ಲಿ ಬಿ. ನೀಲಕಂಠಯ್ಯನವರು ತಮ್ಮ ರಚನೆಗಳನ್ನು ಲಾವಣಿ ಮಾಲಿಕೆಯಲ್ಲಿ ಪ್ರಚಾರ ಪಡೆಯುಸಿದರ ಶಿವಪುರ ವಿದುರಾಶ್ವತ್ಥದ ಲಾವಣಿ, ಸಂಗ್ರಹವ ಅನೇಕರ ಮೇಲೆ ಪ್ರಭಾವ ಬೀರಿತು. ವಂದೇ ಮಾತರಂ' ಇವರ ರಚನೆಯನ್ನು ಗಾನಕೋಕಿಲ ಶ್ರೀಮಂತಿಕೆ. ಅಶ್ವತ್ಥಮ್ಮನವರು ಗ್ರಾಮೋಫೋನ್ ಓಡಿಯನ್ ರಿಕಾರ್ಡಿನಲ್ಲಿ ಹಾಡಿ, ಗಾಯನ ಪೂರ್ವಕ ದೇಶ ಸೇವೆ ಮಾಡಿರುತ್ತಾರೆ ಎಂಬ ದಾಖಲೆಯನ್ನು ನೀಡಲಾಗಿದೆ.

ಭಾರತ ಸ್ವಾತಂತ್ರ್ಯದ ಪೂರ್ವಕಾಲದ ಪರಿಕಲ್ಪನೆಯನ್ನು ನೀಡಿದವರು ಲೆಕ್ಕಕ್ಕೆ, ಲೆಕ್ಕದ ತೆಕ್ಕೆಗೆ ಸಿಗಲಾರದಷ್ಟು ಜನಪದ ಕವಿಗಳು ಹಾಡುಕಾರರೂ ಇದ್ದಾರೆ. ಅವರನ್ನೆಲ್ಲ ಸಂಶೋಧಿಸಿ, ಹೊಸದಾಗಿ ಬರೆಯಬೇಕಾದುದು ಬಹಳಷ್ಟಿದೆ. ಜನಮನದಲ್ಲಿ ರಾಷ್ಟ್ರೀಯತೆಯನ್ನು ನೀಡಿದ ನಾಯಕರುಗಳ ಪಟ್ಟಿಯೂ ದೊಡ್ಡದಿದೆ.

ಕರ್ನಾಟಕದ ಪ್ರತಿ ಗ್ರಾಮಗಳಲ್ಲಿ ಡೊಳ್ಳುಗಳಿವೆ. ಎಲ್ಲೆಲ್ಲಿ ಡೊಳ್ಳಗಳಿವೆಯೋ ಅಲ್ಲಲ್ಲಿ ಹಾಡುಕಾರರೂ ಇದ್ದಾರೆ. ಪ್ರತಿ ಗ್ರಾಮಗಳಲ್ಲಿ ಭಜನಾ ಮೇಳಗಳಿವೆ. ಆ ಮೇಳಗಳಲ್ಲಿ ಹಾಡುಕಾರರಿದ್ದಾರೆ. ಈ ಮಹನೀಯರುಗಳೆಲ್ಲರೂ ದೇಶದ ಸ್ವಾತಂತ್ರ್ಯದ

ಚಿಂತನೆಗೊಳಗಾದ ಸಹಸ್ರ-ಸಹಸ್ರ ಪ್ರಸಂಗಗಳನ್ನು ಕೇಳುತ್ತೇವೆ. ಈಗಲೂ ನೋಡುತ್ತೇವೆ ಬಂಕಾಪುರದ ಬಸವಣ್ಣೆಪ್ಪ (ಮರಣ ೧೯೬೦) ಧಾರವಾಡ ಜಿಲ್ಲೆಯವರಾಗಿದ್ದು, ಹಾಲುಮತದ ಹಾಡುಗಳಿಂದು ಭಾರತ ಮಾತೆಯ ಹಾಡನ್ನು ಜನದಂಗಾಗಿ ಕೇಳುವಂತೆ ಹಾಡುತ್ತಿದ್ದನಂತೆ ಅವನ ಹಾಡುಗಳನ್ನು ಬರೆದು ಬಾಯಿಪಾಠ ಮಾಡಲು ನಾಡಿನ ಮೂಲೆಗಳಿಂದ ಜನ ಬರುತ್ತಿತ್ತೆಂಬುದನ್ನು ಹೇಳಲಾಗುತ್ತಿದೆ.

## ೨. ಸ್ವಾತಂತ್ರ್ಯಕಾಲದ ಪರಿಕಲ್ಪನೆ

ಭಾರತ ಸ್ವಾತಂತ್ರ್ಯಕಾಲದ ಪರಿಕಲ್ಪನೆಯು ಕ್ರಿ.ಶ. ೧೯೧೯, ೧೯೨೦, ೧೯೩೦, ೧೯೪೨, ವರ್ಷಗಳಲ್ಲಿ ಹಂತ ಹಂತವಾಗಿ ಜನರ ಮನಗಳನ್ನು ಹೊಕ್ಕು ಸಹಸ್ರಾರು ಘಟನೆಗಳುಂಟು. ಆ ಘಟನೆಗಳನ್ನು ಲಾಲ ಭಾಲ ಮತ್ತು ಪಾಲರೇ ಕಾರಣರೆಂದು ಮಹಾತ್ಮಗಾಂಧಿಜಿಯವನರು ಪ್ರಮುಖರೆಂದೂ ಇತರ ರಾಷ್ಟ್ರೀಯ ನಾಯಕರು ಕಾರಣಕರ್ತರು ಅನೇಕ ಮಹನೀಯರು ವಾದಿಸುತ್ತಿದ್ದಾರೆ ಬರೆಯುತ್ತಿದ್ದಾರೆ.

ಸ್ವತಂತ್ರ ಸರಕಾರವನ್ನು ಹೊಂದಿದ ಒಂದು ಜನಸಮುದಾಯವೇ ರಾಷ್ಟ್ರವೆಂದು ರಾಜ್ಯಶಾಸ್ತ್ರ ಪರಿಣತರುಗಳು ತಿಳಿಸುತ್ತಿರುವುದು ಗಮನಾರ್ಹವಾದುದು. ದೇಶ ಮತ್ತು ರಾಷ್ಟ್ರೀಯತ್ವಗಳು ಮಿಲನವಾದರೆ ರಾಷ್ಟ್ರವೆನಿಸುತ್ತದೆ. ದೇಶವೇ ರಾಷ್ಟ್ರೀಯತ್ವದ ಪ್ರತಿಷ್ಠಾನ ಭೂಮಿ. ಪ್ರಜೆ, ಪ್ರದೇಶ ಪ್ರಭುತ್ವ ಮತ್ತು ಸಾರ್ವಭೌಮತ್ವಗಳು ಸೇರಿ ದೇಶವೆನಿಸುವುದು. ಎಂಬುದಾಗ ಶ್ರೀ ಅರವಿಂದ ಘೋಷರು ವ್ಯಾಖ್ಯಾನಿಸುತ್ತಿರುವುದನ್ನು ಗಮನಿಸಬೇಕಾಗುತ್ತದೆ.

ಈ ಅರ್ಥದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಹುಟ್ಟಿಕೊಳ್ಳುವ ಪೂರ್ವದಲ್ಲಿ ಅಲ್ಲಲ್ಲಿ ರಾಷ್ಟ್ರೀಯ ಚಳುವಳಿ ಪ್ರಾರಂಭವಾಗಿತ್ತು ಭಾರತದ ಪ್ರಾದೇಶಿಕ ಭಾಷೆಗಳಲ್ಲಿ ನಿಗಿ ನಿಗಿ ಕೆಂಡವಾಗಿ ಕಾವು ಏರತೊಡಗಿತ್ತು. ಆದರೆ ಬಂಗಾಲ ಪ್ರಾಂತವು ರಾಷ್ಟ್ರೀಯತೆಯನ್ನು ಮೈದೋರುವಲ್ಲಿ ಮೊದಲನೆಯದಾಗಿ ಅಲ್ಲಿ ಆಧ್ಯಾತ್ಮ ಧರ್ಮ, ಸಂಸ್ಕೃತಿ ಸಾಹಿತ್ಯ ಜಾಗೃತವಾಗಿ ಇತರ ಭಾರತೀಯ ಪ್ರದೇಶಗಳ ಪ್ರಜೆಗಳ ಮೇಲೆ ಪ್ರಭಾವ ಬೀರಿರುವುದು ಸ್ಪಷ್ಟ.

ಕ್ರಿ.ಶ. ೧೯೧೯ರಲ್ಲಿ ಜಲಿಯನ್ ವಾಲಾಬಾಗ್ ದ ಹತ್ಯಾಕಾಂಡ, ೧೯೨೦ರ ಬ್ರಿಟಿಷ ಸರಕಾರದ ವಿರುದ್ಧ ಅಹಿಂಸಾತ್ಮಕ ಅಸಹಕಾರ ಚಳುವಳಿ ೧೯೩೦ ಮತ್ತು ೧೯೪೨ರಲ್ಲಿ ನಡೆದ ಚಲೇಜಾವ ಚಳುವಳಿ 'ಮಾಡು ಇಲ್ಲವೆ ಮಡಿ' ಎಂಬ ಮಹಾತ್ಮಗಾಂಧೀಜಿಯವರ ದಿಟ್ಟ ನಿಲುವು, 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂಬ ಸಿಂಹವಾಣಿ ಲೋಕಮಾನ್ಯ ತಿಲಕರಿಂದ ಸಾರಿದ್ದು ಇವೆಲ್ಲವುಗಳು ಭಾರತೀಯ ಜನತೆಗೆ ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಹಬ್ಬಿಸುತ್ತ ಸಾಗಿದವು.

ಮೇಲಿನ ಘಟನೆಗಳು ಜನಪದ ಕವಿಗಳ ಮೇಲೆ ಪರಿಣಾಮ ಬೀರಿ ರಚನಾತ್ಮಕ ಕಾರ್ಯಗಳು ಸಾಗುವುದರ ಜೊತೆ-ಕಾವ್ಯಗಳು ಮೊಳಗಿದವು ಅವೆಲ್ಲವೂ ಜನಪದ ಗೀತಗಳಾಗಿ ಜನಮನ ಸೇರಿದವು.

ಬೆಳಗಾವಿಯಲ್ಲಿ ೧೯೨೪ರಲ್ಲಿ ಮಹಾತ್ಮಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರ ನಡುವಿನ ಅಂತರ ಇಲ್ಲದಾಗಿ ಹೋಯಿತು.

ಶ್ರೀ ಬಸಪ್ಪ ಸಂಗಪ್ಪ ಬೇಟಗೇರಿ ಹುಲಕುಂದದ ಲಾವಣಿ ಹಾಗೂ ಗೀಗೀಕವಿಯು ಹುಲಕುಂದ ಭೀಮಕವಿ ಎಂದೇ ಪ್ರಸಿದ್ಧಿಯನ್ನು ಪಡೆದು ಲಾವಣಿ ಹಾಗೂ ಗೀಗೀ ಪದಗಳನ್ನು ಮೇಳಕಟ್ಟಿಕೊಂಡು ಹಾಡತೊಡಗಿದನು, ೧೯೩೦ರ ಇಸವಿಯ ಕಾಯದೇ ಭಂಗ ಚಳವಳಿಯನ್ನು ಖಾದಿ ಪ್ರಾಚಾರ, ಮಹಾತ್ಮಾ ಗಾಂಧೀಜಿಯವರ ಚರಿತೆ, ಭಾರತ ಮಾತೆ, ಗ್ರಾಮ ನೀತಿ, ಪತಿವ್ರತೆಯರ ಮೇಲ್ಮೆ ಸರಾಯಿ ಬಂದಿ ಹೀಗೆ ಪದಗಳನ್ನು ರಚಿಸಿ ಶಿಷ್ಯರಿಗೂ ಕಲಿಸಿದನು.

ಈ ತೆರನಾದ ಹುಲಕುಂದ ಶಿವಲಿಂಗಕವಿ

ರಾಣೆಬೆನ್ನೂರ ಸಮ್ಮದ ಸಾಬ, ಮಾರನ ಬಸರಿಯ ಮೋಡಿನ ಸಾಬ, ಕಲಾದಗಿಯ ಇಮಾಮಸಾಬ ಜನಪದ ಕಾವ್ಯ ಶಕ್ತಿಯಾಗಿ ಹೊಳೆದರು. ಹುಲಕುಂದದ ಭೀಮಕವಿಯ ರಾಷ್ಟ್ರದ ಪರಿಕಲ್ಪನೆಯನ್ನು ಮೂಡಿಸಿದನು.

ಪುಣ್ಯಭೂಮಿ ಎಂದರೆ ಹಿಂದುಸ್ಥಾನ
ಕೇಳರಿ ಸರ್ವಜನ ಹೇಳುವೆನು ಪೂರ್ಣ
ಇರಲಿ ನಿಮ್ಮ ಚಿತ್ತ
ಧನಧಾನ್ಯ ತುಂಬಿ ತುಳಕುವುದು ಸರ್ವ ಸಂಪತ್ತೆ

ಕನ್ಯಾಕುಮಾರಿಯಿಂದ ಹಿಮಾಲಯ ತನಕ
ದಕ್ಷಿಣೋತ್ತರ ಉದ್ದಳತೆ ಲೆಕ್ಕ
ಎರಡು ಸಾವಿರ ಮೈಲಿ
ಪೂರ್ವಪಶ್ಚಿಮದಡ್ಡಾಗಲಿರುವುದು ೧೮೦೦ ಮೈಲಿ
ರಾಷ್ಟ್ರದ ಕ್ಷೇತ್ರಫಲ
ಒಟ್ಟು ಗೂಡಿ ಎಲ್ಲ ೧೫ ಲಕ್ಷ ಮೈಲಿ
ಚ ಚೌಕು ಇರುವುದಲ್ಲ
ಭರತಖಂಡದ ಉತ್ತರದಲ್ಲಿ ಪರ್ವತದ ಸಾಲ
ಅದರಲ್ಲಿ ಎತ್ತರವಾದ ಶಿಖರ
ಗೌರಿ ಶಂಕರ ಎಂಬ ಹೆಸರ
ಎಲ್ಲಾದಕ್ಕಿಂತ ಮೇಲ
೨೫ ಸಾವಿರದಾ ೨೫ ಅಡಿ ಇರುವುದಲ್ಲ''

ಹೀಗೆ ಬಂಗಾಲ ಉಪಸಾಗರ, ಹಿಂದು ಮಹಾಸಾಗರ, ಹಿಂದು ಸಮುದ್ರ (ಅರಬೀ ಸಮುದ್ರ) ಸಿಂಧು, ಬ್ರಹ್ಮಪುತ್ರಾ,. ಗಂಗಾ-ಯುಮುನಾ, ತುಂಗಭದ್ರಾ, ಮುಂತಾದ ಮೂರುನೂರು ದೊಡ್ಡನದಿಗಳು, ಜಲಸಂಪತ್ತು ಮುತ್ತು, ಮಾಣಿ,ಕ, ಬೆಳ್ಳಿ, ಬಂಗಾರ, ಖನಿಜಗಳು, ಗೋಧಿ, ಜೋಳ, ಆಹಾರ ಧಾನ್ಯಗಳು, ಅರಣ್ಯ ಸಂಪತ್ತು ವಿವಿಧ ಧರ್ಮಿಯ ಜನರು ಇತ್ಯಾದಿ ವಿವರಗಳನ್ನು ಜನಪದ ಗೀಗೀಗಳಲ್ಲಿ ಎರಕ ಹೊಯ್ದು ಜನತೆಗೆ ಹೆಮ್ಮೆ ಮೂಡಿಸುತ್ತ ಸಾಗಿದವನು ಈ ಭೀಮ ಸಿಂಗ ಕವಿ ಗ್ರಾಮೀಣ ಪ್ರದೇಶದನ ಜನತೆಗೆ ಜಾಗ್ರಿತಿಯನ್ನು ಮೂಡಿಸಿಯಾಯಿತು.

ಲೋಕಮಾನ್ಯ ತಿಲಕರ ಬಗೆಗೆ ಭೀಮಕವಿ ಕನ್ನಡದ ಹಾಡುಗಳ ಮೂಲಕ ಜನರಿಗೆ ಅಭಿಮಾನ ಮೂಡಿಸಿದನು.

ಶ್ರೇಷ್ಠವಾದ ರಾಷ್ಟ್ರೀಯ ಮುಖಂಡರು
ಲೋಕಮಾನ್ಯ ತಿಲಕರೆಂಬುವರು
ಮೊದಲಿಗೆ ಅಂಜಲಿದ್ದ ಜನರು
ಜೇಲಿಗೆ ಅಂದ್ರ ಅಪಮಾನ ಅಂತಿದ್ರು
ಮೊದಲಿಗೆ ಇವರು ಜೇಲಿಗೆ ಹೋದವರು
ಜನರಲ್ಲಿ ಅಂಜಿಕೆ ತಗದವರು." [೧೧]

ಮಹಾತ್ಮಾ ಗಾಂಧೀಜಿಯವರ ಜೀವನ ಭಾರತ ಇಂಗ್ಲಂಡಗಳ್ಲಿ ಸಾರವತ್ತಾಗಿ ತಿಳಿಸುತ್ತ, ಸತ್ಯ ಅಹಿಂಸೆಯ ಮಾರ್ಗಗಳ ಮೂರುತಿ ಎಂದು ತಿಳಿಸುವ ಹಾಡು.

ಮಾನವರಾಗಿ ಜನಿಸಿ ಮಹಾತ್ಮರೆನಿಸಿಕೊಂಡ
ಮೋಹನದಾಸ ಗಾಂಧೀಜಿಯವರು
ತನು, ಮನ, ಧನ, ಗುಣ, ಪ್ರಾಣ ನಮ್ಮಾ-
ಧೀನವಾಗಿ ವಿನಿಯೋಗಿಸಿದರು.

ಭೀಮಸಿಂಹ ಕವಿ ಕರ್ನಾಟಕದಲ್ಲಿ ನಡೆಯುವ ಮೋಹರಂ ಹಾಡುಗಳನ್ನು ರಚಿಸಿದ್ದುಂಟು. ಅದರಲ್ಲೂ ಮಹಾತ್ಮಾಗಾಂಧೀಜಿ ಕುರಿತಾದ ಹಾಡು ಪ್ರಾಮುಖ್ಯವಾದುದು.

## ಗಾಂಧೀಜಿ ಹಾಡು

ಗಾಂಧಿ ಹುಟ್ಯಾನ ತೊಟ್ಯಾನ ಕೃಷ್ಣನವತಾರ
ಗಾಂಧಿ ಹುಟ್ಯಾನ ತೊಟ್ಯಾನ ಕೃಷ್ಣನವತಾರ
ಕೊಟ್ಟಿ ಬ್ರಿಟಿಷರನ ಇಲ್ಲಿಂದ ಅಟ್ಯಾನ ಬಹುದೂರ ||ಪ||

ಗಾಂಧೀಜಿಯವರು ಇಂತಹ ಹಾಡುಗಳಿಂದ ಪ್ರಚಾರವಾದರು ಜನಮನ ಸೇರಿದರು. ಅವರ ರಾಷ್ಟ್ರೀಯ ಕಾರ್ಯಗಳಿಂದ ಅಹಿಂಸಾವಾದಿಗಳಾಗಿಸಾಗಿ, ಮಹಾತ್ಮರೆನಿಸಿಕೊಂಡರು. ಬ್ರಿಟಿಷರಿಗೆ ಎಂದು ಬಾಗಲಿಲ್ಲ, ಬಗ್ಗಲಿಲ್ಲ.

ಕವಿಯ ರಚನೆಯ ಕೊನೆಯ ಸಾಲುಗಳು

ಏರ: ದುಡಿಯುವ (ರೈತನಿಗೆ) ಬಡವರಿಗೆ ಹೊಟ್ಟೆತುಂಬ ಅನ್ನಬೇಕು
ಮೈತುಂಬ ಅರವಿ ಆಧಾರ ಸ್ವರಾಜ್ಯ ಅಂದಾರ
ಅಲ್ಲಿತನಕ ಅವರು ಚಳವಳಿ ಹೂಡ್ಯಾರ
ಇದಕಾಗಿ ಜೇಲಿನೊಳಗ ಮುದುಕಾಗಿ ಹೋಗ್ಯಾರ

ಇಳವು: ಖಾದಿ ಅರಿವಿಗಿ ವರದಿವಸ ಚರಖಾ ತಿರಿವ್ಯಾರ
ಮಾದಿಗ ಹೊಲೆಯರಲ್ಲಿ ಭೇದ ಅಳದಾರ

ಏರ: ಮನುಷ್ಯರಲ್ಲಿರುವ ಮೋಹನ ಕುಲಕ್ಕೆಲ್ಲಾ
ದೇವ ಜ್ಞಾನದ ಮಹಾತ್ಮಾಜಿಯವರಾ
ಇವರ ನಾಮ ಸ್ಮರಣೆಯಿಂದ ಪಾಪ ಪರಿಹಾರ
ಭೀಮಸಿಂಗ ಹೇಳ್ಯಾನಕವಿ ಮಾಡ್ಯಾನ ಸರ್ದಾರ।

ಹುಲಕುಂದದ ಶಿವಲಿಂಗ ಕವಿಯು ಗಾಂಧೀಜಿಯವರ ಹತ್ಯೆ ಕುರಿತು ಎರಡು ಗೀಗೀ ಪದಗಳನ್ನು ರಚಿಸಿದ್ದಾರೆ.

ಮೊದಲನೆಯ ಪದ

ಮೇದಿನಿಯೊಳು ಶ್ರೇಷ್ಠಾದ ಮಹಾತ್ಮರು
ಅಗಲ ಹೋದ್ರು ಘಾತ ಆತಿ।
ನಂದಿತು ರಾಷ್ಟ್ರದ ಜ್ಯೋತಿ ॥ಪಲ್ಲ॥
ದೃಡದಿಂದ ಪಡಿದವರು ಅಹಿಂಸಾ ತತ್ವದ ದಾರಿ

..........................................................................

ಸಿದ್ಧಾರ್ಥ ಭರಿತನು ಭೌದ್ಧ ವಂಶ ಸಂಜಾತಾ
ಸುಜ್ಞಾನ ಸುಶೀಲನು ಭಾರತ ಭಾಗ್ಯವಿದಾತಾ

ಹಾಗೇ ಎರಡನೇ ಪದ್ಯ ಗಾಂಧೀಜಿಯವರ ಹತ್ಯೆದಲ್ಲಿ

ರಾಷ್ಟ್ರಕ್ಕೆಲ್ಲ ತಂದಿಯಾದ ಶ್ರೇಷ್ಠಮಹಾತ್ಮಾಗಾಂಧಿಯವರು
ಸೃಷ್ಟಿಯನ್ನು ಬಿಟ್ಟುಹೋದ್ರು ಕೈಲಾಸಕ।
ನೀಲಕಂಠನಿಗೆ ಭೆಟ್ಟಿಯಾಗುವುದೋಸ್ಕರಕ

..........................................................................

ನಂದದಿಂದ ನಾರಾಯಣ ಗಾಂಧೀ ರೂಪಧರಿಸಿ ಬಂದ
ಭೂಲೋಕಕ ಜಗದುದ್ಧಾರಕ।
ಮಹಾತ್ಮಾ ಗಾಂಧೀಜಿಯವರು ಸತ್ಯ ಮತ್ತು ಅಹಿಂಸಾ
ಮಾರ್ಗಗಳಿಂದ ಭಾರತದಲ್ಲಿ ಆದರ್ಶ ದರ್ಶನವಾಗಿ
ಭೂಮಿಯ ಮೇಲಿನ ಸತ್ಯದ ಪ್ರತೀಕವಾಗಿ, ಸ್ವಾತಂತ್ರ್ಯದ

ಮುಖ್ಯಸ್ಥರಾಗಿ ಯುದ್ಧರಹಿತ ಗೆಲುವನ್ನು ಕಂಡ ಮಹಾಮಹಿಮರಾಗಿ ತೋರುತ್ತಾರೆ. ಅವರ ವ್ಯಕ್ತಿತ್ವದ ಕೆಲವು ಸಾಲುಗಳು.[೧೫]

ಚಾಲ: ತಾಳಿದ್ದು ಬಾಳೀತು ಎಂಬುವ ಗಾದಿಯ ಮಾತ
ಹೇಳುತ ಬೀರಿದ ಶಾಂತಿಯನು।
ಕೀಳ ಮಂದಿಯ ಮ್ಯಾಲೆದಾಳಿ ಮಾಡಲು ನಾವು
ಹಾಳಾಗ್ತೀವಿ ಎಂಬುವ ಕ್ರಾಂತಿಯನು।
ಕ್ರಾಂತಿಯಿಂದ ಮುಂದೆ ಕಡೆಗಾಣಲಾರದೆಂದು
ಶಾಂತಿ ಸಮೃದ್ಧಿಯ ವಿಷಯವನು।
ಪ್ರಚಾರಗೊಳಿಸಿದ ಪರಮಾತ್ಮನು
ಅಸ್ಥಿರ ದೇಹವು ಸುಸ್ಥಿರ ಎಲ್ಲೆಂದು ಶಾಶ್ವತ ವೇದೋಕ್ತಿಯ ತಿಳಿಸಿದನು।
ಅಹಿಂಸಾ ತತ್ವದ ಅಸ್ತ್ರ ಪ್ರಯೋಗದಿಂದ
ಸ್ವಾತಂತ್ರ್ಯ ಸೌಭಾಗ್ಯಗಳಿಸಿದನು
ಸಹಸ್ರಾವಧಿ ವಿಘ್ನದೇಶಕ್ಕೆ ಬಂದರೂ
ದಾಸಾಗಿ ಎಲ್ಲಾರನು ಉಳಿಸಿದನು।
ಸರ್ವರಿಗೆ ಸಂತೋಷಗೊಳಿಸಿದನು.

ಮಹಾತ್ಮಾ ಗಾಂಧೀಜಿಯವರು ಸೌಮ್ಯವಾದಿಗಳಾದುದರಿಂದ ಸ್ವರಾಜ್ಯನಮಗೆ ತೀರ ದೊರಕದು. ಏಟಿಗೆ ಏಟು ಕೊಡುವಂತಹ ವರಿಗೆ ಜನ ಅಂಜುತ್ತಾರೆ. ಬ್ರಿಟಿಷರಿಗೆ ನಾವು ಎದುರೇಟುಕೊಡಬೇಕು, ಸೇರಿಗೆ ಸವಾಸೇರು ಆಗಬೇಕು, ಎಂಬ ತತ್ವ ಶೂರ ಸುಭಾಸಚಂದ್ರ ಬೋಸರದಾಗಿತ್ತು. ವೈರಿಯ ವೈರಿ ಗೆಳೆಯನಾಗುತ್ತಾನೆಂಬುದು ಅವರ ಸಿದ್ಧಾಂತವಾಗಿತ್ತು. ಅಝಾದ ಹಿಂದ ಸೈನ್ಯಕಟ್ಟಿ ಬ್ರಿಟೀಷರೆದುರು ಹೋರಾಡಲು ಸಿದ್ಧರಾದರು, ಹೋರಾಡಿದರು. ಸ್ವಾತಂತ್ರ್ಯದ ಗಳಿಕೆ ರಕ್ತದಿಂದ ದೊರೆಯಬೇಕೆಂಬುದು ಕೂಗು.

ಸುಭಾಸಚಂದ್ರರ ಪದ[೧೬]

ಸೌಖ್ಯ ಸೂತ್ರ ಸ್ವಾತಂತ್ರ್ಯ ಬೇಕಾದರೆ ನಾವೆಲ್ಲರು
ಏಕಾಗಬೇಕು ಬಿಟ್ಟ ಭೇದ ಭಾವನಾ।

..........................................................

ಲೋಕಮಾನ್ಯ ಸುಭಾಷರ ಚರಿತ್ರೆಯನಾ ಹೇಳುವೆ ಪೂರ್ಣಾ
ಬ್ರಿಟಿಷರೆಂಬ ಆನೆಗಳು ಮೆಟ್ಟಲಿಕ್ಕೆ ಸಿಂಹ ಆಗಿ
ಹುಟ್ಟಿ ಬಂದ ಪೃಥ್ವಿಯೊಳು ಸರದಾರ
ಇವರ ದೃಷ್ಟಿಯಿಂದ ರಾಷ್ಟ್ರ ಅತಿ ಉದ್ಧಾರಾ
ನರಶ್ರೇಷ್ಠನಾಗಿ ಮೆರೆದ ಗುಣ ಗಂಭೀರಾ
ದುಷ್ಟರಿಗೆ ಸೇರಲಿಲ್ಲ ಶ್ರೇಷ್ಠರಲಿ ಭಕ್ತಮನನ
ಇಟ್ಟದುಡಿಯುವಂತಾದಿಟ್ಟ ಮರ್ದೀರಾ ಧೈರ್ಯದಶಿಖರಾ॥

ಕವಿ ಶಿವಲಿಂಗ ಕವಿಯ ಸಾರ್ವಕಾಲಿಕ ಮೌಲ್ಯವುಳ್ಳ ಜನಪದ ಗೀತಗಳನ್ನು ರಚಿಸಿದರು. ಭಾರತ ಮಾತೆಯ ಸ್ತುತಿ ಧ್ವಜವಂದನೆ, ಭಾರತ ದೇಶದ ಸ್ವಾತಂತ್ರ್ಯದ ಪದ ಧ್ವಜ ವಂದನೆಗೆ ನಡೆಯಿರಿ. ಖಾದಿ ಅಶೋಕ ಚಕ್ರ, ಗಾಂಧೀಜಿಯವರ ಮಹಿಮೆ ರಾಷ್ಟ್ರನಾಯಕಾರದ ಶೂರ ಸುಭಾಸಚಂದ್ರಬೋಸರು ಶಿಕ್ಷಣ ಸಹಕಾರ, ರೀತಿ ನೀತಿ ಕಲಿಯುಗ ಮಹಿಮೆ ಮುತಾದವುಗಳನ್ನು ಪ್ರಚಲಿತವಾಗಿವೆ.

ಕನ್ನಡ ಲಾವಣಿ ವಿದ್ವಾನ್ ಬಿ. ನೀಲಕಂಠಯ್ಯನವರು ಸುಮಾರು ಇಪ್ಪತ್ತು ವರುಷ ಸಂಚಾರದಲ್ಲಿ ತಮ್ಮ ಸಂಗತಿಗಳೊಂದಿಗೆ ರಾಷ್ಟ್ರೀಯತೆನ್ನು ಹಾಡುತ್ತ ಮಹಾತ್ಮಾಗಾಂಧೀಜಿಯವರ ಗುಣಗಾನವನ್ನು ಒಂದೇ ಡಪ್ಪು ಬಡೆದು ಹಾಡುವುದನ್ನು ಧಾರವಾಡದ ಕೆಲವು ಮಹನೀಯರು ನೋಡಿದ್ದುಂಟು, ಕೇಳಿದ್ದುಂಟು.

### ಗಾಂಧೀ ಮಹಾತ್ಮರ ಗುಣಗಾನ

ಜೈ ಗಾಂಧೀಮಹಾತ್ಮಾ ಓಧರಾತ್ಮಾ
ನೀನೆಲೆ ಭಾರತ ಧನ್ಯಾತ್ಮಾ ।।ಪ।।
ನೀನೆಲೆ ಭಾರತ ಜನಗಣ ಸೋಮ
ನೀನೆಲೆ ದೀನೋದ್ಧಾರಣ ಧಾಮ
ನೀನೇ ಸ್ವತಂತ್ರ ಸ್ವರಾಜ್ಯದ ಭೀಮಾ-ನೀನೆಲೆ ।।೧।।

ಕುಂಬಿಣಿ ಹರಿಜನ ಪಾವನ ಧಣಿಯೆ।
ಸಂಭ್ರಮ ಭಾರತ ಮುಕುಟ ಮಣಿಯೆ
ತುಂಬಿದ ಅಹಿಂಸಾ ತತ್ವದ ಗಣಿಯೇ-ನೀನೆಲೆ ।।೨।।

ಸತ್ಯ-ಶಾಂತಿ ಸಂಗ್ರಾಮದ ಶೂರ।
ಸತ್ಯ ಪ್ರತಾಪ ಪ್ರದೀಪ ಪ್ರಚಾರ
ಮಿಥ್ಯಕರ್ಮಕುಲಮೂಲ ಸಂಹಾರಾ-ನೀನೆಲೆ ।।೩।।

ಮೀರಿದ ಮಹಾವೃದ್ಧಾಪ್ಯದ ಕಾಲ
ಮೂರುವಾರ ಉಪವಾಸ ವಿಶಾಲ
ಮೂರನೇ ಸಲ ನೀನೆಸಗಿದೆ ಲೀಲಾ-ನೀನೆಲೆ ।।೪।।

ರಾಜಕೀಯ ಮಹಾಚದುರ ಪ್ರವೀಣ
ರಾಜಕೀಯ ರಣರಂಗದ ದ್ರೋಣ
ನಿಜನೀಲ್ಕಂಠನು ನುತಿಪನಿಮ್ಮ ಚರಣ-ನೀನೆಲೆ ।।೫।।

ಭಾರತದ ರಾಷ್ಟ್ರಪಿತನೆಂದೆನಿಸಿ ಅಮರರಾದ ಮಹಾತ್ಮಾಗಾಂಧೀಜಿಯವರ ಇಡೀ ಬದುಕು ಭಾರತೀಯರ ಮೇಲೆ ಪ್ರಭಾವ ಬಿದ್ದಿದೆ, ಕನ್ನಡ ಜನಪದ ಪ್ರಕಾರಗಳಲ್ಲೆಲ್ಲ

ಮಹಾತ್ಮಾಗಾಂಧೀಜಿಯವರ ಚಿತ್ರಣ ಮೂಡಿನಿಂತೆದೆ. ಕೋಲುಪದಗಳಲ್ಲಿ ಡೊಳ್ಳಿನ ಹಾಡುಗಳಲ್ಲಿ, ಕಿರುಗೊಂಬೆಗಳಲ್ಲಿ ಬಯಲಾಟಗಳಲ್ಲಿ ಜಾನಪದ ಶ್ರವ್ಯ ಮತ್ತು ದೃಶ್ಯಗಳಲೆಲ್ಲ ಇವರ ಬಗೆಗೆ ಸ್ವಾತಂತ್ರ್ಯದ ಬಗೆಗೆ ನಿಜವಾದ ಪರಿಕಲ್ಪನೆ ಮೂಡಿನಿಂತಿದೆ. ಯಾರೋ ಅವರನ್ನು ಅಶಕ್ತರೆಂದು ಕರೆದರೆ; ಅದು ಕರೆಯುವವರ ಅಶಕ್ತತನವೇ ಹೊರತು ಮಹಾತ್ಮಾಗಾಂಧೀಜಿಯವರದು ಅಲ್ಲ. ಅವರು ಇಪ್ಪತ್ತನೆಯ ಶತಮಾನದ ಯುಗಪುರುಷರೇ ಸರಿ.

## ವೀರ ಮಹಿಳೆಯರ ಮಹಿಮೆ

ಕನ್ನಡ ನೆಲದಲ್ಲಿ ಭಾರತ ಸ್ವಾತಂತ್ರ್ಯದ ಸಂಗ್ರಾಮದ ಪ್ರಸಂಗದಲ್ಲಿ ನಮ್ಮ ವೀರ ಮಹಿಳೆಯರನ್ನು ಗುಣಗಾನ ಮಾಡಲಾಗುತ್ತಿತ್ತು. ಈಗ ಅವ ಸ್ಮಾರಕಗಳನ್ನು, ಮೂರ್ತಿಗಳನ್ನು ನಿಲ್ಲಿಸಲಾಗುತ್ತಿದೆ. ಅಂತಹವರಲ್ಲಿ ಬೆಳವಡಿ ಮಲ್ಲಮ್ಮ ಕಿತ್ತೂರು ಚೆನ್ನಮ್ಮ ಒನಕೆಯ ಓಬವ್ವ, ಕೆಳದಿ ಚೆನ್ನಮ್ಮ ಅಬ್ಬಕ್ಕಾ ದೇವಿ ಮುಂತಾದವರು.

ಚಂಡಿಯೋ ಚಾಮುಂಡಿಯೋ ಕಿತ್ತೂರು, ಚೆನ್ನಮ್ಮ ಸುತ್ತೂರು ಓಡತ್ಯಾಗಿ, ಹತ್ತು ಸಾವಿರ ದಂಡು,.........ಎಂಬ ಕಿತ್ತೂರಿನ ಲಾವಣಿ, ಚನ್ನಮ್ಮಾಜಿಯ ವೀರಶ್ರೀ ಮೊಳಗುತ್ತಿದೆ. ಈ ಲಾವಣಿಯಲ್ಲಿ ಬರುತ್ತಿರುವ ವೀರವಾಣಿಗಳು ಸ್ವಾತಂತ್ರ್ಯದ ಪರಿಕಲ್ಪನೆಯ ಚೇತನಗಳಾಗಿ, ಬ್ರಿಟಿಷರ ವಿರುದ್ಧದ ಘೋಷಣೆಗಳಾಗಿ ಮೊಳಗಿದವು. (ಜಾನಪದದಲ್ಲಿ ಕಿತ್ತೂರು ಸಂ|| ಡಾ| ನಿಂಗಣ್ಣ ಸಣ್ಣಕ್ಕಿ ಶಿವಲಿಂಗಪ್ಪ ಭಾವಿಕಟ್ಟಿ ಇವರ ಸಂಗ್ರಹ ನೋಡಬೇಕು)

ಒನಕೆಯ ಓಬವ್ವನ ಕುರಿತು, ಜನಪದ ಕಥನಗಳು ಹೈದರಲಿಯ ವಿರೋಧ ವಾದವುಗಳು. ನಮ್ಮ ನಾಡಿಗೆ, ನಮ್ಮ ದೇಶಕ್ಕೆ ಪರಕೀಯರು ಹಲ್ಲೆ ಮಾಡಿದ್ದು ಜನತೆಯ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದು, ಸ್ವತಂತ್ರ ಹೋರಾಟ ಜನ ಮನದಲ್ಲಿ ಹುಟ್ಟಿಕೊಂಡಿತು. ಒನಕೆಯ ಓಬವ್ವನು ಐತಿಹಾಸಿಕ ಮಹಿಳೆಯರಲ್ಲಿ ಮಹತ್ವ ಪಡೆದಳು.

ಚಿತ್ರದುರ್ಗದ ವೀರ ಮಹಿಳೆಯಾ
ಚರಿತೆಯ ನಾನು ಹಾಡುವೆ ದುರ್ಗದ
ಒನಕೆಯ ಓಬವ್ವನ ಅಮರಗೀತೆ ||ಪ||

ಈ ಹಾಡನ್ನು ಹೇಳುವಾಗ ಕೇಳುವಾಗ ವೀರಮಹಿಳೆಯ ನಾಡು ನಮ್ಮದಾಗಿ ಚೇತನ ಚಿಮ್ಮುತ್ತದೆ.

ಹಾಗೇ ವೀರಶ್ರೀಯನ್ನು ಮೆರೆದ, ಬೆಳವಡಿಯ ಮಲ್ಲಮ್ಮ ಕೆಳದಿಯ ಚೆನ್ನಮ್ಮ ಅಬ್ಬಕ್ಕಾದೇವಿ ಕುರಿತಾದ ಜನಪದ ವೀರಗೀತೆಗಳು ಜನತೆಗೆ ಉತ್ತೇಜನ ನೀಡಿವೆ.

ಈಗಲೂ ಜನಪದರ ಆಚರಣೆಗಳಾದಿ ಹಬ್ಬ-ಹುಣ್ಣಿಮೆ, ಜಾತ್ರೆ, ಉತ್ಸವ, ರಥೋತ್ಸವ ಸ್ವಾತಂತ್ರ್ಯದ ದಿನ ಪ್ರಜಾತಂತ್ರದಿನ (ಗಣರಾಜ್ಯೋತ್ಸವ) ನಾಡಹಬ್ಬದ ಉತ್ಸವಗಳಲ್ಲಿ

ವೀರಮಹಿಳೆಯರ ರೂಪಕಗಳನ್ನು ಪ್ರದರ್ಶಿಸಲಾಗುತ್ತಿದೆ. ಗೊಂಬೆಯಾಟಗಳು, ಬಯಲಾಟಗಳು ಪ್ರದರ್ಶನಗೊಳ್ಳುತ್ತಲೇ ಇವೆ.

## ಯಕ್ಷಗಾನ ಪ್ರಸಂಗಗಳಲ್ಲಿ ಪರಿಕಲ್ಪನೆ

ಕರ್ನಾಟಕದ ಕರಾವಳಿಯ ತೀರದಲ್ಲಿ ಯಕ್ಷಗಾನ ಬಯಲಾಟಗಳು ಯಕ್ಷರಂಗವಾಗಿ, ಕರ್ನಾಟಕದ ವೈಭವ ಕಲೆಯಾಗಿ ರಾಜ್ಯ, ರಾಷ್ಟ್ರ ಅಂತರ ರಾಷ್ಟ್ರೀಯ ಖ್ಯಾತಿಗೊಳಗಾಗಿದೆ. ಇಂತಹ ಕಲೆಯಲ್ಲಿ ರಾಷ್ಟ್ರೀಯತೆಯನ್ನು ತರಲು ಪ್ರಯತ್ನಗಳು ನಡೆದುದ್ದುಂಟು.

ಸ್ವಾತಂತ್ರ್ಯದ ವೇಳೆಗೆ ಪೂರ್ವ ಮತ್ತು ಸಮಕಾಲೀನತೆಯಲ್ಲಿ ಹಲವಾರು ಯಕ್ಷಗಾನ ಪಟುಗಳು, ಪಾತ್ರಧಾರಿಗಳಾಗಿ, ಅರ್ಥವಂತಿಕೆಯಲ್ಲಿ 'ಸತ್ಯ ಹರಿಶ್ಚಂದ್ರ' ಪ್ರಸಂಗವನ್ನು ಪ್ರಬಲವಾಗಿ ಪ್ರದರ್ಶಿಸುತ್ತಿದ್ದರು. ಮಧ್ಯದಲ್ಲಿ ಬಳಿಕ ಸೌಮ್ಯ ಹರಿಶ್ಚಂದ್ರ ಪ್ರಯೋಗದ ಅರ್ಥವಂತಿಕೆಯಲ್ಲಿ ಮಹಾತ್ಮಾಗಾಂಧೀಜಿಯ ಗುಣಗಾನ ಮಾಡಲಾಯಿತು. ಕರೆಮನೆ ಮಹಾಬಲ ಹೆಗಡೆಯವರು ತಮ್ಮ ತಂಡ ಗಾಂಧೀಜಿಯವರ ಸತ್ಯಾಗ್ರಹವನ್ನು ಪ್ರಚಾಮಾಡಿದ ಸಂಗತಿಯನ್ನು ತಿಳಿಸಿದ್ದಾರೆ.

ಕ್ರಿ. ಶ. ೧೯೪೦ ರಿಂದ ೧೯೪೭ರ ವರೆಗೆ 'ಸ್ವಾತಂತ್ರ್ಯ ವಿಜಯ' ಎಂಬ ಯಕ್ಷಗಾನ ಪ್ರಸಂಗವನ್ನು ಜಿನ್ನಾ, ಗಾಂಧೀಜಿ, ನೆಹರು, ಪಟೇಲ, ಕೃಷ್ಣ ಮುಂತಾದ ಪಾತ್ರಧಾರಿಗಳು ರಂಗದ ಮೇಲೆ ಅಭಿನಯಿಸಿ, ಜನತೆಗೆ ಪ್ರಭಾವವನ್ನು ಬೀರುತ್ತಿರುವುದನ್ನು ಡಾ|| ಎಸ್. ಆರ್. ನಾಯಕ ಅವರು ತಿಳಿಸುತ್ತಿದ್ದಾರೆ.

ಕೃಷ್ಣ ಸಂಧಾನ' ಎಂಬ ಅರ್ಥವಂತಿಕೆಯ ಯಕ್ಷಗಾನವನ್ನು ಪ್ರಯೋಗ ಮಾಡಲಾಯಿತು. ಸ್ಟಾಪರ್ಡ್ ಕ್ರಿಪ್ಸ ಮಹಾತ್ಮಾ ಗಾಂಧೀಜಿ, ಅಬ್ದುಲ್ ಕಲಾಮ್ ಆಝಾದ್, ನೆಹರು, ವಲ್ಲಭಬಾಯಿ ಪಟೇಲ ಮುಂತಾದ ಪಾತ್ರಗಳು ಪರಿಣಾಕಾರಿಯಾದ ಅರ್ಥವಂತಿಕೆಯನ್ನು ಪ್ರಯೋಗಿಸಲಾಗುತ್ತಿತ್ತು. ಕೃಷ್ಣ ಸಂಧಾನ ಮುರಿದುದರಿಂದ ಆ ಯಕ್ಷಗಾನವನ್ನು ಕೃಷ್ಣ ಸಂಧಾನವಾಯಿತೆಂದು ಜನರು ಅಂದುಕೊಳ್ಳುತ್ತಿದ್ದಾರ. ಭಾರತ ವಿಜಯಾ ಎಂಬ ಪ್ರಸಂಗವನ್ನು ಗಜಾನನ ಹೆಗಡೆಯವರು ಬರೆದು, ಮೂರೂರು ಕುಮಟಾಗಲ್ಲಿ ತಾಳ ಮದ್ದಳೆಯ ಅರ್ಥದಾರಿಗಳು ಪ್ರಭಾವ ಬೀರಿತದರು. ಶಿರಶಿ, ಕುಮಟಾ, ಹೊನ್ನಾವರ ಅಂಕೋಲ ಕಾರವಾರ ಭಾಗಗಳಲ್ಲಿ ಒಳಪ್ರದೇಶದ ಹಳ್ಳಿಗಾಡಿನಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಯಕ್ಷಗಾನ ಬಯಲಾಟಗಳಿಂದ ತಿಳಿಸಲಾಗುತ್ತಿತ್ತು. 'ಗಾಂಧೀ ಮಹಾತ್ಮನ ಬೀಜಮಂತ್ರವಿದು ದೇಶಕಾರ್ಯವಿದು ದೇಶಾಭಿಮಾನ ಮೂಡಲೆಂದು ಎಂಬ ಹಾಡುಗಳು ಮೊಳಗುತ್ತಿದ್ದವು. ಅನೇಕ ಸ್ವಾತಂತ್ರ್ಯದ ಹೋರಾಟಗಾರರು ಈ ಮಾತುಗಳನ್ನು (ಹಾಡುಗಳು) ಮಂತ್ರವೆಂಬಂತೆ ಸ್ವೀಕರಿಸಿದರು.

ಮಹಾತ್ಮಾಗಾಂಧೀಜಿಯವರ ಪ್ರಭಾವವು ಕನ್ನಡಿಗರಲ್ಲಿ 'ಅವರೊಬ್ಬ ಅವತಾರಿಗಳು' ಎಂಬಂತಹ ಪರಿಕಲ್ಪನೆ ಮೂಡಿತು. ಹರ್ಡೇಕರ ಮಂಜಪ್ಪನವರು ಗಾಂಧೀಜಿಯ ಕನಸುಗಳನ್ನು ಈ ನೆಲದಲ್ಲಿ ನನಸನ್ನಾಗಿ ಮಾಡಿದರು. ಜನತೆ ಅವರಿಗೆ 'ಕರ್ನಾಟಕದ ಗಾಂಧೀಜಿ' ಎಂದೇ ಹೆಸರಿಟ್ಟರು. ಕನ್ನಡ ನೆಲದಲ್ಲಿ ಮೈಲಾರ ಮಹಾದೇವಪ್ಪನವರಿಗೆ ಮಹಾತ್ಮಾಗಾಂಧೀಜಿಯವರು 'ಮಹಾದೇವ ನನ್ನ ಮಗ' ಎಂದೇ ಹೆಸರನ್ನು ಕೀರ್ತಿಯನ್ನು ನೀಡಿದರು. ಸಹಸ್ರ ಸಹಸ್ರ ಸಂಖ್ಯೆ ಜನತೆಗೆ ಮಹಾತ್ಮ ಗಾಂಧೀಜಿಯವರು ಸ್ಫೂರ್ತಿಯ ಸೆಲೆಯಾದರು. (ಡಾ. ಸೂರ್ಯನಾಥ ಕಾಮತರ ಸ್ವಾತಂತ್ರ್ಯ ಸಂಗ್ರಾಮ ನೋಡಿರಿ)

## ೩. ಸ್ವಾತಂತ್ರ್ಯದ ನಂತರದ ಪರಿಕಲ್ಪನೆ

ಇಡೀ ರಾಷ್ಟ್ರದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮವು ನಡೆದುದು ಸರ್ವವಿಧದಿಂದ ಭಾರತದ ತುಂಬಿರುವ ಜನಕ್ಕೆ ತಿಳಿಯಿತು. ಕೆಲವರು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದರೂ ಆಳರಸರನ್ನು, ಬ್ರಿಟಿಷರನ್ನು ನೆನೆಯಿಸುವುದನ್ನು ಬಿಡಲಿಲ್ಲ ಸಂಸ್ಥಾನಗಳ ವಿಲೀನೀಕರಣವಾದರೂ ಸಂಸ್ಥಾನಿಕರ ಅಡಿಯಾಳಾಗಿರುವ ಮನಸ್ಸನ್ನು ತೋರಿದರು. ಉಕ್ಕಿನ ಮನುಷ್ಯನೆಂದು ಹೆಸರಾದ ವಲ್ಲಭಾಯಿ ಪಟೇಲರನ್ನು ಹೊಗಳಿ ಜನಪದರು ಹಾಡುಕಟ್ಟಿದರು. ರಾಷ್ಟ್ರನಾಯಕರ ಜೀವನ, ಕಾರ್ಯವಿಧಾನ, ಸ್ವಾತಂತ್ರ್ಯಕ್ಕೆ ಅವರ ಕಾಣಿಕೆ ಇತ್ಯಾದಿ ಕುರಿತು ಹಾಡು ರಚಿಸಿ ತಮಗೂ – ಇತರರಿಗೂ ಸ್ಫೂರ್ತಿ ಪಡೆದರು ಮತ್ತು ನೀಡಿದರು. ಅಂತಹ ಕೆಲವು ತ್ರಿಪದಿಗಳನ್ನಿಲ್ಲಿ ನೋಡುವಾ. ಬ್ರಿಟಿಷರ ಒಡೆದು ಆಳಿ ಅರಸರನ್ನು ಹಾಳು ಮಾಡಿದ ರೀತಿ ಕೇಳಿರಿ.

ಆಂಗ್ಲರು ಅನ್ನವರು ಇಂಗ ಮಾರುದಕ ಬಂದವರ
ದಂಗು ದುಲಿದಾರ ತಿಳಿಲಿಲ್ಲ! ದೇಶದ
ದಣಿಯರನ ಹಾಳ ಮಾಡ್ಯಾರ॥ ॥೧॥

ಜಗಳವಾಡುತ ಬಂದು, ಜಗಳಕ ನಿಂತಾರ
ಜಗಕ ಮಾಯೆ ತೋರ್‍ಯಾರ! ಆಂಗ್ಲರು
ಜಾತಿಯ ಬೀಜ ಬಿತ್ಯಾರ॥ ॥೨॥

ನಮ್ಮ ಧರ್ಮವನ್ನು ಬಿಟ್ಟು, ಅನ್ಯಧರ್ಮಿಯರಾಗುವ ಜನಕಂಜು, ಜಾಗ್ರತೆ ನೀಡಿದ್ದು.

ಸಾಧು–ಸಂತರ ಕೂಡಿ, ದೇಶಕಾದ ನೀತಿ ನೋಡಿ
ಧರ್ಮದ ಗುಟ್ಟ ಸಾಡ್ಯಾರ! ದೇಶದ
ಸ್ವಾತಂತ್ರ್ಯದ ಚಳವಳಿ ನಡಿಸ್ಯಾರ॥ ॥೩॥

ಸ್ವಾತಂತ್ರ್ಯದ ಚಳುವಳಿಯ ಜೊತೆ; ಖಾದಿ ರಚನೆಯ ಬಗೆಗಿನ ಹಾಡುಗಳು

ರಾಟಿಯ ತಿರವೂತ ನೂಲನು ತೆಗೆದಾರ
ರಾಷ್ಟ್ರದ ನೀತಿ ತಿಳಿಸ್ಯಾರ। ಮಹಾತ್ಮರು
ಖಾದಿಯ ಉದ್ಧಾರ ಮಾಡ್ಯಾರ ॥೪॥

ಖಾದಿಯ ಉಟ್ಯಾರ, ಖಾದಿಯ ತೊಟ್ಯಾರ
ಖಾದಿ-ಸುಖದ ಹಾದಿ ಹೇಳ್ಯಾರ। ಮಹಾತ್ಮರು
ಕರಾರ ಬರದ ಕಳುವ್ಯಾರ॥ ॥೫॥

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಬಳಿಕ, ಪ್ರಜಾಪ್ರಭುತ್ವದ ಮಹತ್ವ ಹೆಚ್ಚಿತು. ಪ್ರಜಾಪ್ರಭುತ್ವವನ್ನು ಕುರಿತಾದ ಪ್ರಚಾರ ವಿವಿಧ ಬಗೆಗಳಿಂದ ಸಾಗಿತ್ತು.

ಭಾರತ ಸ್ವತಂತ್ರ್ಯವಾದ ದಿನ ಹುಲಕುಂದ ಕವಿ ಶಿವಲಿಂಗ ಅವರು ರಚಿಸಿದ ಗೀತವು ಈಗಲೂ ಪ್ರಚಾರದಲ್ಲಿದೆ. ಗೀಗೀ ಹಾಡುಕಾರರು ರಾಷ್ಟ್ರದ ದಿನೋತ್ಸವ ಪ್ರಸಂಗಗಳಲೆಲ್ಲ ಹಾಡುತ್ತಾರೆ. ಮುಕ್ಯಾಗಿ (ಮುರುಕಾದ) ಹೋದ ಇಡೀ ಭಾರತದ ಇತಿಹಾಸವನ್ನು ಮೌಖಿಕವಾದ ದಾಖಲೆಗಳನ್ನು ಪಡೆದು, ಜಾನಪದದಿದಂ ಹೊಸ ಇತಿಹಾಸ ಬರೆಯಲು ಶಕ್ಯವಿದೆ ಎಂಬ ಮಾತನ್ನು ಒತ್ತಿ ಒತ್ತಿ ಹೇಳಬೇಕಾಗಿತ್ತದೆ.

### ಪುಣ್ಯದಿನ ಭಾರತ

ಸನ್ ಹತ್ತೊಂಬತ್ತನೂರ ನಾಲವತ್ತೇಳನೆ
ಆಗಷ್ಟು ಹದಿನೈದನೆಯ ತಾರೀಖು
ಶುಕ್ರವಾಗರ ಉದಯಕ್ಕ ದೊರಕೀತು ಸ್ವಾತಂತ್ರ್ಯ ॥ಪ॥

ದೊರಕಿತ ಭಾರತದ ಸ್ವಾತಂತ್ರ್ಯ
ಹರದ ಹೋತು ಪಾರತಂತ್ರ್ಯ
ಹಳ್ಳಿಗಳ ಸಡಗರ ನಗರಗಳ ಶೃಂಗಾರ
ಮಕ್ಕಳು, ಮುದುಕರು, ನಾರಿ ಪುರುಷರೆಲ್ಲಾರ
ಧರಿಸ್ಯಾರ ಹೊಸವಸ್ತ್ರ ತರಿಸಿ ಪುಷ್ಪದಹಾರ
ಕುಸುಮದ ಮಳೆ ಸುರಿಸ್ಯಾರ ಊರೂರ।

......................................................................

ಜನರ ಉತ್ಸಾಹ ಭಕ್ತಿಯಿಂದ ರಾಷ್ಟ್ರನಾಯಕರ ಭಾವ ಚಿತ್ರಗಳ ಪೂಜೆ ಮದ್ದುಗುಂಡಿನ ಆರ್ಭಟ, ಮುಖಂಡರ ಭಾಷಣಗಳ ತೂರ್‍ಯಾಟ ನಡೆದವು ದೇವರಿಗೆ ಕರ್ಪೂರ ಬೆಳಗಿದರು ಬಳಿಕ.

ಮಂಗಲ ಮಾಡಿ ಅನ್ನುವರು ಹರಾಹರಾ
ಅನಾಥರಿಗೆ ಆನಂದ ಅನ್ನ ಸಂಪೂರ್ಣ

ನಮ್ಮ ರಾಷ್ಟ್ರದ ನಿಜವಾದ ಜೀವಾಳ ಕೃಷಿ ಮತ್ತು ಚರಖಾಗಳಲ್ಲಿದೆ. ಅವು ನಮ್ಮ ಜೀವ ಜೀವಾಳ. ಭಾರತ ಮಾತೆಯ ಸಂಕೇತವೆಂದರ ನಮ್ಮ ರಾಷ್ಟ್ರಧ್ವಜ ಇತ್ಯಾದಿ ಉನ್ನತ ಕಲ್ಪನೆಗಳು ಜನರಲ್ಲಿ ಬಿಂಬಿತವಾದವು. ಕಾರ್ಮಿಕರು ಕೃಷಿಗೂ ಮತ್ತು ಕುಟೀರಗಳ ಕೆಲಸಕ್ಕೆ ರಕ್ತನಾಳಗಳಿದ್ದಂತೆ.

**ಕೃಷಿ ಕುರಿತು:**

ನಮ್ಮ ರಾಷ್ಟ್ರ ನೇಗಿಲಯೋಗಿಗಳ ತಾನ
ಭೂಮಿ ತಾಯಿಯೊಳಗ ನಡಿಸ್ಯಾರ ಯೋಗ
ನೆಲ ಹದಮಾಡಿ, ಹರಗಿ ಬಿತ್ಯಾರ, ಬಿತ್ಯಾರ
ಹೊಸ ಬೀಜ ಅನ್ನಪೂರ್ಣೆಗಾಗಿ।

**ಹಾಗೇ ಚರಖ ಕುರಿತು:**

ದುಡ್ಡು ಕೊಡುವುದು ದುಡಿವರೆ ಚರಖ
ಬಡ ಜನರ ಕಾಯ್ವುದು ಚರಖ
ಮೊಡವಿಗೆ ಒಡೆದು ಚರಖ
ಕಡು ದಾರಿದ್ರ್ಯ ಬಿಡಿಸುವವದು ಚರಖ

**ಭಾರತ ರಾಷ್ಟ್ರಧ್ವಜದ ಪರಿಕಲ್ಪನೆ**

ಕೇಸರಿ ವರ್ಣವು ಸ್ವಾರ್ಥತ್ಯಾಗ ಚಿಹ್ನ
ಬಿಳಿಯ ಬಣ್ಣ ಸತ್ಯ - ಶಾಂತಿ ಕೂನ
ಹಸಿರು ಬಣ್ಣ ವಿಶ್ವಾಸ ಗುರ್ತಪೂರ್ಣ
ಮೂರು ಗುಣಗಳದು ತೋರುವ ಚಿಹ್ನೆ

ಸ್ವಾತಂತ್ರ್ಯದ ನಂತರವೇ ಭಾರತದ ರಾಷ್ಟ್ರಧ್ವಜದ ಪರಿಕಲ್ಪನೆ ಮೂಡಲು ಸುರುವಾದುದು. ಶಾಲೆ, ಪ್ರೌಢಶಾಲೆ, ಕಾಲೇಜು, ವಿದ್ಯಾರ್ಥಿಗಳ ಬಳಗ, ಅಧ್ಯಾಪಕವೃಂದ, ಸ್ವಾತಂತ್ರ್ಯಯೋಧರು ರಾಜಕೀಯ ಕಾರ್ಯಕರ್ತರು, ಮಂತ್ರಿ ಮಾನ್ಯರು ಮುಂತಾದವರೆಲ್ಲರೂ ರಾಷ್ಟ್ರಧ್ವಜದ ರಾಷ್ಟ್ರಲಾಂಛನ, ರಾಷ್ಟ್ರಗೀತೆಗಳ ಬಗೆಗೆ ಸಾರಾಸಾರ ತಿಳುವಳಿಕೆಯನ್ನು ನೀಡುತ್ತ ನಡೆದರು ಜನಪದದಲ್ಲಿ ರಾಷ್ಟ್ರೀಯ, ಪರಿಕಲ್ಪನೆಯನ್ನು ನೀಡಿದವರು ಜನಪದ ಗಾಯಕರು, ಕಲಾವಿದರು ಮುಂತಾದವರು.

## ಧ್ವಜ ವಂದನಾ ಗೀತ

ಧ್ವಜ ವಂಧನೆಗೆ ನಡೆಯಿರಿ
ಸ್ವಾತಂತ್ರ್ಯದ ಸುಖ ಪಡೆಯಿರಿ
ವಂದೇ ಮಾತರಮ್
ವಂದೇ ಮಾತರಮ್
ಜಯ ಭಾರತ ಮಾತರಮ್

ಪ್ರತಿ ವಿದ್ಯಾ ಸಂಸ್ಥೆಗಳಲ್ಲಿ ಜನಪದರ ಗೀತಗಳನ್ನು ತಮ್ಮ ಗೀತೆಗಳೆಂದು ತಿಳಿದವರು ಹಲವಾರು ಜನರು ಪ್ರಕಟಣೆಗಳನ್ನು ಮಾಡಿದುದುಂಟು. ಹೇಗೆ ನಡೆದರೂ ಭಾರತ ಸ್ವಾತಂತ್ರ್ಯದ ಪರಿಕಲ್ಪನೆಯು ಜನತೆಯಲ್ಲಿ ಗಟ್ಟಿಗೊಳ್ಳ ತೊಡಗಿತು.

ದಕ್ಷಿಣ ಕರ್ನಾಟಕದಲ್ಲಿ ಬಿ. ನೀಲಕಂಠಯ್ಯನವರು ಬಾರತ ಸ್ವಾತಂತ್ರ್ಯದ ನಂತರದಲ್ಲೂ ತಮ್ಮ ರಚನೆಗಳನ್ನು ನಡೆಯಿಸಿದರು. ಪ್ರಜಾಪ್ರಭುತ್ವ ಕುರಿತು ಬಹಳಷ್ಟು ಲಾವಣಿಗಳನ್ನು ರಚಿಸಿದರೆಂಬ ಪ್ರತೀತಿ. ಇಲ್ಲಿ ಪ್ರಜಾಪ್ರಭುತ್ವದ ದಿನಾಚರಣೆ ಲಾವಣಿ ತಿಳಿಯೋಣ

### ಪ್ರಜಾಪ್ರಭುತ್ವ ಲಾವಣಿ

ಬಡತನವದ್ಭುತ ನೋಡುತ ಸರ್ವತ ಫುಡಿಫುಡಿ ಸಾರ್ಥತೆ ಮಾಡುತ್ತ
ಬಿಡದಲೆ ಭಾರತ ಪಡೆದು ಸ್ವತಂತ್ರ್ಯದ ನಡೆದಿದೆ ಪ್ರಜಾಪ್ರಭುತ

ಹೀಗೆಭಾರತದಲ್ಲಿ ನ್ಯಾಶನಲ್ ಕಾಂಗ್ರೆಸ್ ನಡೆಯಿಸಿಧ ಹೋರಾಟವನ್ನು ಧಾದಾಬಾಯಿ ನವರೋಜಿಯವರನ್ನು ಮೊದಲುಗೊಂಡು ಹೋಂ ರೂಲ್ ಚಳವಳಿ, ಚಲೇಜಾವ್ ಚಳುವಳಿ, ವೀರಭಗತ್‌ಸಿಂಗ ಮುಂತಾದವರ ವಿವರಗಳನ್ನು ಲಾವಣಿಕಾರ ನೀಡುತ್ತಾನೆ.

ದೇಶಭಕ್ತ ಮಹಾದೇವ ದೇಸಾಯಿ, ಕಸ್ತೂರಬಾ ದೇವಿ, ಸರೋಜನಿದೇವಿ ಕಣ್ಮರೆ, ಮೈಸೂರಿನ ಈಸೂರ್ ವೀರರ ಕಥೆ. ಪಾಶಿಯದ ಪ್ರಸಂಗ –ಪ್ರಶಂಸೆ ದೇಶಭಕ್ತರ ವೈಖರ ಇತ್ಯಾದಿ ಮೂಡಿನಿಂತಿವೆ

ಗುಲ್ ಉಡನ್ ದಲ್ಲಿ ಲಾವಣಿಕಾರ ಗಾಂಧೀಜಿಯವರ ಬಗೆಗೆ ಮೂಡಿಸಿದ ಪರಕಲ್ಪನೆಯನ್ನು ನೋಡೋಣ.

ಗಾಂಧೀಜಿಯ ಜ್ಞಾನಶಕ್ತಿ ಚಂದ।
ಗಾಂಧೀಜಿಯ ಆತ್ಮಶಕ್ತಿ ಅಂದ।
ಗಾಂಧೀಜಿಯ ಅಹಿಂಸೆ ಆನಂದ।
ಗಾಂಧೀಜಿಯಿಂದಲೇ ಗುಲಾಮಗಿರಿ ತೊಲಗಿತು ನಿಜದಿಂದ॥

ಪ್ರಜಾಪ್ರಭುತ್ವವನ್ನು ಹೊಂದಿದ ಭಾರತ ದೇಶದಲ್ಲಿ ಮೊದ ಮೊದಲು ತ್ಯಾಗ ಬುದ್ಧಿಯನ್ನು ತೋರಿ, ಸ್ವಾರ್ಥವನ್ನು ತೂರಿ ಒಗೆದ ಮುಖಂಡರೆ ಸ್ವಾರ್ಥ ಸಾಧನೆ

ನಡೆಯಿಸಿ, ಸಿರಿವಂತಿಕೆಯನ್ನು ಪಡೆದುದು ಜನತೆಗೆ ಹಿಡಿಸಲಿಲ್ಲ, ಅದನ್ನು ಲಾವಣಿಕಾರ ಹೇಳಿದ್ದು ಕೇಳಿ

**ಉಡನ್**

ಇದೊಂದು ಕೇಳಿ, ಜನರೆಲ್ಲ ಪೂರ್ಣಕಿವಿಗೊಟ್ಟು
ಅಧಿಕಾರ ಲಾಲಸೆ ಎಂಬುದ ಕಟ್ಟಿದ್ದು
ಮುದದಿಂದ ಲಂಚ ಮೇಣ್ ಕಾಳಸಂತೆಯನು ಸುಟ್ಟು
ಒದಗಿರುವ ಸ್ವತಂತ್ರ್ಯವನು ಉಳಿಸಿಕೊಳ್ಳಿ ಶ್ರಮಪಟ್ಟು॥

..............................................................................

ಇಂದು ಲಭಿಸಿರುವ ಘನಸರಕಾರವು, ಪ್ರಜೆಗಳಿಗೆ ಹೊಣೆ ಇರಬಹುದು

.............................................................

ಬಿಡದೆ ಶ್ರೀಗುರು ಪುಟ್ಟನಂಜಣ್ಣರ ಅಡಿಗಳಿಗರ್ಪಿಪ ಪೀಕವಿತ
ಜಡಮೂರ್ತಿಗಳಿಗಿದು ಘರಟ್ಟವೆನ್ನುತ ನೀಲಕಂಠಯ್ಯನ ಪದ ರಚಿತ।

ಭಾರತ ಸ್ವತಂತ್ರ್ಯದ ನಂತರ ಪವಿತ್ರವಾದ ಖಾದಿಯ ಪ್ರಚಾರ ನಡೆಯಿತು. ದೇಶದಲ್ಲಿ ಜನತೆಯಲ್ಲಿರುವ ಅಜ್ಞಾನ ಹಾಳಾಗಲು ಶಿಕ್ಷಣದ ಅವಶ್ಯಕತೆ, ಆರೋಗ್ಯ ಉಳಿಯಲು ಉತ್ತಮ ಆಹಾರ ಬಡತನ ನೀಗಲು ಉದ್ಯೋಗ, ನಮ್ ಪ್ರಾಣಿಗಳ ಸಾಕುವಿಕೆ, ಗೋಹತ್ಯಾ ನಿಷೇಧ ಪಾನನಿರೋಧ ಮುಂತಾವುಗಳ ಕುರಿತಾದ ಗೀತಗಳು. ಜನಪದಕವಿಗಳು ಆಶುಕವಿಗಳಾಗಿ ಹಾಡಿದ ಹಾಡುಗಳೂ ಅಸಂಖ್ಯವಾಗಿವೆ.

ಬರುಬರುತ್ತ ಜನಪದ ಗೀತ ರಚನಾಕರಾರರು ರಾಷ್ಟ್ರೀಯ ಕಾರ್ಯಗಳನ್ನು ಕೈಕೊಳ್ಳುವುದರ ಜೊತೆ, ಪ್ರಚಾರ ಕಾರ್ಯವನ್ನೂ ನಡೆಯಿಸಿದರು ನಮ್ಮ ಪುಣ್ಯಭೂಮಿ ಭಾರತದ ಮಹಾತ್ಮರ ದಾರ್ಶನಿಕರ ಬದುಕನ್ನು ಜನಪದದಲ್ಲಿ ಹಾಡಿಕೊಂಡರು. ಅವರು ಬೇರೆ ಬೇರೆ ನಾಡಿನವರಾದರೂ ಒಂದೇ ರಾಷ್ಟ್ರದಲ್ಲಿ ಜನಿಸಿದವರು ಎಂಬ ಪರಿಕಲ್ಪನೆಯನ್ನು ಜನರಿಗೆ ತಿಳಿಸಿಕೊಟ್ಟರು. ಡಾ॥ ಬಿ. ಆರ್. ಅಂಬೇಡಕರ, ಲಾಲ, ಬಾಲ, ಪಾಲ, ಮೋತಿಲಾಲ ನೆಹರು, ಜವಾಹರಲಾಲ ನೆಹರು, ವಲ್ಲಭ ಬಾಯಿ ಪಟೇಲ ಅಬ್ದುಲ್ ಕಲಾಮ್ ಆಝಾದ್ ಗಾನಕೋಕಿಲೆ ಸರೋಜಿನಿ ನಾಯಿಡು, ಸುಭಾಸಚಂದ್ರ, ರವೀಂದ್ರನಾಥ ಠಾಕೂರ, ಮಹಾತ್ಮಾಗಾಂಧೀಜಿ, ಡಾ॥ ರಾಜೇಂದ್ರ ಪ್ರಸಾದ್, ಡಾ॥ ಎಸ್. ರಾಧಾಕೃಷ್ಣನ್ ಮುಂತಾದ ಮೇರು ಸದೃಶ್ಯ ರಾಷ್ಟ್ರನಾಯಕರು ಜನಿಸಿದ್ದು ಭಾರತ ಮಾತೆಯ ಸೇವೆ ಮಾಡಿದ್ದೂ ನಮ್ಮೆಲ್ಲರು ಪುಣ್ಯ ಕನ್ನಡ ನೆಲದ ಕವಿಗಳನ್ನು ಜನಪದರು ಹಾಡಿ ಹರಿಸಿದರು. ನಮ್ಮ ಜನಪದಕವಿ ಹೇಳುವ ಮಾತನ್ನೊಂದು ಲಾಲಿಸೋಣ.

ಧ್ವಜ ವಂದನಕೆ ನೀವು ನಡೆಯಿರಿ
ಸ್ವರಾಜ್ಯ ಸೌಖ್ಯವ ನೀವು ಪಡೆಯಿರಿ
ಇನ್ನು ಮುಂದೆ ಹೆಜ್ಜೆಯ ನೀಡಿರಿ
ಜಯವೆಂದು ಘರ್ಜನೆ ಹೊಡೆಯಿರಿ

**ಸಂದರ್ಭ ಕೃತಿಗಳ ಸೂಚಿ**

೧. ನೂತರ ತುರಾ ಲಾವಣಿ ಮತ್ತು ಹೈದರ ಟೀಪು ಸುಲ್ತಾನ ಲಾವಣಿ ಪುಟ ೫ ರಿಂದ ೧೧ ರ ವರೆಗೆ

–ಬಿ ನೀಲಕಂಠಯ್ಯ, ಶ್ರೀ ಮಹಾಲಕ್ಷ್ಮಿ ಸಿದ್ಧೇಶ್ವರ ಪ್ರೆಸ್ ದಾವಣಗೆರೆ ಪ್ರಕಟಣೆ ೧೯೪೯

೨. ಹೈದರ ಮತ್ತು ಟೀಪು ಸುಲ್ತಾನನ ಲಾವಣಿ, ಲೇಖಕ ಮತ್ತು ಪ್ರಕಾಶಕರು; ತುರಾ ಬಿರುದಾರ ಲಾವಣಿ, ವಿದ್ವಾನ್ ಬಿ. ನೀಲಕಂಠಯ್ಯ, ಬೆಂಗಳೂರು ನಗರ, ೧೯೫೪

೩. ಹೇಳುವೆ ಮಜಕೂರಾ' ಪುಟಗಳು ೨೯–೩೫, ಸಂಪಾದಕರು ಡಾ. ನಿಂಗಣ್ಣ ಸಣ್ಣಕ್ಕಿ ಸಾಹಿತ್ಯ ಭಂಡಾರ ಹುಬ್ಬಳ್ಳಿ ೯೧೭೬

೪. ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ, ೧೯೯೩ ರ ತೃತೀಯ ಮುದ್ರಣ ಪುಟಗಳು ೨೪–೨೫, ಡಾ. ನಿಂಗಣ್ಣ ಸಣ್ಣಕ್ಕಿ

೫. ಅದೇ ಪುಟಗಳು ೨೧–೨೨

೬. ಸಂಗೊಳ್ಳಿ ರಾಯಣ್ಣ ಸಂ. ಡಾ|| ಸೂರ್ಯನಾಥ ಕಾಮತ್ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪುಟ. ೭೬ ಬೆಂಗಳೂರು ಪ್ರಕಟಣೆ ೧೯೯೫

೭. ಮಹಾತ್ಮ ಗಾಂಧೀಜಿ ಲಾವಣಿ' –ಮಮದಾಪೂರ ಮಾರುತಪ್ಪ ಹಾಡಬಲ್ಲವರು ಸಿದ್ದಪ್ಪ ಪಟಾತ, ಮಮದಾಪೂರ ಸಂಗ್ರ ಡಾ. ನಿಂಗಣ್ಣ ಸಣ್ಣಕ್ಕಿ

೮. ಜಾನಪದ ವೀರಗೀತೆಗಳು, ಬಿ.ಬಿ. ಮಹಿಷವಾಡಿ ಪುಟ–೪೪, ಕರ್ನಾಟಕ ವಿಶ್ವವಿದ್ಯನಿಲಯ ಧಾರವಾಡ, ಜನವರಿ ೧೯೭೧

೯. ಶ್ರೀ ಅರವಿಂದರು ಧರ್ಮ ಮತ್ತು ರಾಷ್ಟ್ರೀಯತೆ (ಅನು.) – ಸಿಂಪಿ ಲಿಂಗಣ್ಣ

೧೦. ಭೀಮಕವಿಯ ರಾಷ್ಟ್ರೀಯ ಜನಪದ ಗೀತಗಳು

೧೧. ಭೀಮಕವಿಯ ರಾಷ್ಟ್ರೀಯ ಗೀಗೀ ಪದಗಳು, ಸಂಪಾದಕರು ತಲ್ಲೂರ ರಾಯನಗೌಡರು.

೧೨. ಹೇಳುವೆ ಮಜಕೂರಾ, ಸಂಪಾದಕರು ಡಾ. ನಿಂಗಣ್ಣಾ ಸಣ್ಣಕ್ಕಿ

೧೩. ಕನ್ನಡ ಗೀಗೀ ಪದಗಳು ಸಂ॥ ದುಂಡಿರಾಜ ಲಿಮಯ

೧೪. ಸೀತಾರಾಮ ಪ್ರಕಾಶನ ರಾಮದುರ್ಗ ಪ್ರ. ೧೯೮೫

೧೫. ಜೈ ಹಿಂದ ಪ್ರಜಾಪ್ರಭುತ್ವ ಲಾವಣಿ, ಬಿ. ನೀಲಕಂಠಯ್ಯ, ಬೆಂಗಳೂರು ಸಿಟಿ, ಪ್ರಕಾಶಕರು ಕನ್ನಡ ಲಾವಣಿ ಸಾಹಿತ್ಯ ಸಂಘ ೬೫ ಪುರಾಣ ಶೇಷಾಚಾರಗಲ್ಲಿ ಚಿಕ್ಕ ಪೇಟೆ ಬೆಂಗಳೂರು. ೨೬-೧-೧೯೫೦ ಡಾ॥ ನಿಂಗಣ್ಣಾ ಸಣ್ಣಕ್ಕಿ

ಂ

# "ಜನಪದ ಗೀತ ಸಾಹಿತ್ಯದಲ್ಲಿ ವೀರತನದ ಪರಿಕಲ್ಪನೆ"

ಜನಪದವು ವಿಶ್ವವ್ಯಾಪಿಯಾಗಿ ಹುಟ್ಟಿಕೊಂಡದ್ದು ಮತ್ತು ವಿಶ್ವದಲ್ಲಿ ಬೆಳೆದು ನಿಂತಿದ್ದು ಎಂಬುದರಲ್ಲಿ ಎರಡಿಲ್ಲ ಪ್ರಪಂಚದಲ್ಲಿ ಮೊದಲ ಕುಣಿತನ ಜೊತೆ ಜೊತೆ ಗೀತವು ಮೇಳಗೊಂಡದ್ದು. ಸಂಗೀತವು ಒಳಗೊಂಡದ್ದು ಎಂಬುದು ಸ್ಪಷ್ಟವಾಗಿರುವುದು. ಹಲವು ರೀತಿಯಿಂದ ಸಂಶೋಧಕರು ಅಧ್ಯಯನಕಾರರು ಜನಪದವನ್ನು ಅದರ ಸ್ವರೂಪಗಳನ್ನು ತಿಳಿಸುತ್ತಿದ್ದಾರೆ. ವಿಭಾಗಗಳೊಂದಿಗೆ ಅಧ್ಯಯನ ಹಾಗೇ ಮುಂದೊರೆದಿದೆ. ಕನ್ನಡದಲ್ಲೂ ಈ ರೀತಿ ಅಧ್ಯಯನವು ಸಾಗಿದೆ ಮತ್ತು ಸಾಗುತ್ತಿದೆ.

ಜನಪದರ ವೀರತನಕ್ಕೆ ವಿರೋಚಿತವಾದ ಭಾವನೆಗಳು ಪುಟಿದೆದ್ದು, ವೀರರಿಂದಲೂ, ಪ್ರೇಕ್ಷಕರಿಂದಲೂ ಮಹಿಳೆಯರಿಂದಲೂ ಪುರುಷರಿಂದಲೂ ಉತ್ಕಟ ಭಾವನೆಗಳು ವೀರ ಕುಣಿತಗಳಾಗಿ ವೀರಗೀತಗಳಾಗಿ ಮತ್ತು ಪರಂಪರೆಯಾಗಿ ಕನ್ನಡ ನೆಲದಲ್ಲಿ ಪ್ರಾಚೀನಕಾಲದಿಂದಲೂ ಇಂದಿನವರೆಗೆ ಸಾಗಿ ಬಂದಿವೆ.

ವೀರತನಕ್ಕೆ ಖಚಿತ ಕ್ಷೇತ್ರವೆಂದರೆ ರಣ-ರಂಗ –ಮತ್ತು ಬಂಡಾಯ. ಜೀವನರಂಗವೇ ಒಮ್ಮೊಮ್ಮೆ ಯುದ್ಧರಂಗವಾಗುತ್ತದೆ. ಯುದ್ಧರಂಗವೇ ಜೀವನರಂಗವಾಗುತ್ತದೆ. ಈ ಉದಾಹರಣೆ ನಮ್ಮ ದೇಶದ ಮಹಾಕಾವ್ಯಗಳಾದ ರಾಮಾಣಯಣ ಮತ್ತು ಮಹಾಭಾರತಗಳೇ ಸಾಕ್ಷಿಯಾಗಿವೆ. ಕನ್ನಡ ಜನಪದ ಮಹಾಕಾವ್ಯಗಳೂ ರುಜು ನೀಡುತ್ತಿವೆ.

ಹಾಗೇ ಭಾರತಭೂಮಿಯ ಜನಪದ ಜೀವನದಲ್ಲಿ ಇವು ಹಾಸುಹೊಕ್ಕಾಗಿವೆ. ಅಷ್ಟೇ ಅಲ್ಲದೆ ಜನಪದರಲ್ಲಿ ವೀರರಸ ವೀರರಮಣಿಯರ ವೀರಶ್ರೀ ಹರಿಸಿದ ಗೀತೆಗಳು ಅಲ್ಲಲ್ಲಿ ಅರಳಿನಿಂತಿವೆ. ಕರ್ನಾಟಕದ ನೆಲದಲ್ಲಂತೂ ವಿಶೇಷವಾಗಿ ವೀರಗೀತೆಗಲು ನಮ್ಮೆದರು ಇವೆ.

ವೀರರ ಜೀವನದಲ್ಲಿ ವೀರರಸ ನಿರ್ಮಾಣವಾದುದು ಅವರ ಜೀವನವನ್ನು ಬದುಕನ್ನು ಕಂಡುಂಡು ವೀರಗೀತೆಗಳನ್ನು ಹಾಡಿಕೊಂಡು ನಾಲಿಗೆಯಿಂದ ನಾಲಿಗೆಗೆ ಹರಿಸಿದ್ದಾರೆ. ಜಾನಪದ ಸಂಶೋಧಕರು ತಮ್ಮ ಕೈಗಳಿಗೆ ದೊರಕಿದ್ದು ದಾಖಲೆಗಳನ್ನು ಪಡೆಯುತ್ತಾ ಪಡಿಸುತ್ತಾ ಸಾಗಿದ್ದಾರೆ.

ವೀರತನದ ಮಾತುಗಳೇ ವೀರಗೀತೆಗಳಾಗಿ ಪರಿಣಮಿಸುತ್ತಿರುವುದನ್ನು ಕಾಣುತ್ತೇವೆ. ಗೆದ್ದರೆ ಸ್ವರ್ಗ ಸತ್ತರೆ ನರಕ ಎಂಬ ಮಾತು ವೀರತನವ ಗೆಲುವಿನ ಕುರುಹು ಎಂಬ ಭಾವನೆಯನ್ನು ಸ್ಪಷ್ಟಪಡಿಸುತ್ತದೆ.

ಆಧುನಿಕ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರೆಲ್ಲರೂ ವೀರಶ್ರೀಯನ್ನು ಮೆರೆಯಿಸಿ, ನಮ್ಮ ರಾಷ್ಟ್ರವನ್ನು ನಾವು ಪಡೆಯುವುದಕ್ಕೆ ಸತ್ಯಮೇವ ಜಯತೆ ಎಂಬ ಉಕ್ತಿಯನ್ನು ಸಾದರ ಪಡಿಸಿದ್ದಾರೆ. ಸತ್ಯವನ್ನು ಪಾಲಿಸುವುದು ಮತ್ತು ಪ್ರಯೋಗಿಸುವುದು ವೀರರ ಮತ್ತು ವೀರತನದ ಪ್ರತೀಕವೆಂಬುದಾಗಿ ಮಹಾತ್ಮ ಗಾಂಧೀಜಿಯವರು ಜೀವನದುದ್ದಕ್ಕೂ ಋಜುವಾತು ಪಡೆಯಿಸಿ ತೋರಿಸಿದ್ದಾರೆ. ಕನ್ನಡ ಜನಪದದಲ್ಲಿ ಎಲ್ಲೆಲ್ಲಿ ವೀರಗೀತೆಗಳು ಮೂಡಿನಿಂತಿವೆ ಎಂಬುದನ್ನರಿಯಲು ಆಧುನಿಕವಾಗಿ ಆ ಗೀತೆಗಳ ಪರಿಕಲ್ಪನೆಯನ್ನು ತಿಳಿಯಲು ಇಲ್ಲಿ ಪ್ರಯತ್ನಿಸಲಾಗುತ್ತಿದೆ.

## ಕೋಲು ಪದಗಳು

ದ್ವಿಪದಿಗಳಾಗಿ ಕನ್ನಡ ಜನಪದ ಗೀತೆಯ ಹಂತಿ ಮತ್ತು ಕೋಲು ಪದಗಳಲ್ಲಿ ಮೂಡಿ ನಿಂತಿರುವುದನ್ನು ಕಾಣುತ್ತೇವೆ. ಸೂರ್ಯನಂತಹ ಶೂರ ಅಣ್ಣ-ತಮ್ಮಂದಿರನ್ನು ಉದಾಹರಣೆಗಳಿಂದ ಹಂತಿ ಪದಗಳಲ್ಲಿ ಕಂಡ ಯುದ್ಧರಂಗದಲ್ಲಿ ಕೋಲು ಪದಗಳಲ್ಲಿ ಕಾಣುತ್ತೇವೆ.

ದಂಡು ಬಂದಿದೆ ದಂಡು ಎಂಬ ಕೋಲು ಪದವು ವೀರ ಗೀತೆಯೊಂದನ್ನು ಸಾಕ್ಷಿ ಪಡೆಯಿಸುತ್ತದೆ.

ಕೋಲ ಕೋಲೋನ್ನ ಕೋಲ
ಕೋಲ ರನ್ನದಾ ಕೋಲ ।ಪಲ್ಲ।

ದಂಡ ಬಂದಿದೆ ದಂಡ ಮುಸಲರ ದಂಡ।
ದಂಡ ನೋಡಿ ಜಿಗದಾರ ಕೋಲೆನ್ನ ॥ಕೋ॥

ಹುಟ್ಟಿದ ಮಕ್ಕಳಿಬ್ಬರು ಚಿನ್ನದ ಕೊಲ
ಆಡುತ್ತ ಹಾಡುತ್ತ ಬೆಳೆದಾರೇ ಕೋಲೆನ್ನ ॥ಕೋ॥

ಹೀಗೆ ಮಕ್ಕಳಿಬ್ಬರ ಅಂದರೆ ಅಣ್ಣ-ತಮ್ಮರ ಬಗೆಗೆ ಅವರ ಬೆಳವಣಿಗೆಯ ಬಗೆಗೆ ವಿವರವನ್ನು ನೀಡುತ್ತ, ಅವರ ಆಹಾರ ವಿಹಾರಗಳ ಬಗೆಗೆ ಹೇಳುತ್ತ ದೊಡ್ಡವರಾಗಿ ಬೆಳೆಯುತ್ತಿರುವಾಗ ದಂಡೊಂದು ಅವರ ಊರಿನ ಮೇಲೆ ದಾಳಿ ಇಡುತ್ತದೆ. ಆ ದಂಡು

ಮುಸಲಮಾನರದ್ದು ಆಗಿರುತ್ತದೆ. ಆ ಹಾಡಿ ದಂಡನ್ನು ತಮ್ಮ ಮನೆಯಲ್ಲಿವ ಪೂರ್ವಜರ ಕತ್ತಿಗಳನ್ನು ತಂದು ರಣಚಂಡಿಮಾಡುತ್ತಾರೆ. ಆ ಪ್ರಸಂಗವನ್ನು ಕೇಳೋಣ

ಓಡೋಡಿ ಬಂದಾರ ಕೋಲs
ಮನೆಯಕತ್ತಿಗಳು ಹಿಡಿದಾರ। ಕೋಲೆನ್ನ ||ಕೋ||

ಗುಳಗಿ ಚೆನ್ನಗಳ ಉಟ್ಟಾರ ಕೋಲs
ಕಾಲಲ್ಲಿ ಕೆರವುಗಳ ತೊಟ್ಟಾರ। ಕೋಲೆನ್ನ ||ಕೋ||

ಕವಚಗಳ ಕಟ್ಟಾರ ಕೋಲs
ಡಾಲಗಳ ಹಿಡಿದಾರ। ಕೋಲೆನ್ನ ||ಕೋ||

ಓಡೋಡಿ ಬರುವ ಮುಸಲರನ ಕೋಲs
ಚೆಂಡಗಳ ಕಡದಾರ ಕೋಲೆನ್ನ ||ಕೋ||

ಜಿಗದಾಡಿ ಬರುವ ಮುಸಲರನ ಕೋಲs
ಹೊಟ್ಟೆಗಳ ಹರಿದಾರ ಕಡದಾರ। ಕೋಲೆನ್ನ ||ಕೋ||

ರಕ್ತದ ಕಾಲುವೆ ಹರಿಸ್ಯಾರ ಕೋಲs
ಹೆಣಗಳ ಸಾಲ ಬಿದ್ದಾವ। ಕೋಲೆನ್ನ ||ಕೋ||

ದಂಡಿನ ಭರ್ಚಿಗಳ ಬಿದ್ದಾವ ಕೋಲs
ಅರ್ಧ ದಂಡ ದಿಕ್ಕೆಟ್ಟ ಓದಿತ। ಕೋಲೆನ್ನ ||ಕೋ||

ಹೀಗೆ ಊರಿಗೆ ಮಾರಿಯಾಗಿ ಬಂದ ಮುಸಲಮಾನರ ದಂಡು ಓಡಿ ಹೋದ ಮೇಲೆ ವೀರರಾದ ಅಣ್ಣ ತಮ್ಮಂದಿರರನ್ನು ಗೌರವಗಳೊಂದಿಗೆ ಮರ್ಯಾದಿಸುತ್ತಾರೆ. ಆ ಊರಿನ ಜನರು ಮತ್ತು ಗೌಡ ಶ್ಯಾನುಭೋಗರು.

ಜನಪದ ಗೀತ ಸಾಹಿತ್ಯದಲ್ಲಿ ವೀರ ಜೀವನದ ಸಹೋದರರಿಬ್ಬರ ಸೋಬಾನ ಪದದಲ್ಲಿ ವೀರತನವನ್ನು ಇಲ್ಲಿ ತಿಳಿಯೋಣ.

**ಸೋಬಾನೆ ಪದಗಳು**

ಅಣ್ಣ ತಮ್ಮರ ಕೂಡಿ ಜೋಡ ಖಡ್ಗವ ಹಿಡಿದು
ಚೆಂಡ ಕಡವಾರ ವೈರಿಗಳ। ರಣದಾಗ
ಗೆದ್ದ ಬರತಾರ ಬಲ। ಬಂಟರ ||ಸೋ||

ಗೆದ್ದ ಬರುವಂತಹ ಬಂಟರ ಎದುರಾಗಿ
ಮುತ್ತೈದೆಯರು ಆರುತಿ ಬೆಳಗ್ಯಾರ ನಮ್ಮೂರ
ಮಾನ ಹೆಚ್ಚಿಸ್ಯಾರ ಜಗದಾಗ ।।ಸೋ।।

ಗೆದ್ದ ಬಂದಣ್ಣರಿಗೆ ದುಂಡಮಂಚವ ಕೊಡಿರೆ
ಖಂಡಗದ ಭೂಮಿ ಹೊಲ ಕೊಡಿರೆ। ಸೋದರ
ದಂಡಗೆದ್ದಣ್ಣರಿಗೆ ಉಡಗೋರೆ ।।ಸೋ।।

ಕನ್ನಡದಲ್ಲಿ ಅಲ್ಲಲ್ಲಿ ಹುಯಿಲುಗಳು, ಬಂಡಾಯಗಳು, ಯುದ್ಧಗಳು, ಹಲ್ಲೆಗಳು, ದರೋಡೆಗಳು ನಡೆದಾಗ, ಆಯಾ ನೆಲದಲ್ಲಿ ಹೋರಾಡಿದ ವೀರರನ್ನು ತಮ್ಮ ಮನದಾಳದಲ್ಲಿ ಮೂಡಿದ ಭಾವನೆಗಳಿಂದ ಹಾಡಿಕೊಂಡ ಹಾಡುಗಳು ಬಹುವಿಧವಾಗಿವೆ. ಅವುಗಳನ್ನು ಇನ್ನು ಸಂಗ್ರಹಿಸುವ ಕಾರ್ಯಗಳು ನಡೆಯಬೇಕು. ಪಿರಿಯಾ ಪಟ್ಟಣದಂತಹ ಕಾಳಗದ ಕೃತಿಗಳು ಹೊರಬಂದು ಜನಪದ ಸಾಹಿತ್ಯದ ಹುಲಸನ್ನುಂಟು ಮಾಡಿರುವವು, ಹಾಗೇ ವಿಜಯನಗರ ಕಾಳಗ, ವಿಜಾಪೂರ ಕಾಳಗ ಬೆಳವಡಿ ಕಾಳಗ, ಕಿತ್ತೂರಿನ ಕಾಳಗ, ತೊರಗಲ್ಲ ಕಾಳಗ, ಶ್ರೀರಂಗಪಟ್ಟಣದ ಕಾಳಗ ಇತ್ಯಾದಿ ಕಾಳಗಗಳ ಕಥನ ಗೀತೆಗಳು ಸಂಗ್ರಹವಾದಾಗ ಕನ್ನಡಿಗರ ವೀರತನದ ಪರಿಕಲ್ಪನೆ ನಮಗೆ ಹೆಚ್ಚಾಗಿ ತೋರುವುದು.

ಉತ್ತರ ಕರ್ನಾಟಕದಲ್ಲಿ ಕಿತ್ತೂರು ಸಂಸ್ಥಾನದ ಇತಿಹಾಸ ಜನಪದರ ನಾಲಿಗೆಗಳ ಮೇಲೆ ಉಳಿದು ಇತಿಹಾಸ ಖಚಿತವಾಗಿರುವುದ ಸರ್ವಸಮ್ಮತವಾದ ಸಂಗತಿಯಾಗಿದೆ.

### ತ್ರಿಪದಿಯ ಪದಗಳು

ಕಿತ್ತೂರು ಚೆನ್ನಮ್ಮ ಸುತ್ತೂರು ಒಡತ್ಯಾಗಿ
ಕತ್ತಿ ಕವಚಗಳ ಉಡುಪುಟ್ಟೊ
ಕತ್ತಿ ಕವಚಗಳ ಉಡುಪುಟ್ಟೊ ಅಬ್ಬರದಿ
ಬತ್ತಲಗುದರಿಯ ಜಿಗದಾಳೋs

ಗಂಡನ ಕಳಕೊಂಡ ಬೆಂಡಾದ ಚೆನ್ನಮ್ಮ
ಗಂಡಾಗಿ ರಣಕ ಇಳದಾಳೊ। ನಾಡೆನ್ನ
ಪುಂಡ ಬಂಡಾಯ ಹಿಂಡ್ಯಾಕೋ।।

ಮುಚ್ಚಿನ ಕಾಳಗ ಮೆಟ್ಯಾಳೊ ಚೆನ್ನಮ್ಮ
ಉಚ್ಚಿ ಬೆಳ್ಳಿಗಳ ಕೊಡತಾಳೊ। ಭಂಟರಿಗೆ
ಹೆಚ್ಚಿನ ರೋಜ ಬರಿಸ್ಯಾಳೋs

ಕಿತ್ತೂರು (ಕ್ರಿ.ಶ. ೧೫೮೫ ರಿಂದ ೧೮೨೪ ರ ವರೆಗೆ) ಹನ್ನೆರಡು ಜನ ರಾಜನರು ಆಳಿದರು. ರಾಣಿ ಚೆನ್ನಮ್ಮ ಕೊನೆಯ ಅರಸಿಯಾಗಿ ಅಮರಳಾದರು. ಇಲ್ಲಿ ದಾಳಿಗಳು

ಸಾಗಿದವು, ಸಮರಗಳು ಜರುಗಿದವು. ಇವುಗಳಿಗೆ ಎದುರಾಗಿ ವೀರರು ವೀರಶ್ರೀತನದಿಂದ ಕಾಡಿದರು. ಜಯ ದೊರಕಿಸಿದರು ವೀರ ಮರಣವನ್ನಪ್ಪಿದರು. ಇಂತಹ ರೋಮಾಂಚ ಕಾರಕ- ಕ್ರಾಂತಿಕಾರಕ ಘಟನೆಗಳು ನಡೆದವು. ಈ ಘಟನೆಗಳನ್ನು ಜನಪದರು ಹಾಡಿಕೊಂಡು ಉಪಕಾರವನ್ನು ಮಾಡಿದ್ದಾರೆ. ಲಾವಣಿ ಸೋಬಾನೆ, ಪಂಡಮ, ಗೀಗೀ, ಭಜನೆ, ಕೋಲು, ಭಲೋರಿ ಇತ್ಯಾದಿ ಪ್ರಕಾರಗಳಲ್ಲಿ ವೀರಗೀತೆಗಳ ಜನಪದವು ತುಂಬಿಕೊಂಡಿದೆ. ಹಾಗೇ ವೀರರನ್ನು ಕುರಿತು ಚಿತ್ರಣಗಳು ದಾಖಲಾಗಿವೆ.

ಬ್ರಿಟಿಷರು ಕಿತ್ತೂರನ್ನು ತಮ್ಮ ವಶಮಾಡಿಕೊಳ್ಳಲು ಬಯಸಿ, ಯುದ್ಧ ತಂತ್ರಗಳನ್ನು ಪ್ರಚಾರ ಮಾಡಿದರು. ಆಗ ಕಿತ್ತೂರಿನ ವೀರರು ಹೇಳುವ ಮಾತುಗಳು.

ಗೆದ್ದ ಕಿತ್ತೂರು ತಂದು ಉದ್ದ ಬೀಳುವೆ ತಾಯಿ
ಕದ್ದ ಮಾತಲ್ಲ ನೀಮ್ಯಾಣೆ! ಇಲ್ಲದಿದ್ರ
ಬಿದ್ದು ಹೋಗುವೆ ರಣದಾಗ

ಚೆನ್ನಮ್ಮ ರಾಣಿಯು ದೇವಿಯ ಅವತಾರವೆಂದು ನಂಬಿದವರು ಹಾಡಿಕೊಂಡ ಬಗೆ,

ಚಂಡಿಯೋ ಚಾಡಿಯೋ ಮಾರಿಯೋ ಮಸಣಿಯೋ
ಖಂಡಿತ ಮಾನವಿ ಇವಳಲ್ಲ!
ಗಂಡುಗಲಿಗಳ ಮೀರಿ ರುಂಡಗಳ ತರಿವಳು
ಮಹಾಮಾಯೆಯಲ್ಲದೆ ಇನ್ಯಾರಲ್ಲ!
ಪುಂಡರಕ್ಕಸರ ಹಿಂಡ ಮರಿದ ಚಾಮುಂಡಿಯೇ
ಈಕೆಯು ಸುಳ್ಳಲ್ಲ!
ಚಂಡ ಪ್ರಚಂಡರ ಚಂಡವೇ ಕುಂದಿತು
ಗುಣಗುಣಗುವ ಶಬ್ದವೇ ರಣವೆಲ್ಲ!

ಕಿತ್ತೂರ ಕಾಳಗದಲ್ಲಿ ಹೋರಾಡಿದ ವೀರರು 'ವೀರ ಸಂಗೊಳ್ಳಿ ರಾಯಣ್ಣನ' ಕುರಿತು ರಚನೆಯಾದ ವೀರ ಗೀತೆಗಳು ಸಾಕಷ್ಟು ಲಭ್ಯವಾಗಿವೆ. ಹಾಗೇ ಬಿಚ್ಚುಗತ್ತಿ ಚನಚಸಪ್ಪ, ಅಮಟೂರ ಬಾಳಪ್ಪ ಮುಂತಾದ ಶೂರರನ್ನು ಕುರಿತು ವೀರತ್ವದ ಗೀತೆಗಳೂ ರಚನೆಗೊಂಡಿವೆ. ಜನಸಾಮಾನ್ಯರು ವೀರಾವೇಷದಿಂದ ಕಾದಾಡಿದ ಗೀತೆಗಳು ಇವೆ. ಅದೇ ರೀತಿ ಶ್ರೀಸಾಮಾನ್ಯರು ಊರಬಿಟ್ಟ ಘಟನೆಗಳ ಚಿತ್ರಣವೂ ಉಂಟು.

ಕಿತ್ತೂರ ಅವಸನಕಾಲದ ಬಗೆಗೆ ಶ್ರೀಸಾಮಾನ್ಯರಿಗಾದ ಗತಿಯನ್ನು ತಿಳಿಸುವ ಒಂದು ಪದ

ಹತ್ತು ಸಾವಿರ ದಂಡು ಸುತ್ತಲೆ ಇಳದೀತು
ಕತ್ತಲಗವಿದಿತೋಊರಾ।

ಚಾಪ್ಲಿನ್ ಸಾಹೇಬ ಹಲ್ಲುತಿಂದಾನೋ ಕರಕರಾ।
ಬಿರುಸುಬಾಣ ಬಿಡತಾರೋ ಬರಬರಾ।
ಅಂಗಡಿ ಬಿಟ್ಟು ಓಡಿಹೋದಾರೋ ಬಣಜಿಗರಾ।
ಕಾರಣಿಕರಿಲ್ಲೋ ಒಬ್ಬರಾ।
ಗೂಳಿ ಕಟ್ಯಾರೋ ರೈತರಾ।
ಮುತ್ತ ಮಾರಿದವ್ರೊ ಮೊರಾಮೋರಾ।

ನಮ್ಮ ಕನ್ನಡ ನಾಡಿನಲ್ಲಿ ಹೋಳಿಹಬ್ಬ ಅತ್ಯಂತ ಉತ್ಸುಕತೆಯಿಂದ ಆಚರಿಸುವ ಉತ್ಸವವಾಗಿದೆ. ಜಾನಪದದ ಎಲ್ಲ ಪ್ರಕಾರಗಳನ್ನು ಹಾಡುವ ಹಾಡುಗಾರರು ಬಾಯಿಗಳಿಗೆ-ಕಿವಿಗಳಿಗೆ ಕೈಯಿಟ್ಟು, ಹಲಗೆ-ತಮ್ಮಟೆ, ರಣಹಲಗೆ, ಚಿಕ್ಕಲಿಗೆ, ದಿಮ್ಮು ಮುಂತಾದ ಚರ್ಮವಾದ್ಯಗಳನ್ನು ನುಡಿಸುತ್ತ ಹಾಡತ್ತಾರೆ ಹಾಡುತ್ತಾರೆ. ಇಂತಹ ಗೀತೆಗಳಲ್ಲಿ ಹೋಳಿಯ ಕೆಲವು ವೀರತನ ನೀಜವ ಗೀತೆಗಳನ್ನು ನೋಡೋಣ.

## ಹೋಳಿ ಗೀತೆಗಳು

### ಹಾಡಿನ ಅರ್ಥ

ಹಾಡಿನ ಅರ್ಥ ಅರಿಬಾರೋs
ಊರಿನ ಗುತ್ತಾ ಹಿಡಿಬಾರೋs
ಯುದ್ಧದ ನೀತಿ ತಿಳಿಬಾರೋs
ಸಿಡಲ ಹೊಡೆದ್ಹಂಗ ಹೊಡೆದ ಅಭಿಮನ್ಯು
ಬಿಲ್ಲುಬಾಣ ಬಿಡುವಾಕಿs
ಕೂಡಿದ ಭಟರು ಸಿಡಿದೋಡಿs
ಕೂಡಿದ ಭಟರು ಸಿಡಿದೋಡಿ ನಿಂತಾಗ
ಹೂಡಿ ಬಿಡತಾನೋ ಗುರಿಗಳನೋ
ಹೂಡಿ ಬಿಡತಾನೋ ಗುರಿಗಳನೋ ಅಭಿಮನ್ಯು
ನೋಡಿ ಗಗನಕ್ಕೆ ಗುರಿ ಇಟ್ಟೋs

ಅತ್ತಲಿತ್ತ ಓಡತಾರೋ
ಕಡ್ಡಿಕಚ್ಚಿ ಬೀಳತಾರೋ
ಲಾಗಾಹಾಕಿ ಉರಳತಾರೋ
ಮತ್ತ ಖಡ್ಡಗೆಲ್ಲಿ ಓಡತಾರೋ
ಕೈಯ ಮುಗದ ಸೋಲತಾರೋ
ಕಂಡು ಎರಗಿ ಮರಗತಾರೋ
ಕಂಡು ಅಭಿಮನ್ಯು ಕೇಳತಾನೋ
ಬಿಡತೀನಿ ನಿಲ್ಲ ಇನ್ನೊಂದು ಬಾಣಾs
ಹಿಂಗ ಗೆಳೆಯಾ
ಹಾಡತೀನಿ ಇನ್ನೊಂದು

ರಣದೊಳಗಿನ ವೀರನ ಹಾಡಾನೋ
ಹಾಡಿನ ಅರ್ಥ ಅರಿಯಬಾರೋಽಽ *

ಮೇಲಿನ ಹಾಡಿನ ರೂಪವನ್ನೇ ಹೋಲುವ (ಹೋಳಿ ಹಾಡು-ನುಡಿ೬೧) ಜೀವಮನ ಜೋಕಾಲಿಯಲ್ಲಿ ಪ್ರಕಟವಾಗಿರುವದನ್ನು ನೋಡಬೇಕು

ಕಡುಕೋಪದಿಂದಲಿ ದಡಕಿದಭಿಮನ್ಯು
ಹೊಡೆದಾನು ಐದಾರು ಬಾಣದಲಿ ಶರ
ಗಡಿದು ಬಿದ್ದುರುಳತ ಭೂಮಿಯಲಿ।ಮಾದ್ರ
ಒಡೆಯನ ಬಲಮುರಿದೋಜಡು ತಲಿ ನಿಂದು
ಕಡುವೆಂತೂ ಕಂದನ ಕಡಿದು ವ್ಯೂಹವೆಗೆದ್ದು
ನುಡಿದ ಕೃಪೆಗೆ ದ್ರೋಣ ಮಗನ ಪೌರುಷವೇ

ಈ ಮೇಲಿನ ವರ್ಣನೆಯಂತೆ ಇಡೀ ಹಾಡ ಚಕ್ರವ್ಯೂಹದಜ ಗೀತೆಯಾಗಿ ಅಭಿಮನ್ಯುವಿನ ಪರಾಕ್ರಮವನನ್ನು ತಿಳಿಸುತ್ತದೆ. ಇದೇ ಬಗೆಯಾಗಿ ಈ ಸಂಗ್ರದಲ್ಲಿ ಕೃಷ್ಣಾರ್ಜುಮನ ಕಾಳಗ ಎಂಬ ಗೀತೆಯ ವೀರಗೀತೆಯಾಗಿ ಪ್ರಕಟಗೊಂಡಿದೆ.

ಉತ್ತರ ಕರ್ನಾಟಕದಲ್ಲಿ ಕರ್ಬಲ್ ಆಚರಣೆಯನ್ನು ಪ್ರತಿವರ್ಷ ಮಾಡಲಾಗಿತ್ತದೆ ಹಿಂದು – ಮುಸ್ಲಿಮರ ಐಕ್ಯತೆಯ ಆಚರಣೆಯ ಹಬ್ಬ ಇದಾಗಿದೆ. ಕರ್ಬಲ್ ಆಚರಣೆಯಲ್ಲಿ ಮೊಹರಂ ಗೀತೆ, ಅಲಾವಿ ಹಾಡು ಎಂದು ಪ್ರಸಿದ್ಧಿಯನ್ನು ಪಡೆದಿವೆ. ( ನೋಡಿ ಹೇಳುವೆ ಮಜಕೂರ ಡಾ।। ನಿಂಗಣ್ಣ ಸಣ್ಣಕ್ಕಿಯುವರ ಸಂಗ್ರಹ)

ಕರ್ಬಲ್ ರಣಗೀತಗಳು ಕತಲ್ ರಾತ್ರಿಯ ದಿನ ಹಾಗೂ ಓಣಿ ಕುಣಿಗಳಲ್ಲಿ ಹಗಲು ಹಾಡಿನ ತಂಡಗಳು ಈಗಲೂ ಕಾಣಸಿಗುವರು. ಇಲ್ಲಿಯ ಜೀವನ ನಡೆಯಿಸಿದ ಯುದ್ಧ ಘಟನೆಯೊಂದನ್ನು ನೋಡಬೇಕು.

## ಕರ್ಬಲ್ ಹಾಡು

ಧರ್ಮಕ ಸತ್ತವರು ಸಿಗತಾರ ಕೋಟಿಗೊಬ್ಬ ಜನರಾ।
ಮುಸಲಮಾನ ಮಂದ್ಯಾಗ ದೂರಿತಾರ ಹುಸೇನ ಸಾಹೇಬರಾ।
ಸುರವಾಗಿ ಯಜೀದನವತಾರ ನಡಸ್ಯಿತೋ ಅಧಿಕಾರಾ ಭರಚೂರ।
ನೋಡಲಾಗದ ಎದುರು ನಿಂತಾರೋ ಹಜರತ ಹುಸೇನರಾ।
ಲಡಾಯಿ ತಯಾರ ಆದರ ಒಂಟಿಮ್ಯಾಲ ಸ್ವಾರಾ।
ಹೊರಟ ನಿಂತಾರೊ ಕರ್ಬಲಾ ಭೂಮಿಗಿ ಬಂದು ಬಳಗ ಪೂರಾ।

---

* ಡಾ।। ನಿಂಗಣ್ಣ ಸಣ್ಣಕ್ಕಿ (ಸಂಗ್ರಹದಿಂದ) ಕಾಮಣ್ಣನ ಸುತ್ತ ಮುತ್ತ' (ಹುಗ್ಗಿ ಹೋಳಿಗೆ ನೀನ್ಯಾಡು)

ಅರಣ್ಯದಾಗವರಾ ಕಾಣದ ಮೂರು ದಿವಸ ನೀರಾ।
ಕುಡಿದಾರೋ ಕಣ್ಣೀರಾ ಮಕ್ಕಳು ಹುಡುಗರು ಹೆಂಗುಸರಾ।
ಜಂಗ ಎದುರು ಬಂದಾರೆ ವೈರಿಯ ಮೋಸಕ ಜಯತಾರಾ।
ಶರಣು ಹೋಗದವರಾ ಸ್ವರ್ಗಕ್ ಹೋದರೋ ಹಜರತರಾ।

ಹೀಗೆ ಕರ್ಬಲ್ ಧರ್ಮಯುದ್ಧದ ವೀರಗೀತೆಗಳು, ಬಿಡಿಗೀತೆಗಳು, ಇಡೀ ಗೀತೆಗಳು (ಖಂಡಕಾವ್ಯ)

ಇನ್ನೂ ಸಂಗ್ರಹ-ಸಂಶೋಧನೆಯಾಗಬೇಕಾಗಿದೆ.

## ಡೊಳ್ಳಿನ ಹಾಡುಗಳು

ನಮ್ಮ ಕರ್ನಾಟಕದ ಡೊಳ್ಳಿನ ಹಾಡುಕಾರರು, ಜನಪದಗೀತೆಗಳನ್ನು ಹೆಚ್ಚಾಗಿ ಪುರಾಣದ ಆಕರಗಳಿಂದ ಪಡೆದಿರುತ್ತಾರೆ. ಕುರುಬ ಜನಾಂಗದ ಡೊಳ್ಳುವಾದ್ಯ ಮತ್ತು ಡೊಳ್ಳಿನ ಹಾಡುಗಳು ಇತರ ಜನಾಂಗದವರ ಮೇಲೆ ಪ್ರಭಾವ ಬೀರಿವೆ. ಏನೇ ಆದರೂ ಡೊಳ್ಳಿನ ಬಾರಿಸುವಿಕೆಯಿಂದ ಈ ಹಾಡುಗಳು ಡೊಳ್ಳಿನಹಾಡು, ಡೊಳ್ಳಿನಗೀತೆ-ಹೆಸರುಗಳಿಂದ ಕರೆಯಗಾಗುತ್ತಿವೆ. ಎಲ್ಲ ಪ್ರಕಾರದ ನವರಸ ಭರಿತ ಹಾಡುಗಳು ಚಲಾವಣೆಯಲ್ಲಿವೆ. ಕನ್ನಡ ಮಾರ್ಗ ಸಾಹಿತ್ಯದಲ್ಲೂ ಆಧುನಿಕವಾಗಿ ಈ ಗೀತೆಗಳು ಪರಿಣಾಮ ಬೀರಿವೆ.

ತಾಳ ನಿಮ್ಮ ಕೈಯಲ್ಲಿದ್ದರೆ ತಮ್ಮಾ ತಾಳದ ಗ್ಯಾನೊಂದಿರಬೇಕೋ
ಡೊಳ್ಳು ನಿಮ್ಮಲ್ಲಿ ಇದ್ದರ ತಮ್ಮಾ ನಾದದ ಗ್ಯಾನೊಂದಿರಬೇಕೋ

ಎಂಬ ಮಹತ್ವದ ತಿಳುವಳಿಕೆಯನ್ನು ನೀಡಲಾಗುತ್ತಿದೆ.

ಡೊಳ್ಳಿನ ಗೀತಗಳಲ್ಲಿ ಅನೇಕ ವೀರರಸ ಪ್ರಧಾನವುಳ್ಳ ಹಾಡುಗಳು ಇವೆ. ಅವು ಸಂಕೇತವಾಗಿ ಈಗಲು ಅವು ಸರಿ ಎಂದೆನಿಸುತ್ತವೆ. ಅನೇಕ ರಾಕ್ಷಸರನ್ನೂ ವಧೆ ಮಾಡುವ ಗೀತೆಗಳು ಇವೆ. ಇಲ್ಲಿ ಮುಂಡಾಸುರ ದೈತ್ಯನ ವಧೆ'ಯನ್ನು ತೆಗೆದುಕೊಳ್ಳೋಣ.

### ಗೀತೆ

ಗುಲ್ಲು ಮಾಡದೆನ್ನ ಸೊಲ್ಲು ಕೇಳಿರಿ ನಿಂತು ಹೇಳುವೆನು ಕೈಮುಗಿದಾ।
ಮುಂಡಾಸುರ ಎಂಬ ಫುಂಡ ದೈತ್ಯನ ರುಂಡಕಡದ ರೇವಣಸಿದ್ದಾ।
ಮುಂಡಾಸೂರ ಮೀರಿ ಮಲತು ಮಂಡಲದೊಳು ಮರೆಯುತಲಿದ್ದಾ।

ರ್‍ಧಾಣಃ ಈ ಮುಂಡಾಸುರನಂತೆ ಈಗಲೂ ಮರೆಯುವ ಜನ ಅನೇಕರು ಇದ್ದಾರೆ.

---

೨. ಜೀವನ ಜೋಕಾಲ (ಹೋಳಿಹಾಡು) ಸಂ। ಡಾ. ಎಂ. ಎಸ್. ಸುಂಕಾಪೂರ ಕ.ವಿ.ವಿ. ಧಾರವಾಡ ಪ್ರಥಮ ಮುದ್ರಣ ೧೯೭೪.

ಅವರನ್ನು ಸಂಹಾರ ಮಾಡುವುದು ಸಾಧ್ಯವಾಗುತ್ತಿಲ್ಲ. ಅದಕ್ಕೆ ಅಂತಹವರನ್ನು ಮಾನವ ಲೋಕದಲ್ಲಿ ವಧಾ ಮಾಡಲು ಅವತಾರಿಗಳು ಬೇಕು.

ಶ್ರೀ ಗುರು ರೇವಣ ಸಿದ್ಧ ಪ್ರಭುವಿಗೆ
ಸರಿಯಾರೂ ಇಲ್ಲರಿ ಸಹಾಯಾ।
ದಂಡುದಳ ಇಲ್ಲ, ಮದ್ದು ಗುಂಡು ಇಲ್ಲ,
ತಯಾರಾದ ಸದ್ಗುರುರಾಯಾ।
ತಗದಾನೋ ಬೇಕಂತ ನ್ಯಾಯಾ।
ದೈತ್ಯ ಆಗ ದಂಡೆತ್ತಿ ಬಂದಾನೋ
ಹತ್ತಕೋಟಿ ಕಾಲಬಲ ಹಯಾ।
ವೀರಧೀರ ಗಂಭೀರ ಸೈನಿಕರು
ರಣದೊಳು ಕುಣಿಯುತ್ತಿದ್ದರು ತೈಯಾರ।

ರ್‍ವಾಃ ರಾಕ್ಷಸರಿಗೂ ರೇವಣಸಿದ್ಧರಿಗೂ ವಿಪರೀತ ಕದನ ನಡೆಯಿತು. ಭಯಂಕರ ಬಡಿದಾಟವಾಯಿತು. ಸುತ್ತಲೂ, ರಾಕ್ಷಸರ ದಂಡು ಮುತ್ತಿಗೆ ಹಾಕಿದಾಗ, ರೇವಣಸಿದ್ಧ ಮಧ್ಯದಲ್ಲಿ ನಿಂತು ಎದೆಕೊಟ್ಟು ತಾಸನೊಳಗ ಕೋಟಿ ಸೈನ್ಯವ ನಾಶಮಾಡಿಬಿಟ್ಟನು. ಅಂಜಿ ಅನೇಕ ರಾಕ್ಷಸರು ಓಡಿಬಿಟ್ಟರು.

ಒಬ್ಬನೇ ರೇವಣಸಿದ್ಧ ಅಬ್ಬರಿಸುತ
ಕಣ ಬೊಬ್ಬೆ ಹೊಡೆದು ಬಿಚ್ಚಿದ ಜಟಾ।
ಭಕ್ತಿಯಿಂದ ಶಿವನಾಮ ಜಪಿಸುತ
ಸಾಧು ಸಂತರ ಶಿವಶರಣರನ
ಪರಿಪರಿಯಲಿ ಕಾಡಿದೆ ದುಷ್ಟಾ।
ಶಿವದ್ರೋಹಿ ಇನ್ನ್ಯಾಂಗ ಬದುಕುವಿ
ತಾಳೋ ನನ್ನ ಖಡ್ಗದ ಪೆಟ್ಟಾ।

ಯುದ್ಧದ ವರ್ಣನೆಯನ್ನು ವಿಧ ವಿಧವಾಗಿ ಗೀತೆಯಲ್ಲಿ ವರ್ಣಿಸಲಾಗಿದೆ.

ಮಂಡಾಸುರನು ಮರಾಮರಾ ಮರಗೂತ
ಯುದ್ಧರಂಗದೊಳು ಮೃತ ಪಟ್ಟಾ।
ನದಿ ಆಕಾರ ನೆತ್ರ ಹರಿದೀತೋ
ಅಸ್ತಿಚರ್ಮವನು ಹಿರಿದೊಗೆದಾ।
ಧರೆಯೊಳು ದೊಡ್ಡ ಕ್ಷೇತ್ರ ಕುಳಗೇರಿ
ತಂದಿಸಿದ್ದನು ನೆಲಸಿದ್ದಾ।

ಡೊಳ್ಳಿನ ಹಾಡುಗಳಲ್ಲಿ ಜೊಳ್ಳಾಸುರನ ಪದ ಅಂದರೆ ಜೊಳ್ಳಾಸುರನ ವಧೆ, ಬಳ್ಳಾರಿ, ಭಾಗದಲ್ಲಿ ಹಾಡಲಾಗುತ್ತಿದೆ. ಇದೇ ಗೀತೆಯನ್ನು ಬೆಳಗಾವಿ, ಬಿಜಾಪುರ ಭಾಗಗಳಲ್ಲಿ

ಡೊಳ್ಳಾಸುರನ ವಧೆಯಾಗಿ ಹಾಡುತ್ತಾರೆ. ಡೊಳ್ಳಾಸುರ ಎಂಬ ದೈತ್ಯನು ಮುಕ್ಕಣ್ಣನಾದ ಸಾಂಬಶಿವನನ್ನು ಬಲಿಸಿವರ ಪಡೆದುಕೊಂಡು, ಬಳಿಕ ಜನತೆಗೂ ದೇವತೆಗಳಿಗೂ ಪೀಡೆಯನ್ನುಂಟು ಮಾಟುತ್ತಾನೆ. ಬಳಿಕ ದೇವತೆಗಳಿಗೆ ಚಿಂತೆಯಾಗಿ, ಬಳಿಕ ಮುಕ್ತಿ ಮಾಡಿ ದೈತ್ಯನನ್ನು ವಧೆ ಮಾಡಲಾಗತ್ತಿದೆ.

ಜನಪದ ಪುರಾಣವನ್ನು ರಮ್ಯ ಹಾಗೂ ವೀರ ಗೀತೆಯಾಗಿ ಜನಪದ ಶೈಲಿಯಲ್ಲಿ ಹಾಡಲಾಗುತ್ತಿದೆ. ಪುರಾಣದ ಸಂಕೇತಗಳು ಆಧುನಿಕ ಸಂಕೇತಗಳಾಗಿ ಅಲ್ಲಲ್ಲಿ ಸಾಕ್ಷಿ ನುಡಿಯುತ್ತಿವೆ.

ಜನಪದ ವೃತ್ತಿಗಾಯಕರ ಕಥನಕವನಗಳಲ್ಲಿ, ವೀರಗೀತೆಗಳು ಮೊಳಗುತ್ತಿವೆ. ಕಿಂದರ ಜೋಗಿಗಳು, ನೀಲಗಾರರು ವೇಷಗಾರರು (ಹಗಲುವೇಷದವರು ಬಹುರೂಪಿಗಳು) ಗೊಂದಲಿಗರು, ಜೋಳಿಗೇರರು ಕಿಳ್ಳಿಕೇತರು ಮಂತಾದ ಪಂಗಡದವರು ವೀರಗೀತೆಗಳನ್ನು ನುಡಿಸುತ್ತಾರೆ. ಕಥೆಯ ನಾಯಕನ ಸಾಹಸವನ್ನು ಪ್ರದರ್ಶಿಸುವಾಗ ಯುದ್ಧಮಾಡುವಾಗ ಸಹಜವಾಗಿಯೇ ವೀರಗೀತೆಗಳನ್ನು ಮೂಡು ನಿಲ್ಲುತ್ತವೆ.

## ತೊಗಲು ಬೊಂಬೆಯಾಟದಲ್ಲಿ ವೀರಗೀತೆಗಳು

ತೊಗಲು ಬೊಂಬೆ ಅಥವಾ ಬೊಂಬೆಯಾಟ ಕರ್ನಾಟಕದಲ್ಲಿ ಅತೀ ಪ್ರಾಚೀನವಾದ ಜನಪದ ಕಲೆಯಾಗಿದೆ. ತೊಗಲುಬೊಂಬೆಯಾಟದ ಕಿಳ್ಳಿಕ್ಯಾತರಾಟವನ್ನು ಕಟಬರಾಟವೆಂದು ಕರೆಯಲಾಗುತ್ತಿದೆ.

ಮೌಖಿಕವಾಗಿ ಹರಿಯುತ್ತ ಬಂದಿರುವ ಸಾಹಿತ್ಯ, ರಾಮಾಯಣ, ಮಹಾಭಾರತ, ಭಾಗವತ ಪುರಾಣ ಪ್ರಸಂಗಗಳು ಹೆಚ್ಚಿಗೆ ಪ್ರದರ್ಶಿಸಲ್ಪಡುತ್ತವೆ. ತೊಗಲು ಬೊಂಬೆಯಾಟದ ಭಾಷೆ ಶುದ್ಧ ಜಾನಪದವೂ ಅಲ್ಲ! ಶುದ್ಧ ಶಿಷ್ಟವೂ ಅಲ್ಲ! ದೊಡ್ಡಾಟ ಸಣ್ಣಾಟಗಳ ಮಾತು ಮತ್ತು ಗೀತೆಯಂತೆ ನಡೆಯುತ್ತವೆ. ರಾಮಾಯಣದಲ್ಲಿ ರಾವಣನ ಯುದ್ಧ ಹಾಗೂ ದರ್ಭಾರ ಪ್ರಸಂಗಗಳು ಮಹಾಭಾರತದಲ್ಲಿ ದುರ್ಯೋಧನ ಭೀಮನ ಯುದ್ಧ ಕರ್ಣಾರ್ಜುನರ ಯುದ್ಧ ಪ್ರಸಂಗಗಳು ವೀರರಸ ಪ್ರಧಾನವಾದವುಗಳಾಗಿರುತ್ತವೆ.

## ಲಾವಣಿ ಹಾಡುಗಳಲ್ಲಿ ವೀರಶ್ರೀ

ಲಾವಣಿ ಹಾಡು (ಗೀತೆ) ಕನ್ನಡದಲ್ಲಿ ವೀರತನ ವಿವರಿಸುವುದಕ್ಕಾಗಿಯೇ ಹುಟ್ಟಿಕೊಂಡುದುದಾಗಿದೆ. ಬರಬರುತ್ತ ಲಾವಣಿಯಲ್ಲಿ ಲಾಲಿತ್ಯ ತತ್ವ, ಮುಂತಾದವುಗಳು ಕೂಡಿಕೊಂಡವು.

---

೩. ಜೀವನ ಜೋಕಾಲ ಭಾಗ-೬ ಡೊಳ್ಳಿನ ಹಾಡುಗಳು, ಪುಟ-೫೮-೫೯ ಸಂ॥ ಡಾ. ಎಂ. ಎಸ್. ಸುಂಕಾಪೂರ ಕ. ವಿ. ವಿ. ಧಾರವಾಡ ಪ್ರಥಮ ಮುದ್ರಣ ೧೯೭೬.

ಭಾರತದಲ್ಲಿ ಕ್ರಿ.ಶ. ೧೮೫೭ರಲ್ಲಿ ಸಿಪಾಯಿ ಬಂಡಾಯವೆಂದು ಹೆಸರು ಮಾಡಿದ ಬ್ರಿಟಿಷರ ವಿರುದ್ಧ ಅನೇಕ ಶೂರ-ಧೀರರು ಸಿಡಿದೆದ್ದರು. ಝಾಂಸಿರಾಣಿ ಲಕ್ಷ್ಮೀಬಾಯಿ ತಾಂತ್ಯಾಟೋಪಿ ಪ್ರಮುಖವಾಗಿ ತೋರಿದರು. ಅದೇ ವೇಳೆಗೆ ನರಗುಂದ ಬಾಬಾ ಸಾಹೇಬ, ಮುಂಡರಗಿ ಭೀಮರಾಯರು ಪ್ರಮುಖರಾದವರು, ಡಾ|| ಬೆಟಗೇರಿ ಕೃಷ್ಣಶರ್ಮರು ಮುಂಡರಗಿ ಭೀಮರಾಯರ ಬಗೆಗೆ ಇತಿಹಾಸದ ಒಂದು ವಿಶಿಷ್ಟ ವೀರ ವ್ಯಕ್ತಿ ಎಂಬುದಾಗಿ ಬರೆದುದನ್ನು ನಾವಿಲ್ಲಿ ಸ್ಮರಿಸಬೇಕು. ಈ ವ್ಯಕ್ತಿಗಳ ವೀರತ್ವವನ್ನು ಲಾವಣಿಗಳಲ್ಲಿ ಕಾಣುವುದ ಅಗತ್ಯವಿದೆ.

## ಮುಂಡರಗಿ ಭೀಮರಾಯ ಬಂಡಾಯ

ಕೊಪ್ಪಳದಲ್ಲಿ ನಡೆದ ಕದನದ ಹೋರಾಟವನ್ನು ಲಾವಣಿಕಾರನು ರಚಿಸಿದ ಗೀತದಿಂದ ಕೇಳಬೇಕು.

ಕೊಪ್ಪಳದೊಳಗಿನ ಸಪ್ಪಳ ಅಡಗಿತು
ನಿಪ್ಪನಕಂಡ ಸರದಾರ
ಕರಕರ ಹಲ್ಲ ತಿರಿದ ಭರ್ಭರಾ
ಅಲ್ಲಿ ಬಿಟ್ಟ ಕುಂಪಣಿ ಮಾರಿಯವರ
ಫಡ ಫಡ ಗುಂಡುಸುಟ್ಟ ಮೇಲ್ತವರ
ಬೆನ್ನ ಹತ್ತಿಕೊಂಡ ಮುಧ್ಧರ
ಗಚ್ಚಿನ ಕೋಟೆಯೊಳು ಹಚ್ಚಿ ದೊಡೆದನು
ಭೀಮರಾಯ ರಣಶೂರಾ।
..............................................
..............................................
ಇಂದಿನ ಯುಗದೊಳು ಇಂದ್ರಜೀತು
ರಾಮಚಂದ್ರನ ಬಲಹೊಡೆದಂತೆ
ಅಂಗದ ರಾಕ್ಷಸನ ಬಲ ಹೊಕ್ಕಂತೆ
ಭೀಮರಾಯ ಜಗಳಮಾಡಿ ಹೋದಂತೆ
ಗುಂಡಿನ ಶಬ್ದ ಆಳ್ಳ ಹುರಿದಂತೆ
ದೇಸಾಯಿಗೆ ಹೇಳತಾನ ಇಂತೆ

(೧೮೫೭ ರ ಲಾವಣಿಗಳು)
ಲೋಕಟ್ರಸ್ಟಿನ ಪ್ರಕಾಶನ ಹುಬ್ಬಳ್ಳಿ

## ನರಗುಂದ ಕ್ರಾಂತಿವೀರ ಬಾಬಾಸಾಹೇಬನ ಲಾವಣಿ

ಫಿರಂಗೇರು (ಇಂಗ್ಲಿಷರು) ನರಗುಂದವನ್ನು ತಮ್ಮದನ್ನಾಗಿ ಮಾಡಿಕೊಳ್ಳಲು ಅನೇಕ ರೀತಿಯಿಂದ ಮೋಸತನವನ್ನು ಎಸಗುತ್ತಾರೆ. ಅದನ್ನು ಲಾವಣಿಕಾರನಿಂದ ಕೇಳಬೇಕು.

ಶೂರ ಬಾಬಾ ಸಾಹೇಬ್ನ ಸತ್ಮುಳ್ಳ ರಾಜ್ಯದ
ಸೂರೆ ಮಾಡ್ಯಾರೊ ಪಿರಂಗೇರು
ಮೀರಿದ ನರಗುಂದದ ಹೆಸರನ್ನು ಅಳಿಸ್ಯಾರೋ
..................................................................
..................................................................
ನೂರಾರು ಜನ ಮ್ಯಾಳ ತಂದಾನೊ
ಬಾಬಾ ಸಾಹೇಬ ಬಂದೆರಗ್ಯಾನೊ
ಬ್ಯಾಟ ಕೈಯಾಗಬಂತೆಂದಾನೊ
ಪೊಲೀಸರನ ಕಡದ ಚೆಲ್ಯಾನೊ
ಅಬ್ರಕೇಳಿ ಮ್ಯಾನಸನ್ ಎದ್ದಾನೊ
ಕಿಡಿಕಿಡಿಯಾಗಿ ಸಿಡದ ನಿಂತಾನೊ
ಆದ್ರೇನೋ ಹತ್ತಹುಲಿಸುತ್ತ
ನಡುವೊಂದು ಕುರಿಯ ಸತ್ತ ಬಿತ್ತು
ಮ್ಯಾನಸನ್ ಕೂಗಿದರೇನಾಯ್ತು.
ಹಿಡಿದವನ ಕೆಡುಹಕೊಚ್ಚುತ್ತ
ನುಚ್ಚುನೂರ ಮಾಡಿರೆನ್ನುತ್ತ
ಬಾಬಾ ಸಾಹೇಬನ ಮಾತ ಕೇಳುತ್ತ
ಮುಗಿಸ್ಯಾರ ಆವನ ರಾತ್ರಿ ಹೊತ್ತ

ಬಳಿಕ ಬಂಡಾಯದ ಸಿದ್ಧತೆಯನ್ನು ಮಾಡಿಯಾಗುತ್ತದೆ.

ಮರುದಿವಸ ಊರ ಆಗಸಿ ಮುಚ್ಚಿಸಿ ಬಿಟ್ಟಾನೊ
ಕಾವಲಿಯಿಟ್ಟಾನೊ ಬಂಟರನ್ನ
ಯುದ್ಧದ ಸಿದ್ಧತೆ ಬಾಬಾಸಾಹೇಬ ನಡಸ್ಯಾನೊ
ದರಬಾರಕ ಕರಿಸ್ಯಾನೋ ತನ್ನವರನ್ನ
ಬಂದಂತೆ ಜನರನ್ನ ಕಾವಲಿರಿಸ್ಯಾನೊ
ಕಾಯಲಿಕೆ ನರಗುಂದ ಮಾನವನ
ಕಡಿಕಡಿದು ಬಿಟ್ಟಾರೋ ವೈರಿಗಳನೆ
ಮರೆಯಿಸಿ ನಮ್ಮ ಅಭಿಮಾನವನ
..................................................
..................................................
ಮತ್ತೆ ಶಸ್ತ್ರಾಸ್ತ್ರಗಳನ್ನೆಲ್ಲ ಸಜ್ಜುಗೊಳಿಸುತ್ತಾರೆ.

ಬಂದ ವೀರರಿಗೆ ಮೇಜವಾನಿ ಮಾಡಿಸುತ್ತಾರೆ. ವೈರಿಗಳನ್ನು ಹೊಡೆಯುವ ತೋಪಿನ ಅರ್ಬಾಟಕ್ಕೆ ಭೂಮಿಯು ನಡುಗಿ ಹೋಯಿತೆಂದು ಲಾವಣಿಕಾರ ಹೇಳುತ್ತಾನೆ.

ಧಾರವಾಡದಲ್ಲಿರುವ ಬ್ರಿಟಿಷ ದೊರೆಗಳು ಮ್ಯಾನಸನ್ ನನ್ನು ಹೊಡೆದು ಸುದ್ದಿ ಕೇಳಿದರು. ಬ್ರಿಟಿಷರು ಮತ್ತೆ ಅಲ್ಲಿಗೆ ಸೈನ್ಯ ಕಳಿಸಿದರು. ಅವರ ಜೊತೆ ಮತ್ತೆ ಕನ್ನಡ ನಾಡಿನ ವೀರರು ಹೋರಾಡಿದ ಬಗೆ.

ಕನ್ನಡದ ಬಂಟರು ಕಂಡು
ಮತ್ತೆ ಹುರುಪುಗೊಂಡು
ಹಿಡಿಹಿಡಿ ಕಡಿ ಬಡಿಯೆಂದು
ಅಟ್ಟಿಕೊಂಡು ಬಂದು
ಮತ್ತೆ ತಡದಾರೋ ಹಳ್ಳ ದಂಡ್ಯಾಗ
..................................................
ಕಡಕದ ಒಗೆದರೋ ವೈರಿಗಳ ಚಂಡು
ಬಿಡಿಲಿಲ್ಲ ವೈರಿಗಳ ಮೆಶಿವ ದಂಡು
ಕತ್ತಿ ಕಡಾರಿ ಹಾರತಾವ ವಿಪರೀತ
ಹೋರಾಡಿ ಅಂಜಿಸ್ಯಾರೋ ಫಿರಂಗಿಯವರನಾ

ಬಳಿಕ ಮಾಲಿಕಮ್ ಸಾಹೇಬ ಹೆಚ್ಚಿನ ದಂಡು ತೆಗೆದುಕೊಂಡು ಬರುತ್ತಾನೆ. ಮಾಲಕಮ್ ಸಾಹೇಬ ಮೆನಸನ್‌ನ ಸಾವಿನ ಸುದ್ದಿ ಕೇಳುತ್ತಾವನೆ. ಆತ ಗಡಗಡನೆ ನಡಗುತ್ತಾನೆ. ಆದರೇನು ಬಂದೂಕಿನಿಂದ ಅಷ್ಟೇ ದಡದಡನೆ ಗುಂಡುಗಳ ಸದ್ದು ಮಾಡುತ್ತಾನೆ.

ತೀವ್ರವೇ ತಾಳಬ್ರಷ್ಟ ಮಾಡಬೇಕೆಂದು ಬಾಪು ಪಂತರ ಸಂಚಿನಿಂದ ನರಗುಂದದ ವೀರರು ಹಿಂದೆಗೆದರು. ಆದರೂ ಧೃತಿಗೆಡದೆ ಹೋರಾಡಿ ವೀರ ಮರಣವನ್ನು ಹೊಂದಿದರು.

ಫಿರಂಗ್ಯಾರು ದಂಡನ್ನು ಅಂಜಿಸಿದ ಬಳಿಕ ಕೇರಿ ಕೇರಿಯಲ್ಲಿರುವ ಕತ್ತಿ, ಕಠಾರಿ, ಕೊಡ್ಲಿ, ಕುಡಗೋಲು, ಬಿಲ್ಲು-ಭರ್ಚಿ ಮುಂತಾದ / ಶಸ್ತ್ರಾಸ್ತ್ರಗಳ ಶೋಧ ನಡೆಯಿಸಿದರು.

ಹಾಗೇ ಬಾಬಾ ಸಾಹೇಬನ ಶೋಧ ನಡೆಯಿಸಿ ತೊರಗಲ್ಲ ಹಾದಿಯಲ್ಲಿ ಸುತ್ತಲೂ ಗುಂಡುಗಳನ್ನು ಹಾರಿಸಿ ತಗ್ಗಿನಲ್ಲಿ ಹಿಡಿದು ಬೆಳಗಾವಿಗೆ ಕಳಿಸಿದರು.

ಲಾವಣಿಕಾರ ಹೇಳುವಂತೆ ನರಗುಂದ ಹಾಳಾದ ಬಗೆಯನ್ನು ಜನಪದ ಗೀತಕಾರ ಹೀಗೆ ಹೇಳುತ್ತಾನೆ.

ಬಾಪು ಪಂಚರ ಸಂಚಿಗೆ। ಘಾತಾತೋ ನರಗುಂದ
ಹಾಳಾಗಿ ಹೋತೋ ನಿಪ್ಪತಗಿ
ಹಾಳಾಗಿ ಹೋತೋ ನಿಪ್ಪತಗಿ। ನರಗುಂದ
ಖ್ಯಾತಿ ಜಗದಾಗ ಅಳಿಸೀತೋ॥

ನರಗುಂದದ ವೀರ ಗೀತೆಗಳು ಇನ್ನೂ ನುಡಿಯುತ್ತಲೇ ಇವೆ.

ಕ್ರಿ.ಶ. ೧೮೫೮ರ ಟೀಪು ಸುಲ್ತಾನ ಕನ್ನಡ ನೆಲದಲ್ಲಿ ಟೀಪುವಿನ ಇತಿಹಾಸ

ಅಮರವಾದುದು. ನಮ್ಮ ಅನೇಕ ಜನಪದ ನಂಬಿಕೆಗಳು ಇನ್ನು ಚಲಾವಣೆಯಲ್ಲಿವೆ. ಅವುಗಳಲ್ಲಿ ಹಾವುಗಳ ಬಗೆಗೆ ಅನೇಕ ನಂಬಿಗೆಗಳೂ ಇವೆ. ನಾಗರ ಹಾವು ಮನುಷ್ಯನ ಮೈಮೇಲೆ ಹರದಾಡಿ ಹೋದರೆ, ಹೆಡೆ ತೆಗೆದುನಿಂತರೆ ಆತನು ವೀರ ವ್ಯಕ್ತಿತ್ವವನ್ನು ಪಡೆಯುತ್ತಾನೆಂಬ ಬಲವಾದ ನಂಬಿಕೆ ಜನಪದದಲ್ಲಿ ಐತಿಹಾಸಿಕವಾಗಿ ನಾಗರ ಹಾವಿನ ಚಿತ್ರ ಈ ನಂಬಿಕೆಗೆ ಸಾಕ್ಷಿಯಗಿವೆ.

ಬಾಗಲಕೋಟೆಯ ನಾನು-ಗೌಸ' ಎಂಬ ಮೋಹರಂ ಹಾಡುಗಾರನಿಂದ ಟೀಪು ಸುಲ್ತಾನನ ಬಾಲ್ಯ ತಿಳಿಯುವ ಒಂದು ಗೀತವನ್ನು ನೋಡಬೇಕು.

ಯುದ್ಧ ದೊಳಗ ರಣಶೂರನೀತ  
ಟೀಪು ಸುಲ್ತಾನನೆ ಮಾತ। ಇಡಿರಿ ಖ್ಯಾಲಾ

ಹೀಗೆ ಪ್ರಾರಂಭವಾದ ಗೀತ ಟೀಪುವಿನ ಬಾಲ್ಯಲೀಲೆಯನ್ನು ಎತ್ತಿ ತೋರುತ್ತದೆ.

ಬ್ರಾಹ್ಮಣನ ಮನಿಯೊಳಗ  
ಚಾಕರಿ ಇದ್ದ ಟೀಪೂ ಆಗ।  
ಸಣ್ಣವನು ಇರುತಾನಾ  
ಕಾವುತಿದ್ದ ಆಕಳದನಾ  
ನಿತ್ಯ ನೇಮ ಹೋಗುನು ಹೊಲಕೆ  
ಬಿಟ್ಟು ದನಾ ಗಿಡದಾ ಬುಡಕ।  
ಮಲಗುವನು ಬೇಸತ್ತ ಯಾರ ಭಯವಿಲ್ಲಾ॥  
ನಿದ್ರೆಯಲಿ ಮಲಗ್ಯಾನೋ ಪಾಶಾ  
ಬಂತು ಏಳು ಪದ್ಮದ ಸರ್ಪಾ।  
ನೆರಳ ಆಗ ಹಿಡದಿತಪ್ಪ ಮಾರಿಮ್ಯಾಲಾ॥

ಈ ಮೋಹರಂ ಗೀತೆಯಲ್ಲಿ ಟೀಪುವಿನ ವೀರತನವನ್ನು ತುಂಬಾ ಬಣ್ಣಿಸಲಾಗಿದೆ ಕಂಪಿನಿ ಸರಕಾರಕ್ಕೆ ಶರಣಾಗುವ ಪೂರ್ವದಲ್ಲಿ ಅವನ ವೀರತನವನ್ನು ಗೀತೆಯನ್ನು ಕೇಳಬೇಕು.

ಇಂಗ್ಲಿಷರೊಡನೆ ಕಾದಾಡುತ್ತಾ  
ದೇಶ ರಕ್ಷಣಾ ಮಾಡುತ್ತಾ  
ವೈರಿಯನ್ನು ಹಣಿಯುತ್ತ  
ಟೀಪು ಕುಣಿಯುತ್ತ ನಿಂತಾ  
ಅವನಿಗೆ ಒಲಿದಿದ್ದ ರಂಗನಾಥ  
ದೇಶದ್ರೋಹಿ ಮಾಡಿದ ಘಾತಾ  
ಮೈಸೂರ ಹುಲಿತಾ ಸೋತಾ  
ಮಕ್ಕಳನು ಅಡವು ಇಡುತಾ

ಖಡ್ಗ ಹಿಡಿದು ಕಾದುತ್ತ ನಿಂತಾ
ಟೀಪು ಪ್ರಾಣಬಿಟ್ಟ ಕಾದುತ್ತಾ
ಅವನಿಗೆ ಒಲಿದಿದ್ದ ರಂಗನಾಥ!

## ಕಿತ್ತೂರ ರಾಣಿ ಚೆನ್ನಮ್ಮ

'ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿ' ಎಂದು ಕಿತ್ತೂರ ರಾಣಿ ಚೆನ್ನಮ್ಮ ಕನ್ನಡಿಗರಿಗೆಲ್ಲ ವೀರತನದ ಪ್ರತೀಕವಾಗಿದ್ದಾಳೆ. ವೀರಗೀತೆಗಳನ್ನು ಕಟ್ಟಿ ಗೀಗೀ, ದುಂದುಮೆ, ಲಾವಣಿಗಳಲ್ಲಿ ಚೆನ್ನಮ್ಮನ ವೀರ ವ್ಯಕ್ತಿತ್ವವನ್ನು ಸೂರೆಗೊಳಿಸಿದ್ದಾರೆ. ಕಿತ್ತೂರ ಸಂಸ್ಥಾನದ ಉಳವಿಗಾಗಿ ವೀರ ಜೀವನದ ಚಿತ್ರಣಗಳು ಚಿತ್ರಿತವಾಗಿವೆ. ಕವಿ ಗಂಗಾತನಯನ ಲಾವಣಿ ರಚನೆ ಇಲ್ಲಿ ಸಾಕ್ಷಿಯಾಗಿ ನಿಂತಿದೆ. ರಾಣಿ ಚೆನ್ನಮ್ಮ ಹಾಗೂ ಯುದ್ಧ ಭೂಮಿಯಲ್ಲಿ ನಡೆದ ಪ್ರಸಂಗ ಒಂದನ್ನಿಲ್ಲಿ ನೋಡಬೇಕು ( ಜಾನಪದಲ್ಲಿ ಕಿತ್ತೂರ ನಿಂಗಣ್ಣ ಸಣ್ಣಕ್ಕಿ, ಶಿವಲಿಂಗಪ್ಪ ಭಾವಿಕಟ್ಟಿ)

### ಕೂಡಪಲ್ಲ

ಇಷ್ಟಕೇಳಿ ಚೆನ್ನಮ್ಮ ರಾಣಿ
ಕಣ್ಣ ಕೆಂಡದಂಗ ಮಾಡ್ಯಾಳ ಲಾಲಾ
ಕಿತ್ತೂರ ಮಹಾರಾಣಿ ಕೆಚ್ಚೆದೆಯ ಚೆನ್ನಮ್ಮ
ಅಚ್ಚಳಿಯದ ಧ್ರುವ ಅನಿಸ್ಯಾಳಲ್ಲಾ ॥೭॥

ಕಪ್ಪ ಕಾಣಿಕೆ ಬೇಡಾಕ ಬಂದೀರಿ
ತಮ್ಮ ವಂಶಕ ಹುಟ್ಟರೇನಾ
ಹಣಾ ಕೊಟ್ಟ ನಿಮನ ಸಂತೈಸಲಾಕ
ಬೆನ್ನಿಗೆ ಬಿದ್ದ ಅಣ್ಣ ತಮ್ಮ ರೇನಾ
ಹಿಂದೂಸ್ತಾನ ಬಿಟ್ಟ ಎದ್ದೇಳ್ರಿ
ಇಲ್ಲದಿದ್ದ ಜೀವಂತ ಹಿಡತಂದ ಸುಡುಸುವೆನಾ
ಥ್ಯಾಕರೆ ಕೇಳಿ ತಾ ಕ್ಯಾಕರಿಸಿ ಎದ್ದಾನಾ
ಸುಟ್ಟ ಬಿಡತೇನವ ಕಿತ್ತೂರನ್ನಾ
ಮಾರನೇ ದಿನ ಮುತ್ತಿಗೆ ಹಾಕಿದಾರ
ಬೆಂಕಿ ಮಳಿ ಸುರದಂಗ ಒಂದೇ ಸವನಾ
ಕಿತ್ತೂರ ಮಹಾರಾಣಿ ಭದ್ರಕಾಳಿಯಂಗ
ಚಿದ್ರಮಾಡಿ ಬಿಟ್ಟಾಳ ಆಂಗ್ಲರನ್ನಾ

ರಾಣಿ ಚೆನ್ನಮ್ಮಾಜಿಯ ಯುದ್ಧ ತಂತ್ರ ಬಲ್ಲವಳಾಗಿದ್ದಳು. ತನ್ನ ವೀರರಿಗೆ ವೀರತನದಿಂದ ಕಾಡಲು ಕರೆ ನೀಡಿದಳು. ಲಾವಣಿಕಾರ ರಾಣಿ ಚೆನ್ನಮ್ಮನ ವೀರಶ್ರೀಯನ್ನು ಮೆಚ್ಚಿ ನುಡಿದ ಗೀತೆ ಮುಂದೊರೆಯುವುದು

**ಚಾಲಾ**

ಆಂಗ್ಲರ ಸೈನ್ಯ ನುಗ್ಗಾಗಿ
ಓಡಿಹೋದ ತಿರುಗಿ
ದಿಕ್ಕಾಪಾಲಾಗಿ
ಥ್ಯಾಕರೆ ಸಾಹೇಬ ಬಂದ ಇದರಿಗಿ
ಇಬ್ಬರಿಗೆ ಯುದ್ಧ ಸುರುವಾಗಿ
ಚೆನ್ನಮ್ಮನ ಹೊಡತಿಗಿ
ತಪ್ಪದೆ ಸರಿಯಾಗಿ
ಥ್ಯಾಕರೇ ರುಂಡ ಬಿತ್ತ ಭೂಮಿಗಿ

**ಕೂಡಪಲ್ಲ**

ಭಲೆ ಚೆನ್ನಮ್ಮರಾಣಿ ಧೀರನಾರಿ
ನೀ ವೀರ ರಕ್ತ ಕನ್ನಡದ ಕುಲಾ.

ಇನ್ನೊಂದು ಲಾವಣಿ ಚೆನ್ನಮ್ಮನ ವೀರವೃತ್ತಿಯಲ್ಲಿ ಹುಲಕುಂದದ ಕವಿ ಭೀಮಸಿಂಗನು ಹಾಡಿಕೊಂಡಂತೆ

ಥ್ಯಾಕರೆಯು ಭೀಕರ ಯುದ್ಧ ಹೂಡಿದನು. ಇಪ್ಪತ್ತು ನಿಮಿಷದಲ್ಲಿ ಕೋಟೆ ಬಾಗಿಲು ತೆರೆಯಲು ತಿಳಿಸಿದನು ಅಂಜಿಕೆ ಹಾಕಿದನು. ಆಗ ಪುಂಡ ಕಿತ್ತೂರ ನಾಡಿನ ಗಂಡುಗಲಿಗಳು ತಂಡೋಪ ತಂಡವಾಗಿ ಕಾದಲು ಸುರು ಮಾಡಿದರು.

ಹೆಂಡ ಇಂಗ್ಲಿಷರ ರುಂಡಾ ಚಂಡಾಡಿ ಬಿಡಬೇಕಂತಾ
ಗುಂಡು 'ಗುದರಿ ಏರಿ ಬಂದ್ಲ ಚೆನ್ನಮ್ಮನವರಾ
ಥ್ಯಾಕರೆ ಸಾಹೇಬ ಹೊಂಕರಿಸಿ ತಕ್ಷಣಾ ಕುದರಿ ಏರಿದಾ
ಥಕ್ ಥಕ್ ಆಗಿ ಬಂದ ಬೇಬಿಬರಾ

ಆ ವೇಳೆಯಲ್ಲಿ ಚೆನ್ನಮ್ಮಾಜಿಯ ಮೈಗಾಲಿನವರಾದ ಅಮಟೂರ ಬಾಳಪ್ಪ ಹಾಗೂ ಇತರ ವೀರರು ಚೆನ್ನಮ್ಮಾಜಿಯ ಆಜ್ಞೆ ಪಡೆದುಕೊಂಡರು.

ವೀರ ಮಾತೆಯ ಆಜ್ಞೆ ಪಡಕೊಂಡರಾ।
ಗುರಿ ಹಿಡಿದ ಹಾರಿಸ್ಯಾರ ಗುಂಡಾ।
ಜಾಂವಿಗಿ ಬಂದೂಕಿನ ಸಪ್ಪ ಮನಗಂಡಾ।
ಢಂ ಅಂತ ಸಪ್ಪಳಾತ ಗಡಾ।
ಥ್ಯಾಕರೆ ಸಾಹೇಬಂದು ಹಾರಿತ ರುಂಡಾ॥

## ಸಂಗೊಳ್ಳಿ ರಾಯಣ್ಣ

ಶೂರ ಸಂಗೊಳ್ಳಿ ರಾಯಣ್ಣನು ಕಿತ್ತೂರ ಸಂಸ್ಥಾನದ ಉಳಿವಿಗಾಗಿ ಮತ್ತು ಬ್ರಿಟಿಷರನ್ನು ಕಿತ್ತೂರಿನಿಂದಷ್ಟೇ ಏಕೆ ಭಾರತದಿಂದ ಹೊರ ಹಾಕಲು ಹೋರಾಟ ಮಾಡಿದನು. ತನ್ನ ಸ್ವಾಭಿಮಾನಕ್ಕೆ ಪೆಟ್ಟುತಗಲಿದಾಗ ಸಿಡಿದೆದ್ದು ಆಂಗ್ಲರನ್ನು ಪ್ರತಿಭಟಿಸಿದ ಬಂಟನಾಗಿದ್ದಾನೆ. ಸಂಗೊಳ್ಳಿ ರಾಯಣ್ಣನ ಬಗೆಗೆ ಲಾವಣಿಗಳನ್ನು ಸಂ|| ಡಾ. ನಿಂಗಣ್ಣಾ ಸಣ್ಣಕ್ಕಿಯವರು ಲಾವಣಿ ಸಾಹತ್ಯದಲ್ಲಿ ಸಂಗೊಳ್ಳಿ ರಾಯಣ್ಣಾ ಕೃತಿಯಲ್ಲಿ ದಾಖಲೆ ಮಾಡಿದ್ದಾರೆ.

ಸಂಗೊಳ್ಳಿ ರಾಯಪ್ಪ ಲಾವಣಿ ಪದಾ ಎಂಬ ಗೀತೆಯಲ್ಲಿ ಚಿಕ್ಕ ನಂದಿಯ ಕವಿಯೊಬ್ಬ ರಾಯಣ್ಣನ ವೀರಶ್ರೀಯನ್ನು ಹಾಡಿಕೊಂಡಿದ್ದಾನೆ.

ಏ ಸಿಂಹದಂತಹ ಸಂಗೊಳ್ಳಿರಾಯ
ಭೂಮಿಗೆ ಬಿದ್ದಂಗ ಸೂರ್ಯನ ಛಾಯಾ
ನೆತ್ತರ ಕಾವಲಿ ಹರಿಸಿದಾನ ಕಿತ್ತೂರ ನಾಡಾಗ
ಭಾಳ ಬಂಟಸ್ತನ ಇತ್ತ ಅವನ ಹೊಟ್ಟೆಯೊಳಗ
ಸೃಷ್ಟಿಯೊಳಗ ಹುಟ್ಟಿ ಬಂದ ಶ್ರೇಷ್ಠನಾಗಿ ಹೋಗಿದಾನ
ದುಷ್ಟ ರಾವಣಾಸುರನ ಲಂಕಾ ಸುಟ್ಟಂಗ
..........................................................
ಜಾತಿಯಿಂದ ಕುರಬರ ಬೀರಾ ರೂಪದಲ್ಲಿ ಸೂರ್ಯ-ಚಂದ್ರ
ಪಂಚ ಪಾಂಡವರೊಳಗ ಭೂಮಿ ಹುಟ್ಟಿ ಬಂದಾಗ
ಗುಡಗ-ಸಿಡ್ಲು-ಮಿಂಚು- ಗದ್ಲಿ ಹೊಡೆದಂಗ

ವೀರ ಸಂಗೊಳ್ಳಿ ರಾಯಣ್ಣನ ಇತಿಹಾಸ ಅಮರವಾದುದು. ಭಾರತದಲ್ಲಿ ಆತನನ್ನು ಹೋಲಿಸುವುದಾತರೆ ಶೂರ ಸುಭಾಸಚಂದ್ರ ಭೋಸರಿಗೆ ಮಾತ್ರ ಹೋಲಿಕೆ ಸಲ್ಲುತ್ತದೆ. ವೈರಿಗಳನ್ನು ಹೊಡೆಯುವ ತಂತ್ರ ರಾಯಣ್ಣನಿಗೆ ಸ್ವತಂತ್ರವಾಗಿ ಹೊಳೆದುದು. ಲಾವಣಿಕಾರ ಶಾಹೀರ ಶಾಮರಾವ ಹಾಡಿಕೊಂಡ ಲಾವಣಿಯಲ್ಲಿ ವೈಶಿಷ್ಟ್ಯ ಪೂರ್ಣ ತಂತ್ರವನ್ನಿಲ್ಲಿ ಕಾಣಬಹುದಾಗಿದೆ.

ಬಹದ್ದೂರ ಇಂಗ್ರೇಜಿನ ದಂಡು ಬಂದಿತೊಲಗುಬಗಿ
ಕೇಷ ಬಾಳಿಗಂದಿ ಗುಡ್ಡಕ ಹಾಕ್ಯಾರೋ ಮುತ್ತಗಿ
ಅದರ ಸೂಚನಾ ಮುಟ್ಟಿತೋ ರಾಯಣ್ಣಗ ಹೋಗಿ
ಅವನ ಕಲ್ಪನಾ ತಿಳಿಯಲಾಕ ಇಲ್ರಿಯಾರ್ಯಾರಿಗಿ
ಗುಡ್ಡದೊಳಗ ಇರುವಂಥ ಕಂಟಿ-ಗಿಡಗಳನ್ನೆಲ್ಲ
ಮಂಡ ಮಾಡಿ ಅರವಿಸುತ್ತಿ ಹಚ್ಯಾರೋ ಬ್ಯಾಗಿ
ರಾಯಣ್ಣನ ದಂಡ ಇಲ್ಲೇ ಐತಿ, ಮಾಡತೈತಿ ಅನ್ನ-ಅಡಗಿ
ಉರಿಯನೋಡಿ ಭ್ರಮಾ ಆಗಿ ಇಂಗ್ರೇಜಿಯರ್ ಬಿಗಲ್ ಮಾಡಿ
ಬಂದಾರೋ ಲಗುಬಗಿ ಗುರಿ ಹೂಡಿ ಹೊಡೆದಾರೊ
ಕತ್ತಲ ಕವಿದಿತೋ ಆಗ ತುಂಬಿ ಹೋಗಿ||

ಕೂಗ ಹೊಡೆದೂ ರಾಯಣ್ಣ ಅವನ ದಂಡ ಬಂತೊವಾರ್ಯಾಗಿ
ತುಳ ತುಳದ ಒಬ್ಬೊಬ್ಬರನ್ನು ಹೊರಹೊರಳಿಸಿ ತಂದಾರೊ
ನಿತ್ತ ಚಿತ್ತ ಬಲ್ಲಾಂಗ ಕತ್ತಿಲಿ ರಾಯಣ್ಣ ಕಡದಾನೊ
ಸತ್ತ ಬಿದ್ದವ ಹೆಣ ರಕ್ತ ಹರದಿತೋ ಧರಿಗಿ
ಸತ್ರಗಟ್ಟಿ ಹೊಡೆದಾರೋ ಒಬ್ಬರು ಹೋಗಲಿಲ್ಲ ತಿರುಗಿ
ಪ್ರಾತಃಕಾಲದಲ್ಲಿ ರಕ್ತ ಮಾಂಸ ತಿನ್ನಾಲಾಕ
ಸುತ್ತು ಕಡೆ ಮುತ್ತಿದಾವ ಹದ್ದುಗಳು

ಜನಪದ ಗೀತೆಗಳನ್ನೆಲ್ಲ ಅಧ್ಯಯನ ಮಾಡಿದಾಂಗ ಸಂಗೊಳ್ಳಿ ರಾಯಣ್ಣನು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಾಗಿ ಕಂಗೊಳಿಸುತ್ತಾನೆ. ಇಲ್ಲಿಯ ವರೆಗೆ ಆತನ ಬಗೆಗೆ ದೊರಕಿದ ಏಳು ಲಾವಣಿಗಳು ರಾಯಣ್ಣನ ನೈಜ ಚಿತ್ರಣಗಳನ್ನೇ ನೀಡುತ್ತಿವೆ. ರಾಯಣ್ಣ ಚತುರನಾಗಿದ್ದಾನೆ. ವೀರಾಧಿವೀರನಾಗಿ ಜನಮನಗೆದ್ದಿದ್ದಾನೆ. ಅವನ ವೀರತನದ ಪರಿಕಲ್ಪನೆಯು ಹುಟ್ಟಬೇಕೆಂದು ಸಾವಿರಾರು ಗರತಿಯರು ವ್ರತಗಳನ್ನು ಆಚರಿಸಿದ್ದಾರೆ. ಆಚರಿಸುತ್ತ ಸಾಗಿದ್ದಾರೆ.

ವೀರ ರಾಯಣ್ಣನು ಬ್ರಿಟಿಷರ ವಿರುದ್ಧ ಹನ್ನೆರಡು ಸಲ ಯುದ್ಧವನ್ನು ಮಾಡಿದ್ದಾನೆ. ತನಗೆ ರಾಜನಗುವ ಆಶೆ ಇಲ್ಲ. ಆಂಗ್ಲರನ್ನು ಹೊರದಬ್ಬುವ ಭಾರತವನ್ನು ಸ್ವತಂತ್ರಗೊಳಿಸುವ ಕಲಿತನವನ್ನು ಹೊಂದಿದ್ದನು.

ಶೂರ ಸಂಗೊಳ್ಳಿ ರಾಯಣ್ಣನಂತೆ ವೀರತನವನ್ನು ಮರೆದರವು ಅನೇಕರಲ್ಲಿ ಅಮಟೂರ ಬಾಳಪ್ಪ, ಒಡ್ಡರ ಯಲ್ಲಣ್ಣ, ಹಬಸಿ ಮುಂತಾದ ವೀರರ ಲಾವಣಿಗಳು ಅಲ್ಲಲ್ಲಿ ಇನ್ನೂ ಜೀವಂತವಾಗಿವೆ. ಅವುಗಳ ಸಂಗ್ರಹ ಆಗಬೇಕಾದುದು ಅಗತ್ಯವಿದೆ.

ಜನಪದರಿಗೆ ವಿರತನದ ಪರಿಕಲ್ಪನೆಯ ಇಷ್ಟವಾದುದು. ಅಂತೆಯೇ ಬಂಡಾಯ ಮಾಡಿದವರು ಕಲಿಗಳಂತೆ ಅವರಿಗೆ ಕಾಣುತ್ತಾರೆ. ಸಿಂಧೂರ ಲಕ್ಷ್ಮಣ ಹಾಗೂ ಕಟ್ಟಿ ಚೆನ್ನ ಕ್ರಮವಾಗಿ ಬಿಜಾಪೂರ ಜಿಲ್ಲೆ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಎದ್ದು ಕಾಣುವ ಜನಪದರಿಂದ ಹೋಗಳಿಸಿಕೊಂಡ ಶೂರ ವ್ಯಕ್ತಿಗಳು, ಇವರಿಬ್ಬರೂ ಅಭಿಮಾನಕ್ಕೆ ಪೆಟ್ಟು ತಗಲಿ, ಸಿರಿವಂತಿಕೆಯ ಹಾಗೂ ಪೊಲೀಸರ ವಿರುದ್ಧ ಹೋರಾಡಿ ಮರಣವನ್ನಪ್ಪಿದವರು. ಇವರ ಹೋರಾಟಗಳು ಜನಪದ ಲಾವಣಿಕಾರರಲ್ಲಿ ಒಪ್ಪಿಗೆಯನ್ನು ಪಡೆದಿದೆ.

ಜೋಳಿಗೇರ ಎಂಬ ವೃತ್ತಿಕಾಯಕರಿಂದ ಸಾಗರದಲ್ಲಿ ಕೆಳದಿಯ ಚೆನ್ನಮ್ಮನ ಇತಿಹಾಸ ಕುರಿತಾದ ಕಥನ ಗೀತೆಯೊಂದನ್ನು ನಾನು ಕೇಳಿದ್ದೇನೆ. ಇನ್ನೂ ಈ ವರೆಗೆ ಯಾರೂ ಸಂಗ್ರಹಿಸಿದಂತೆ ಕಂಡು ಬಂದಿಲ್ಲ!

---

೪. ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ ಸಂ. ಡಾ।। ನಿಂಗಣ್ಣ ಸಣ್ಣಕ್ಕಿ (ಪುಟ ೨೧-೨೨)

ಕಿಂದರ ಜೋಗಿಗಳಿಂದ ರಾಯಚೂರಿನಲ್ಲಿ ವೀರಾರ್ಜುನ' ಕಥನ ಗೀತೆಯನ್ನು ಹಾಡಿಸಿ ಟಿಪ್ಪಣಿ ಮಾಡಿಕೊಂಡಿರುವುದುಂಟು ವೀರ ಅರ್ಜುನನು ಮಾಡಿದ ಯುದ್ಧದ ಪ್ರಸಂಗಗಳು ಇವರಲ್ಲಿ ವೀರರಸ ಪ್ರಧಾನವಾದವುಗಳಾಗಿವೆ. ಇತ್ತೀಚೆಗೆ ಕಿಂದರಜೋಗಿಗಳ ಸಾಹಿತ್ಯ ಕುರಿತು ಅಧ್ಯಯನಕಾರರು ಹೆಚ್ಚಿನ ಸಂಗ್ರಹ ನಡೆಯಿಸಿದುದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ತಿಳಿದುಬಂದಿತು.

ಕರ್ನಾಟಕದಲ್ಲಿ ಗೋಂದಲಿಗರು ವೃತ್ತಿಗಾಯಕರಲ್ಲಿ ಪ್ರಮುಖರಾಗಿದ್ದಾರೆ. ಅವರ ಒಟ್ಟು ಸಾಹಿತ್ಯವನ್ನು ನಿರೀಕ್ಷಿಸುವಾಗ ಅನೇಕ ಜನಪದ ಕಥೆಗಳಲ್ಲಿ ವೀರವತಾರವೇ ಎದ್ದು ನಿಲ್ಲುತ್ತದೆ. ಮಾತಿನ ಮೂಲಕವೂ ಹಾಡಿನ ಮೂಲಕವು ವೀರತಾದ್ರ ತಾಂಡವವಾಡುತ್ತದೆ. ವೀರ ಅಭಿಮನ್ಯುವಿನ ಕಥೆ ವಿಕ್ರಮರಾಜನ ಕಥೆಗಳಲ್ಲಿ ಪರಾಕ್ರಮವನ್ನೇ ಮೆರೆಯಿಸುತ್ತಾರೆ. ರಾಕ್ಷಸರ ಕಥೆಗಳಲ್ಲೂ ಯುದ್ಧ ನಿರುಪಣೆಯ ವೀರತನ ಭೂಮಿಯಿಂದ ಆಕಾಶದ ಅಂಗಳದಲ್ಲೂ ಸಾಗುತ್ತದೆ. ಪೌರಾಣಿಕವಾದ ಅಂದಿನ ಕಲ್ಪನೆಗಳು ಇಂದು ನಡೆಯುವ ಯುದ್ಧಗಳ ಪರಿಕಲ್ಪನೆಯ ಸಂಕೇತಗಳಾಗಿವೆ. ಶ್ರೀ ಶಂಕರ ಭೀಮಾಕಾಳೆ, ಸಂಕೇಶ್ವರದ ಗೋಂದಲಿಯು ಇಂತಹ ಕಥೆಗಳನ್ನು ಹೇಳುವದರಲ್ಲಿ ಪ್ರಮುಖನಾದವನು.

ಶ್ರೀ ಮುದೇನೂರ ಸಂಗಣ್ಣ ಅವರ ಗೋಂದಲಿಗರ ದೇವೇಂದ್ರಪ್ಪನವರ ಆಟಗಳು ಎಂಬ ಕೃತಿಯನ್ನು ಪ್ರಸಾರಂಗ .ಕ.ವಿ.ವಿ. ಹಂಪಿ (೧೯೯೩) ಯಿಂದ ಪ್ರಕಟಿಸಲಾಗಿದೆ. ಇದರಲ್ಲಿ ರಾಜಾ ವೀರ ಪರಾಕ್ರಮ ಎಂಬ ಕಥೆ ವೀರಗೀತೆಗಳೊಂದಿಗೆ ಕೂಡಿಕೊಂಡಿರುವುದನ್ನಿಲ್ಲಿ ನೆನೆಯಬೇಕಾದುದು ಅಗತ್ಯವಾಗಿದೆ.

ಕರ್ನಾಟಕದಲ್ಲಿ ತುಂಬ ಹೊಳೆ ಹರಿದಲ್ಲಿ, ಹೊಳೆಯ ದಂಡೆಯ ಮೇಲಿನ ಊರುಗಳಲ್ಲಿ ನಾವಿಕರಿದ್ದಾರೆ. ಅವರ ಹಾಡುಗಳನ್ನು ದೋಣಿ ಹಾಡುಗಳೆಂದು ಜನಪದ ಹಾಡುಗಳ ಪ್ರಕಾರದಲ್ಲಿ ಗೊತ್ತು ಮಾಡಲಾಗಿದೆ. ಕೆಲವರ ಹಾಡುಗಳನ್ನು ಶ್ರಮಿಕರ ಗೀತೆಗಳೆಂದೂ ಕರೆದಿದ್ದಾರೆ. ದೋಣಿ ಒತ್ತುವಾಗ ಹುಟ್ಟು ಕಡಿಯುವಾಗ (ಹಾಕುವಾಗ) ದೋಣಿ ಕಟ್ಟುವಾಗ ಸಾಹಜವಾಗಿಯೇ ಅವರ ಹಾಡುಗಳು ಚೇತನಗೊಳ್ಳುತ್ತ ಜಯರಾಮ ಎಂಬ ಗೀತೆ ಜನಪದ ಖಂಡಕಾವ್ಯಗಳಲ್ಲಿ ಒಂದಾದುದು. ರಾವಣನನ್ನು ಶ್ರೀರಾಮ ವಧಿಸಿ, ಲಂಕೆಯಿಂದ ಬಂದುದೇ ಈ ಗೀತೆಯ ಪ್ರಮುಖ ಕಥಾವಸ್ತುವಾಗಿದೆ. ಮಹಾಭಾರತದ ಪ್ರಸಂಗ ಹೇಳುವ ಇನ್ನೊಂದು ಗೀತೆ ಕೀಚಕನ ವಧೆ' ವೀರರಸ ನಿರೂಪಿಸುವ ಬಗೆಯದಾಗಿದೆ. ಪಂಪಮಹಾಕವಿಯ ವಿಕ್ರಮಾರ್ಜುನ ವಿಜಯ, ರನ್ನ ಮಹಾಕವಿಯ ಸಾಹಸ ಭೀಮ ವಿಜಯ' (ಗಧಾಯುದ್ಧ) ಕಾವ್ಯಗಳನ್ನು ನೆನಪಿಗೆ ತರುವ ತುಂಡು ಜನಪದ ಖಂಡಕಾವ್ಯಗಳೆಂದು ಅನ್ನಿಸದೇ ಇರದು. ದೋಣಿಯ ಇಂತಹ ಗೀತೆಗಳನ್ನು ಸಂಗ್ರಹಿಸುವುದು ಗಮನಾರ್ಹ ಕಾರ್ಯವಾಗಿದೆ.

ಜನಪದರು ತಿಳಿಸುವ ಇಂತಹ ವೀರಗೀತೆಗಳು ಶಿಷ್ಯರೂಪಕ್ಕೆ ತಿರುಗಿದಾಗ ದೃಷ್ಟಾಂದಗಳ ಮೂಲಕ ಕಲಾತ್ಮಕವೂ ವರ್ಣನಾತ್ಮಕವೂ ಆಗಿ ಸೌಂದರ್ಯದಾಗರವಾಗುತ್ತವೆ. ಪಂಪ ಮಹಾಕವಿ ರನ್ನಮಹಾಕವಿ ಜನಪದ ವೀರವೃತ್ತಿಯನ್ನು ಕಂಡುಂಡಿರಬಹುದೆಂದೆನ್ನಿಸುತ್ತದೆ.

ಉತ್ತರ ಕರ್ನಾಟಕದಲ್ಲಿ ಗುಗ್ಗಳ ಹಾಡುಗಳು ಈಗ ಗುಗ್ಗಳ ಗೀತೆಗಳೆಂದು ಹೆಸರು ಪಡೆಯುತ್ತಿವೆ. ಗುಗ್ಗಳಗೀತೆಗಳನ್ನು ವೀರಭದ್ರದೇವರ ಒಡಬು ಹೇಳುವವರು ಗೀತಾತ್ಮಕವಾಗಿ ಸಂಗೀತ ಬದ್ಧವಾಗಿ ನುಡಿಯುತ್ತಾರ ಮತ್ತು ಹಾಡುತ್ತಾರೆ.

**ವೀರಭದ್ರದೇವರು**

ವೀರಭದ್ರ ದೇವರು ಹಾಹಾ
ವೀರಭದ್ರ ದೇವರು ಹಾಹಾ
ನಮ್ಮ ಕಡೆಗಣ್ಣ ವೀರ ಭದ್ರ ದೇವರು
ಅವತರಿಸಿ ಭಳಿ ಭಳಿರೆ ಬಂದು।
ರುದ್ರಾವತಾರಕೆ ದೇವತೆಗಳು
ದಿಕ್ಕೆಟ್ಟು ಗಡಗಡಾ ನಡುಗಿದರು।
ವೀರಭದ್ರ ಕಡಿದ ದಕ್ಷಿಣಶಿರವ
ಕಡೆ ಕಡೆ ಹರಿಸಿದ ನೆತ್ತರವ।

(ಗಂಡಸರ ಜನಪದ ಹಾಡುಗಳು ನಿಂಗಣ್ಣ ಸಣ್ಣಕ್ಕಿ)

ಇಂತಹ ಗೀತೆಗಳು ಗುಗ್ಗಳದ ಗೀತೆಗಳಂತೆ ವಿರಗಾಸೆ'ಯ ಕುಣಿತದ ಗೀತೆಗಳಲ್ಲೂ ಇವೆ. ಒಂದೆಡೆ ಸಂಗ್ರಹವಾಗುವುದು ಅಗತ್ಯವಾಗಿದೆ.

ಜನಪದ ವೀರಗೀತೆಗಳು ಇಲ್ಲಿ ವರೆಗೆ ಸಂಗ್ರವಾದವುಗಳಲ್ಲಿ ಪಿರಿಯಾ ಪಟ್ಟಣದ ಕಾಳಗದ ಗೀತೆಗಳು ಪ್ರಮುಖವಾಗಿವೆ. ಐತಿಹಾಸಿಕವಾಗಿ ಪಿರಿಯಾಪಟ್ಟಣ ಹೆಸರುವಾಸಿಯಾದ ಮೈಸೂರಿನ ಸಂಬಂಧದ ಕಾಳಗದ ಪರಂಪರೆಯ ಸ್ಥಳವಾಗಿದೆ. ಪಟ್ಟಣವು ಮೈಸೂರ ನಗರದಿಂದ ೬೦-೬೫ ಕಿಲೋಮೀಟರ ಅಂತರದಲ್ಲಿದೆ.

ಭೌಗೋಳಿಕವಾಗಿ ಬೆಟ್ಟ-ಗುಡ್ಡಗಳ ಸಾಲುಗಳಿಂದ ದಟ್ಟ ಹಾಗೂ ಹಸಿರು ಭರಿತ ಅರಣ್ಯಗಳಿಂದ ತುಂಬಿಕೊಂಡ ಭೂಭಾಗವಾಗಿದೆ.

ಕನ್ನಡ ಜನಪದ ಐತಿಹಾಸಿಕ ಕಾವ್ಯಗಳಲ್ಲಿ ಪಿರಿಯಾಪಟ್ಟಣ ಕಾಳಗ ಅತ್ಯಂತ ಗಮನಾರ್ಹ ರಚನೆಯಾಗಿದೆ. ಇಷ್ಟು ವಿಸ್ತಾರವನಾದ ಸುಸಂಬದ್ಧವಾದ ವೀರಕಾವ್ಯ ಕನ್ನಡದಲ್ಲಿ ವಿರಳವೆಂದೇ ಹೇಳಬೇಕು. ಕಂಠಸ್ಥ ಸಂಪ್ರದಾಯದಲ್ಲಿ ಉಳಿದು ಬಂದಿರುವ ಜನಪದ ವೀರಕಾವ್ಯಗಳಲ್ಲಿ ಪಿರಿಯಾ ಪಟ್ಟಣ ಕಾಳಗ ವೀರಮಹಾಕಾವ್ಯ (Heroic Epic) ಇಷ್ಟು

ದೀರ್ಘವಾದ ಜನಪದ ವೀರಕಾವ್ಯ ಬೇರೊಂದಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ತತ್ವಗಾತ್ರಗಳೆರಡರಲ್ಲೂ ಇದು ತನ್ನ ವೈಶಿಷ್ಟತೆಯನ್ನು ಉಳಿಸಿಕೊಂಡಿದೆ.

ಈ ಇಬ್ಬರು ಮಹನೀಯರ ಅಭಿಪ್ರಾಯಗಳನ್ನು ಅಧ್ಯಯನಕಾರರು ಒಪ್ಪಬೇಕಾಗುವುದು. ಆದರೆ ಪಿರಿಯಾಪಟ್ಟಣದ ಕಾಳಗದ ನಾಯಕ ಮೈಸೂರಿನ ದಳವಾಯಿ ಅದರ ಪ್ರತಿನಾಯಕ ವೀರರಾಜನಷ್ಟು ಉಜ್ವಲವಾಗಿ ಈ ಪಾತ್ರ ಬೆಳೆಯಲಿಲ್ಲ. (ಜೀಶಂಪ ಪು. xiii) ಎಂಬ ಅಭಿಪ್ರಾಯಕ್ಕೂ ವೀರರಾಜನೆ ಕಥಾನಾಯನಾಗಿದ್ದು ಉಳಿದ ಪಾತ್ರಗಳು ಕಥೆಯ ನಡೆಗೆ ಪೂರಕವಾಗಿ ಮೂಡಿ ಬಂದಿದೆ. (ಪಿ. ಕೆ. ರಾಜಶೇಖರ ಪು.) ಎಂಬ ಅಭಿಪ್ರಾಯ ಭಿನ್ನರೂಪಕ್ಕೆ ತಿರುಗಿವೆ.

ವೃತ್ತಿಗಾಯಕರು ಪಿರಿಯಾ ಪಟ್ಟಣದ ಕಾಳಗವನ್ನೂ ಕೆಳಗಿನಂತೆ ಪ್ರಾರಂಭಿಸುತ್ತಾರೆ.

ತಂದನಾನ ತಂದಾನ ತಾನೆನಾ
ತಂದೇನಾನಾ
ತಂದೇನಾನಾ ತಂದಾನ ತಾನನಾ

ಎಂಬ ಶ್ರುತಿ ಸೊಲ್ಲಿನಿಂದ ಸುರು ಮಾಡುತ್ತಾರೆ.

ಪ್ರಮುಖವಾದ ೧) ಪಿರಿಯಾಪಟ್ಟಣದ ಕಾಳಗ ೨) ಜನಪದ ವೀರ

ಕಾವ್ಯ ಪಿರಿಯಾಪಟ್ಟಣ ಕಾಳಗ ಕೃತಿಗಳು ಸಂಗ್ರ ಸಂಶೋಧನೆಯಲ್ಲಿ ಪ್ರಾಮುಖ್ಯ ಪಡೆದಿದೆ. ಕರಾಕೃ ಡಿ. ಲಿಂಗಯ್ಯ, ಸ. ಚ. ಮಹಾದವನಾಯಕ ಅವರುಗಳ ಸಂಗ್ರಹಗಳಾಗಿವೆ.

ಚಂಗಾಳ್ವ ವಂಶಾವಳಿಯ ಕೊನೆಯ ಅರಸು ವೀರರಾಜ ಮೈಸೂರಿನ ನರಸರಾಜ ದಳವಾಯಿ ೧೬೪೪ ರಲ್ಲಿ ಪಿರಿಯಾ ಪಟ್ಟಮಕ್ಕಾಗಿ ಒಂದು ವರುಷ ಹೋರಾಟ ಮಾಡಿದರು. ಜನಪದ ಇತಿಹಾಸ ಹಾಗೂ ಹೋರಾಟಗಳಲ್ಲಿ ಈ ವೀರಗೀತ ಸಾಹಿತ್ಯವು ಪ್ರಮುಖವಾಗಿದೆ.

---

೫. ಪಿರಿಯಾ ಪಟ್ಟಣದ ಕಾಳಗ ಜೀ ಶಂ. ಪರಮಶಿವಯ್ಯ ಪುಟಗಳು ತ. ವೆಂ. ಸ್ಮಾರಕಗ್ರಂಥ ಮಾಲೆ ಪ್ರಕಟಣೆ ಪ್ರಥಮ ಮುದ್ರಣ ೧೯೭೩.

೬. ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗ ಪುಟ ಸಂ॥ ಡಾ. ಪಿ.ಕೆ. ರಾಜಶೇಖರ ಹೊನ್ನಾರು ಜನರಪದಗಾಯಕರು ಮಾಸಬೂರು ಮೊದಲು ಮುದ್ರಣ ೧೯೯೦.

## ಹೋರಾಟದ ಒಂದು ಪ್ರಸಂಗ

ಥೀನ್ ಥೀನ್ ಅಂತ ನುಗ್ಗಿ ಬಂದನಲ್ಲ
ಮೈಸೂರವರ
ಕಾಲಿಗೆ ಬಿದ್ದವರ ಬಿಡನಲ್ಲ

ಮರವ ಏರಿದವನ ಬಿಡನಲ್ಲ
ಮೈಸೂರವರ
ಕೈ ಎತ್ತಿ ಮುದಿದವನ ಬಿಡನಲ್ಲ

ಆನೆಯಕೊಂದ ಹಳ್ಳದೊಳಗಡೆ
ಪುಟ್ಟ ಮಲ್ಲಣ್ಣಾ
ಆರು ಸಾವಿರ ರಾಣ್ಯಾ* ಕಡಿದವನು

ಒಂಟಿಕೊಂದ ಹಳ್ಳದೊಳಗಡೆ
ಪುಟ್ಟ ಮಲ್ಲಣ್ಣಾ
ಎಂಟು ಸಾವಿರ ರಾಣ್ಯಾ ಕಡಿದವನೊ

ಕಾಲು ಜಾರಿಕೆಳಗೆ ಬಿದ್ದನೊ
ವಲ್ಲಿ ಸೈದುವ
ಓಡಿಹೋಗಿ ಸೆರೆಯ ಹಿಡಿದನೋ

(ಪಿರಿಯಾ ಪಟ್ಟಣದ ಕಾಳಗ, ಜೀಶಂ ಪ. ಪುಟಗಳು ೧೩೮-೧೪೩) ಪಿರಿಯಾ ಪಟ್ಟಣದ ಕಾಳಗವು ವೀರರಾಜನ ಬದುಕನ್ನು ನಿರೂಪಿಸುತ್ತದೆ. ಕೊನೆಯಲ್ಲಿ ವೀರರಾಜನು ವೀರಾವೇಶದಿಂದ ಹೋರಾಟಮಾಡಿ. ವೀರಸ್ವರ್ಗವನ್ನು ಹೊಂದುತ್ತಾನೆ. ಈ ಸಾಲಿನಲ್ಲಿ ನಿಂಗರಾಜ ಅರಸು, ಚಂದೇ ಅರಸು ಪುಟ್ಟ ಮಲ್ಲಣ್ಣ ಮಂತಾದವರು ಸೇರುತ್ತಾರೆ. ಗೀತವನ್ನು ಕೇಳುಗರಲ್ಲಿ ವೀರಾವೇಶ ಮಿಂಚುತ್ತದೆ. ಪಿರಿಯಾಪಟ್ಟಣದ ಕಾಳಗವು ನಡೆದ ಬೂಮಿ ಗಂಡುಭೂಮಿಯಾಗಿ ಶೂರರು ಪರಾಕ್ರಮಿಗಳಾಗಿ ಮಾರ್ಪಾಡುತ್ತಾರೆ.

---

* ರಾಣ್ಯಾ = ಸೈನ್ಯ

ಕಾಳಗ ನಡೆದ ಇನ್ನೊಂದು ಪ್ರಸಂಗವನ್ನು ಜನಪದ ವೀರಕಾವ್ಯ ಪಿರಿಯಾ ಪಟ್ಣಾ ಕಾಳಗದಿಂದ ಕೇಳೋಣ

ಧೀನ್ ಧೀನ್ ಅಂತ ಸೈನ್ಯ ನುಗ್ಗಿತು
ಚೆಲ್ಕುಂದದಲ್ಲಿ
ಸಿಕ್ಕ ಸಿಕ್ಕೋರ ಅಟ್ಟಾಡಿ ಕೊಂದೀತು।
ಸಿಕ್ಕ ಸಿಕ್ಕೋರ ಅಟ್ಟಾಡಿ ಕೊಂದೀತು
ಮೈಸೂರು ರಾಜ್ಯ
ಚೆಲ್ಕುಂದಾದ ಸೂರೆ ಮಾಡಿತು।
ಅಣ್ಣನ ಮ್ಯಾಲೆ ತಮ್ಮನ ಕಡಿದಾರು
ಚೆಲಕುಂದದೋರ
ತಮ್ಮನ ಮ್ಯಾಲೆ ಅಣ್ಣನ ಕಡಿದರು।
ಮುಂಡ ಮುಂಡದ ಕುಣಿಯುತ್ತೈತಲ್ಲ
ಬೀದಿ ಬೀದಿಲಿ
ರಕ್ತದ ಕೋಡಿ ಹರದಾಡುತ್ತೈತಲ್ಲ।
ವೀರಿಸಂದ ನೆಲಕೆ ಸೋಸಲು ಗಳಿಸಿದಾರೆ
ನೆಗೆದಾಡುವಂಗೆ
ಮುಂಡಗಳು ನೆಗೆದಾಡುತಾವಲ್ಲ
ಬೀದಿ ಬೀದಿಯಲಿ ಹೆಣದ ರಾಶಿಗಳು
ಚೆಲುಕುಂದದಲ್ಲಿ
ಸೊಲ್ಲೆತ್ತುವ ನರಪಿಳ್ಳೆಯ ಸುಳಿವಿಲ್ಲ।
ಪಾಪ ತಿಳಿಯದವರು ಇವಶೀನ ಬಲ್ಲಪ್ಪ
ಕಂದ ದಳವಾಯಿ
ಈ ಚೆಲ್ಕುಂದ ವಿನ್ಯಾಸ ಆಯಿತು।

(ಪುಟಗಳು ೧೫೫ -೧೫೬)

ಇನ್ನೊಂದು ಸನ್ನಿವೇಶವನ್ನು ನೆನಪಿಸೋಣ

ಗಂಡು ಭೂಮಿಯ ಗಂಡ ಅಂದುಕೊಂಡು
ಮೆರೆದಾಡವಂತ
ಮಾವಯ್ಯ ನಿನ್ನ ಪಾಲೆ ನೋಡುಕೊಂಡು।

..........................................................

ಗಂಡೆ ನೀನಾದರೆ ದಂಡೆತ್ತಿ ಬಾರಯ್ಯ
ವೀರರಾಜಮಾವಯ್ಯ
ಹೆಣ್ಣೆ ಆದರೆ ನನ್ನಾಸಿಗೆ ಬಾರಯ್ಯ
ಕರಕರ ವಾಲೆ ಬರೆದರು
ದಳವಾಯಿಯವರು
ವಾಲೆಬಂಟಣ್ಣ ಕರೆದರು । (ಪುಟ. ೧೫೮)

ಯುದ್ಧ ಮಾಡುವ ಕತ್ತಿ ಜಟಾಯ್ದು ಹಿಡಕೊಂಡು ಯುದ್ಧಮಾಡುವ ರೀತಿ ನಂಜುಂಡನೆಂಬೋಪರಿಂಗಿ ವೀರಭದ್ರನೆಂಬೋ ಫಿರಗಿ, ರಂಗನಥಾಮನೆಂಬೊ ಫಿರಂಗಿ ಇತ್ಯಾದಿ ಶಸ್ತ್ರಾಸ್ತ್ರಗಳಿಂದ ಜರುಗಿದ ಯುದ್ಧವು ವೀರಕಾವ್ಯಕ್ಕೆ ಮೆರಗನ್ನು ತುಂಬಿವೆ. ಒಟ್ಟಿನಲ್ಲಿ ಜನಪದ ವೀರಕಾವ್ಯ ಪರಿಯಾಪಟ್ಟಣದ ಕಾಳಗವು ಒಂದು ಮಾಹತ್ವದ ಕೃತಿಯಾಗಿ ಪರಿಣಮಿಸಿದೆ.

ಭಾರತ ಸ್ವಾತಂತ್ರ್ಯದ ಪೂರ್ವದಲ್ಲಿ ಕನ್ನಡ ಜನಪದ ಗೀತಕಾರರು ಲಾವಣಿ ಹಾಗೂ ಗೀಗೀ ಪದಗಳನ್ನು ರಚಿಸಿ, ಹಾಡಿ ವೀರತನದ ಜನಜಾಗ್ರತಿಯನ್ನು ಮಾಡಿದುದು ಐತಿಹಾಸಿಕ ದಾಖಲೆಗಳಾಗವೆ.

ಲಾವಣಿ ಸಂಪೂರ್ಣವಾಗಿ ಜಾನಪದಕ್ಕೆ ಸೇರಿಯಾಗಿದೆ. ಲಾವಣಿಯ ಮಾದರಿಯ ಕಿರುಗೀತೆಗಳನ್ನು ಕಥನಗೀತೆಗಳನ್ನು ಜನಪದರು ರಚಿಸಿ ಮೇಳ ಕೂಡಿಕೊಂಡು ಗೀಗೀ ಸ್ವರ ಮೇಳದಿಂದ ಗೀಗೀ ಗೀತೆಗಳನ್ನು ನೂರಾರು ವರಷಗಳ ಹಿಂದೆ ಸರು ಮಾಡಿದ್ದಾರೆ. ಲಾವಣಿಗಳನ್ನೂ ಗೀಗೀ ಧಾಟಿಯಲ್ಲಿ ಹಾಡುತ್ತಾರೆ. ಉತ್ತರ ಕರ್ನಾಟಕದಲ್ಲಿ ಬೆಳಗಾವಿ ಜಿಲ್ಲೆಯ ಹುಲಕುಂದ ಗ್ರಾಮದ ಶಿವಲಿಂಗ ಸ್ವಾಮಿ ಪಟ್ಟದೇವರು ಅರ್ಧಶತಮಾನದ ವರೆಗೆ (೧೮೯೦-೧೯೫೫) ರಾಷ್ಟ್ರೀಯ ಗೀತೆಗಳನ್ನು ರಚಿಸಿ, ಹಾಡುಗಾರರಿಗೆ ಶಿಷ್ಯತ್ವನೀಡಿ ಜನಜಾಗ್ರತಿ ಮಾಡಿದರು ಬರಬರುತ್ತ ಗೀಗೀ ಮೇಳಗಳ ತಂಡುಗಳೇ ಸುರುವಾಗಿ ರಾಷ್ಟ್ರೀಯ ಜಾಗೃತಿಯ ಕಾರ್ಯ ಮಾಡಿದಧು. ಕವಿ ರವಿಯಂತ ಶಿವಲಿಂಗನೆಂದು ಕೀರ್ತಿಗೆ ಅರ್ಹನಾದನು ಸ್ತುತಿ ಪದಗಳು, ಭಾರತ ಮಾತಾ, ಮಹಾತ್ಮ ಗಾಧೀಜಿ ಶೂರ ಸುಭಾಸಚಂದ್ರಭೋಸ, ಭಾರತ ಸ್ವಾತಂತ್ರ್ಯದ ಪದ, ಕರ್ನಾಟಕದ ಏಕೀಕರಣ ದೇಶಭಕ್ತರ ಪದೆ ಹೀಗೆ ಸಹಸ್ರ ಪದಗಳನ್ನು ರಚಿಸಿರುವುದಾಗಿ ಅವನ ಶಿಷ್ಯರು ತಿಳಿಸುತ್ತಿದ್ದಾರೆ.

## ಸುಭಾಷ ಚಂದ್ರ ಬೋಸರ ಪದ

ಲೋಕಮಾನ್ಯ ಸುಭಾಷರ ಚರಿತ್ರೆಯನಾ ಹೇಳುವೆ ಸಂಪೂರ್ಣ॥
ಬ್ರಿಟಿಷರೆಂಬುದು ಆನೆಗಳ ಮೆಟ್ಟಲಿಕ್ಕೆ ಸಿಂಹ ಆಗಿ
ಹುಟ್ಟಿ ಬಂದ ಪೃಥ್ವಿಯೊಳು ಸರದಾರಾ।
ಇವರ ದೃಷ್ಟಿಯಿಂದ ರಾಷ್ಟ್ರ ಆತ ಉದ್ಧಾರ
ನರಶ್ರೇಷ್ಠನಾಗಿ ಮೆರೆದ ಗುಣ ಗಂಭೀರಾ
..............................................................
ಕ್ರೂರ ಚೋರರನ್ನು ನಾಶ ಮಾಡುವಗೋಸ್ಕರ
ಈ ಧರಣಿಯೊಳು ಜಯಸಿಬಂದ ಜಯವೀರ

(ನಿಂಗಣ್ಣ ಸಣ್ಣಕ್ಕಿ ಸಂಗ್ರಹದಿಂದ)

ಸುಭಾಷಚಂದ್ರ ಭೋಸ –ಎ ಪದದಲ್ಲಿ ವೀರತನವನ್ನು ಕೇಳಬೇಕು ದುಷ್ಟಗುಣದ ಬ್ರಟಿಷರನ್ನು ಬಿಟ್ಟ ಇನ್ನು ಫಲ ಇಲ್ಲ

ಕಾಲಕಟ್ಟಿ ಕುಟ್ಟಿ ಅಟ್ಟ ಬೇಕ ಇಂಗ್ಲಂಡಕ
..............................................................
ಬುದ್ಧಿಗೇಡಿ ಬ್ರಿಟಿಷರನ್ನು ಗುದ್ದಿಕೊಂತ ಬಿದ್ದರಕ್ತ
ಹದ್ದು ನಾಯಿ ನರಿಗಳಿಗೆ ನೀಡಾಕ
ರಣವಾದ್ಯ ಹೊಡೆದ ಯುದ್ಧವನ್ನು ಮಾಡಾಕಾ

ಭಾರತ ರಾಷ್ಟ್ರೀಯ ಚಳವಳಿ ೧೮೮೫ ರಿಂದ ೧೯೪೭ ರವರೆಗೆ ಅವಧಿಯಲ್ಲಿ ರಚನೆಗೊಂಡ ವೀರಗೀತೆಗಳು ವೀರರನ್ನು ಭಾರತವನ್ನೂ ಸ್ವಾತಂತ್ರ್ಯವನ್ನು ಕುರಿತಾಗಿ ಇವೆ. ಇನ್ನೂ ಸಂಗ್ರವಾಗಬೇಕಾದ ಕಾರ್ಯಗಳು ನಡೆಯಬೇಕಾಗಿದೆ. ಸ್ವಧರ್ಮಾಬಿಮಾನವನ್ನು ಹೆಚ್ಚಿಸಿಕೊಳ್ಳುವ ಗೀತೆಗಳಲ್ಲಿ ವೀರರ ವೀರವನಿತೆಯರ ಉಪಮೆ–ಉಪಮಾನಗಳು ತುಂಬಿ ಹರಿದಿವೆ. ಭಾರತ ಸ್ವಾತಂತ್ರ್ಯಕ್ಕಾಗಿ ಮಡಿದವರ ಸ್ಮರಣೆಗೊಂಡ ಗೀತೆಗಳೂ ಇವೆ.

ಕರ್ನಾಟಕ ರಂಗಭೂಮಿ ಬೆಳೆದುದು, ಜಾನಪದ ರಂಗಭೂಮಿಯಿಂದ ಎಂಬುದು ಸುಸ್ಪಷ್ಟವಾದ ಸಾಕ್ಷಿಗಳುಂಟು. ಕರ್ನಾಟಕ ರಂಗಭೂಮಿಯ ವಿಚಾರವಾಗಿ ಬರೆಯುವವರೆಲ್ಲರು ಜಾನಪದ ರಂಗಭೂಮಿಯ ವಿಚಾರವನ್ನು ತಿಳಿಸುತ್ತಾರೆ. ಜಾನಪದವೇ ಮೂಲವೆಂಬದನ್ನು ರುಜುವಾತು ಪಡಿಸಿದ್ದಾರೆ. ಇವುಗಳು ಕವಲಾಗಿ ಯಕ್ಷಗಾನ ದೊಡ್ಡಾಟ ಸಣ್ಣಾಟಗಳಾಗಿ ವರ್ಗೀಕೃತವಾಗಿವೆ. ಯುದ್ಧದ ಪ್ರಸಂಗಗಳಲೆಲ್ಲ ವೀರಗೀತೆಗಳ ನಿರೂಪಣೆ ಸಾಗಿಹೋಗುತ್ತದೆ. ಇವುಗಳನ್ನೆಲ್ಲ ಜನಪದ ವೀರರಂಗಗೀತೆಗಳು ಎಂದೂ ಕರೆಯಬಹುದು.

ಯಕ್ಷಗಾನ ಸಾಹಿತ್ಯದಲ್ಲಿ ವಿಶೇಷವಾಗಿ ಯಕ್ಷಗಾನಕ್ಕೆ ರಂಗೇರಿಕೆ (ಆಟ ತುಂಬುವುದು) ವೀರ ಗೀತೆ ಮತ್ತು ಕುಣಿತಳಿಂದ ಎಂಬುದು ಸ್ಪಷ್ಟವಾಗಿದೆ ಬೆಡಗು ತಿಟ್ಟಿನ ಯಕ್ಷಗಾನ ವಿರಲಿ ತೆಂಕು ಟಿಟ್ಟಿನ ಯಕ್ಷಗಾನ ವಿರಲಿ ಎರಡೂ ಪದ್ಧತಿಗಳಲ್ಲಿ ವೀರಗೀತೆಗಳ ಪರಿಕಲ್ಪನೆಯು ಸಾಗುತ್ತಲೇ ಇದೆ

## ಜನಪದ ಮಹಾಕಾವ್ಯಗಳು

ಕರ್ನಾಟಿಕದಲ್ಲಿ ಜಾನಪದ ಅಧ್ಯಯನ ಸುರುವಾಗಿ ಒಂದು ಶತಕಮೀರುತ್ತ ಬಂದಿದೆ. ಮೊದ ಮೊದಲು ಸಂಗ್ರಹಕಾರ್ಯ ತಲೆ ಎತ್ತಿ ಸಂಶೋಧನೆ ಮೈದುಂಬಿ ವಿವಿಧ ಜನಪದ ರೂಪ ಸ್ವರೂಪಗಳು ಗೊತ್ತಾಗಿ ಮಹಾಕಾವ್ಯಗಳ ಸಂಗ್ರಹ ಸಂಶೋಧನೆ ಕಾಲ ಪಕ್ವಗೊಂಡು ಪ್ರಕಟವಾಗುತ್ತಿವೆ. ಮಲೆಯ ಮಹಾದೇಶ್ವರ ಮಂಟೇಸ್ವಾಮಿ ಜುಂಜಪ್ಪ, ಮೈಲಾರಲಿಂಗ, ಹಾಲು ಮತಮಹಾಕಾವ್ಯ ಇತ್ಯಾದಿಗಳು ನಮ್ಮೆದುರು ಇವೆ. ಪುಸ್ತಕರೂಪದಲ್ಲಿ ಪ್ರಕಟನೆಗೊಂಡು ಓದುಗರ ಕೈಮೇಲಿವೆ. ಕನ್ನಡ ವಿ.ವಿ. ಹಂಪಿಯಲ್ಲಿ ಜನಪದ ಮಹಾಕಾವ್ಯಗಳ ಬಗ್ಗೆ ಅಧ್ಯಯನವೇ ನಡೆದ ಸುದ್ದಿ ದಟ್ಟವಾಗಿ ಹಬ್ಬಿದೆ. ಕರ್ನಾಟಕ ೧೯೯೭ರಲ್ಲಿ ನಡೆಯಿತು. ದಕ್ಷಿಣ ಕನ್ನಡ ಜಿಲ್ಲೆಯ ಕೋಟಿ ಚೆನ್ನಯ ಧಾರ್ಮಿಕ ಸಂಪ್ರದಾಯ ಹಾಗೂ ಮಹಾಕಾವ್ಯದ ಬಗೆಗೆ ವಾಮನ ನೆಂದಾವನರ ಪಿ.ಎಚ್.ಡಿ. ಮಹಾಪ್ರಬಂದ ರಚಿಸಿರುವುದು ತಿಳಿದು ಬಂದಿದೆ.

ಈ ಎಲ್ಲ ಜನಪದ ಮಹಾಕಾವ್ಯಗಳಲ್ಲಿ ಮೈಗೂಡಿಕೊಂಡಿರುವ ವೀರ ವೃತ್ತಾಂತಗಳು ವೀರಗೀತೆಗಳಾಗಿ ಹೊರಬಂದಿರುವುದು ಮತ್ತೊಂದು ಪ್ರಬಂಧವಾಗುವಷ್ಟಿದೆ. ಇವುಗಳ ಅಧ್ಯಯನವನ್ನು ಪ್ರತ್ಯೇಕವಾಗಿ ತೋರಿಸಬೇಕು. ಮಹಾಕಾವ್ಯಗಳಲ್ಲಿರುವ ಕಥಾನಾಯಕರು ತಮ್ಮ ವೀರಶ್ರೀಯನ್ನು ಮೆರೆದು ಮಹತ್ವ ಪಡೆದಿರುವರು, ಎಂಬುದನ್ನು ಗಮನಿಸಬೇಕಾಗುತ್ತದೆ. ಪುಟಗಳ ಪರಿಮಿತಿಯಿಂದ ಜನಪದ ಮಹಾಕಾವ್ಯಗಳಲ್ಲಿ ಬರುವ ವೀರಗೀತೆಗಳನ್ನಿಲ್ಲಿ ಕೊಡಲಾಗಿಲ್ಲ.

ಕನ್ನಡ ಜನಪದ ಗೀತ ಪ್ರಕಾರಗಳು ಹಲವಾರು, ಈ ಹಲವಾರು ಗೀತ ಪ್ರಕಾರಗಳು ಹಲವಾರು. ಈ ಹಲವಾರು ಗೀತ ಪ್ರಕಾರಗಳಲ್ಲಿ ವೀರಗೀತೆಗಳು ಅಧಿಕವಾಗಿವೆ. ಅಂದಿನ ಕಲ್ಪನೆಗೊಂಡ ವೀರಗೀತೆಗಳು, ಇಂದಿನ ಪರಿಕಲ್ಪನೆಗೆ ಹೆಚ್ಚು ಹೆಚ್ಚು ಮೆರಗನ್ನುಂಟು ಮಾಡುತ್ತಿವೆ. ಕನ್ನಡ ಜನಪದ ಗೀತ ಸಾಹಿತ್ಯವು ಹುಲಸಾಗಿ ಬೆಳೆಯುತ್ತಿದ್ದಂತೆ ವೀರ ಗೀತೆಗಳು ಬೆಳೆಯುತ್ತಲೇ ಇವೆ. ಜನಪದದಿಂದ ನಿಜ ಇತಿಹಾಸ ದೊರಕುತ್ತಲೇ ಇದೆ.

## ಉಪಸಂಹಾರ

ಕನ್ನಡ ಜನಪದ ಗೀತ ಪ್ರಕಾರಗಳು ಹಲವಾರು ಲೆಕ್ಕ ಹಾಕಿದಷ್ಟು ಬೆಳೆಯುತ್ತಿವೆ. ಮತ್ತು ಹಬ್ಬುತ್ತಿವೆ. ಈ ಹಲವಾರು ಗೀತ ಪ್ರಕಾರಗಳಲ್ಲಿ ವೀರಗೀತೆಗಳು ಅಧಿಕವಾಗಿವೆ.

ಬೇರೆ ಬೇರೆ ಸ್ಥಳಗಳಲ್ಲಿ ವೀರಗೀತೆಗಳು ವೀರ ಪರಂಪರೆಯನ್ನೊಳಗೊಂಡು ರಚಿತವಾಗಿವೆ. ಆದರೆ ಅವುಗಳಿಗೆಲ್ಲ ವೀರ ಸಂಸ್ಕೃತಿ ತಾಯಿ ಬೇರಾಗಿ ತೋರುತ್ತಿದೆ.

ವೀರರ ವಿರೋಚಿತ ಕಾರ್ಯಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೇಳದವರಲ್ಲ, ಆದರೆ ಅವರ ವೀರ ಅಭಿಮಾನ ಮತ್ತು ವೀರ ಪರಂಪರಾಗತವಾದ ಸಂಸ್ಕೃತಿ ರೂಪಗೊಂಡುದುದು ನಮಗೆ ಸ್ಪಷ್ಟವಾಗುತ್ತಿದೆ.

ಚಿತ್ರದುರ್ಗದ ಪಾಳೆಯಗಾರು ಕನ್ನಡನಾಡಿನ ಮೂಲೆಗಾದರೆ, ಹಲಗಲಿಯ ಬೇಡರ ಪಡೆ ಮತ್ತೊಂದೆಡೆಗೆ ಕನ್ನಡದ ಮೂಲೆಯಲ್ಲಿ ಕಾಣುತ್ತೇವೆ. ಒಬ್ಬರದು ಮತ್ತೊಬ್ಬರು ಕೇಳಿರಲಿಕ್ಕಿಲ್ಲ, ಆದರೆ ತಮ್ಮ ಅಭಿಮಾನಕ್ಕೆ ನೆಲಕ್ಕೆ ಅನ್ಯಾಯವಾದಾಗ ಸಿಡಿದೆದ್ದ ವೀರತನವನ್ನು ತೋರಿದ್ದಾರೆ. ಅವರ ಈ ವಾಸ್ತವಿಕತೆಯನ್ನು ಜನಪದರ ಹಾಡಿ ಹರಿಸಿದ್ದಾರೆ.

ಅಂದಿನ ಅವರ ಪರಿಕಲ್ಪನೆ, ವೀರ ಪರಿಕಲ್ಪನೆಯೇ ಆಗಿತ್ತು ಎಂಬುದು ಈಗಲೂ ಸ್ಪಷ್ಟವಾಗಿ ತೋರುತ್ತದೆ.

ಕನ್ನಡ ಜನಪದ ಗೀತಿ ಸಾಹಿತ್ಯವೂ ಹುಲುಸಾಗಿ ಬೆಳೆಯುತ್ತಿದ್ದಂತೆ ವೀರಗೀತೆಗಳು ಬೆಳೆದು ಬಂದಿವೆ. ವೀರಪ್ಪ ವೀರಪರಂಪರೆ, ವೀರಸಂಸ್ಕೃತಿ ಜನಪದ ಗೀತಗಳಿಂದ ನಿಜ ಇತಿಹಾಸ ನಮಗೆ ದೊರಕತ್ತಲೇ ಇದೆ.

ಒಟ್ಟಾರೆ ಜನಪದ ವೀರ ಗೀತಗಳು ಮತ್ತು ವೀರಗಿತ ಸಾಹಿತ್ದ ಪರಿಕಲ್ಪನೆ ಒಂದು ಮಹಾ ಪ್ರಬಂಧ ರಚನೆಯಾಗುವಷ್ಟು ಬೆಳೆದು ನಿಂತಿದೆ.

ಕನ್ನಡ ಜಾನಪದವು ಒಂದು ಘಟ್ಟವನ್ನು ಈ ಎರಡು ಸಾವಿರ ವರುಷ ಮುಗಿಯುವುದರೊಳಗಾಗಿ ಘಟ್ಟಿಯಾಗಿ ತೋರ್ಪಡಿಸುವುದು.

○

# ಜಾನಪದದಲ್ಲಿ ಮಹಾದೇವ ಮೈಲಾರ ಮತ್ತು ರಾಮಾನಂದ ತೀರ್ಥರು

ಜನಪದ ಸಂಸ್ಕತಿ ಸಿದ್ಧಾಂತ folk cultural theroy ವು ವ್ಯಕ್ತಿಗಳ ವಸ್ತುನಿಷ್ಠ ಚರಿತ್ರೆಯನ್ನು ಬಯಲಿಗೆಳೆಯುವುದನ್ನು ಕಾಣುತ್ತೇವೆ. ಇಲ್ಲಿ ಈ ಶತಮಾನದ ಭಾರತವನ್ನು ಚಿತ್ರಿಸುವ ಗಣ್ಯ ವ್ಯಕ್ತಿಗಳನ್ನು ಪರಿಚಯಿಸುವ ಸಮಗ್ರ ಜನಪದವನ್ನು ತಿಳಿದುಕೊಳ್ಳುವ ಸಾಹಸಕ್ಕೆ ಇಳಿಯಲಾಗಿದೆ.

ಭಾರತದ ಸ್ವಾತಂತ್ರ್ಯ ದೊರಕಿಸಿಕೊಳ್ಳುವಾಗ ಜನಪದ ಸಂಸ್ಕೃತಿಯು ಅದರಲ್ಲೂ ವೀರತನದ ಸಂಸ್ಕತಿಯನ್ನು ಇಡೀ ಭಾರತದಲ್ಲಿ ನಾವು ಕಾಣುತ್ತಿದ್ದೇವೆ. ಮಹಾತ್ಮಾ ಗಾಂಧೀಜಿಯವರ ಮಹದಾದ ವ್ಯಕ್ತಿತ್ವದ ಪ್ರಭಾವ ಭಾರತದ ಜನತೆಯ ಮೇಲಾಯಿತು. ಇಂಗ್ರೇಜಿಯವರನ್ನು ಭಾರತದಿಂದ ಹೊರಹಾಕಲು ಕೋಟಿ ಕೋಟಿ ಜನತೆಯು ಒಕ್ಕೊರಲಿನಿಂದ ಕೂಗಿತು. ಮಾಡು ಇಲ್ಲವೆ ಮಡಿ ಎಂಬ ಮಹಾತ್ಮ ಗಾಂಧೀಜಿಯವರ ವಾಣಿ ಜನಪದ ಮಂತ್ರವಾಗಿ ಪರಿಣಮಿಸಿತು. ಲಕ್ಷೋಪಲಕ್ಷ ಜನತೆಯು ತ್ಯಾಗ-ಬಲಿದಾನಗಳಿಗೆ ಸಜ್ಜಾಗಿ ಮಡಿದರು. ತಾವು ಜೀವಂತವಿಲ್ಲದಿದ್ದರೂ ವೀರ ಸ್ವರ್ಗದಲ್ಲಿ ಭಾರತದ ಸ್ವಾತಂತ್ರ್ಯಲವನ್ನು ಕಂಡಿರಬಹುದು.

ಇಂತಹ ಜನಪದ ಪರಿಸರದಲ್ಲಿ ಕರ್ನಾಟಕದ ಕೊಡುಗೆ ಅಪಾರವಾದುದು. ಭಾರತೀಯರು ಸ್ವರಾಜ್ಯವನ್ನು ದೊರಕಿಸುವುದು ಕಣಸಿನ ಗಂಟು ಎಂದು ನಂಬಿರುವ ಆಂಗ್ಲರು ಜನಪದರ ವೀರ ಸಂಸ್ಕೃತಿಗೆ ಮಣಿದರು. ಭಾರತೀಯರನ್ನು ಒಡೆಯುವ ಕೆಲಸವಿಟ್ಟ ವೀರ ಸಂಸ್ಕೃತಿಗೆ ಮಣಿದರು. ಭಾರತೀಯರನ್ನು ಒಡೆಯುವ ಕೆಲಸಬಿಟ್ಟರು. ಭಾರತದಲ್ಲಿ ಒಗ್ಗಟ್ಟನ್ನು ತರುವ ಕಾರ್ಯ ಎಲ್ಲೆಡೆ ೧೮೮೫ ರಿಂದ ಶುರುವಾಯಿತು. ಆ ಕಾರ್ಯಕ್ಕೆ ಮೊದಲೇ ಬೆಳ್ಳಿ ಚುಕ್ಕಿಗಳು ಮೂಡಿನಿಂತು ಸ್ವಾತಂತ್ರ್ಯದ ಸೂರ್ಯನ ಸೂಚನೆಯನ್ನು ನೀಡಿಯಾಗಿತ್ತು. ಒಂದು ದಿಕ್ಕಿನಲ್ಲಿ ಆಧ್ಯಾತ್ಮ ಇನ್ನೊಂದು ನಿಟ್ಟಿನಲ್ಲಿ ಭಾರತೀಯರ ಶೂರತ್ವ ಬ್ರಿಟಿಷರನ್ನು ಹೊರಹಾಕಲು ವಿಧ ವಿಧ ಕಾರ್ಯಕ್ರಮಗಳು ಪಾಂಚಜನ್ಯಗಳಿಂದ ಶುರುವಾದವು. ಈ ಪಾಂಚಜನ್ಯಗಳ ಕಾರ್ಯಕ್ರಮಗಳು ೧೫-೮-೧೯೪೭ರಂದು ಭಾರತಕ್ಕೆ ಸ್ವಾತಂತ್ರ್ಯಗಳಿಸಿ ಕೊಟ್ಟವು.

ಎಲ್ಲೆಲ್ಲಿ ಯಾವ ಯಾವ ಕಾರ್ಯಕ್ರಮಗಳು ಜರುಗಿದವು ಎಂಬುದನ್ನು ಅಧ್ಯನದ ಮೂಲಕ ತಿಳಿಯುತ್ತಿದ್ದೇವೆ. ಅಧ್ಯಯನ ಇನ್ನೂ ಪೂರ್ಣವಾಗಿಲ್ಲ. ಪೂರ್ಣವಾಗಲು ಅಲ್ಲಲ್ಲಿ ನಿರ್ಮಿತವಾಗಿರುವ ಜಾನಪದ ಸಾಹಿತ್ಯವನ್ನು ಅರಿಯುವುದು ಅವಶ್ಯವಿದೆ. ಆಗ ಸಮಗ್ರ ರಾಷ್ಟ್ರೀಯ ಚಳವಳಿಯನ್ನು ಅರಿತಂತಾಗುವುದು. ಮತ್ತು ಹೊಸ ಇತಿಹಾಸವನ್ನು ನಿರ್ಮಿಸಲು ಶಕ್ಯವಾಗುವುದು. ಈ ದೃಷ್ಟಿಯಿಂದ ಪ್ರೊ. ಜಿ. ಎಸ್. ಹಾಲಪ್ಪ ಅವರ 'ಹಿಸ್ಟರಿ ಆಫ್ ಫ್ರೀಡಂ ಮೂವ್ಮೆಂಟ್' ಇನ್ ಕರ್ನಾಟಕ ಕೃತಿಯು ಎಲ್ಲೆಡೆ ಚೇತನವನ್ನು ನೀಡಿಯಾಗಿದೆ. ಈ ಕೃತಿಯಲ್ಲಿ ಇಂಗ್ಲಿಷರ ವಿರುದ್ಧ ಜನಪದ ಪ್ರಕಾರವಾದ ದೇಶದ ಉನ್ನತಿಗಾಗಿ ರಚನೆಯಾದ ಲಾವಣಿಗಳನ್ನು ಅಸಹಕಾರದ ಲಾವಣಿಗಳನ್ನು ಬಂದು ಮಾಡಲು ಪ್ರಯತ್ನಿಸಿತು ಎಂಬುದನ್ನು ತಿಳಿಯಬಹುದು. ಜನಪದ ಸಂಸ್ಕೃತಿಯ ಸಿದ್ಧಾಂತದ ಪ್ರಕಾರ ಪ್ರಸ್ತುತ ಇಬ್ಬರು ಮಹನೀಯರ ಜೀವನ ಚರಿತ್ರೆಗಳನ್ನು ರಾಷ್ಟ್ರೀ ಬದುಕಗಳನ್ನು ಇಲ್ಲಿ ಕಾಣಬೇಕಾಗಿದೆ. ಅವರೇ ಮಹಾದೇವ ಮೈಲಾರ ಮತ್ತು ಸ್ವಾಮಿ ರಮಾನಂದ ತೀರ್ಥರು

## ಮಹಾದೇವ ಮೈಲಾರ

ಮಹಾದೇವ ಮೈಲಾರ ಅಥವಾ ಮೈಲಾರ ಮಹಾದೇವ ಎಂಬ ಹೆಸರು ರಾಷ್ಟ್ರೀಯ ಚಳುವಳಿಯಲ್ಲಿ ಅಮರವಾದುದು. ಇವರು ಭಾರತದ ಸ್ವಾತಂತ್ರ್ಯಕ್ಕಾಗಿ ಮಾಡಿ ಮಡಿದ ಮಹನೀಯರಾಗಿದ್ದಾರೆ. ಮಹಾತ್ಮಾ ಗಾಂಧೀಜಿಯವರೇ ಮಹಾದೇವನನ್ನ ಶಿಷ್ಯ ಎಂದು ಪದೇ ಪದೇ ಹೇಳಿದರು ಮತ್ತು ತಮ್ಮ ಜೀವನ ಚರಿತ್ರೆಯಲ್ಲಿ ಬರೆದರು. ಇಂತಹ ಮಾಡಿ ಮಡಿದ ಮೈಲಾರ ಮಹಾದವನ ಬಗೆಗೆ ಜಾನಪದದಲ್ಲಿ, ಜಾನಪದ ಕಣ್ಣಲ್ಲಿ ಏನೇನಿದೆಯೋ ತಿಳಿಯುವ ಪ್ರಯತ್ನ ಮಾಡೋಣ.

ಪ್ರೊ|| ವೀ.ಚಿ. ಹಿತ್ತಲಮನಿಯವರು ಮೋಹಾದೇವಪ್ಪ ಮೈಲಾರ ಅವರ ಜೀವನ -ಬಾಳು ಬದುಕು ಕುರಿತು ಅಮರ ಬಲಿದಾನಿ ದಾಂಡೀ ಸತ್ಯಾಗ್ರಹೀ, ಚಲೇಜಾವ್ ಚಳವಳಿಯ ಹುತಾತ್ಮ ಮಾಜಿ ಮಡಿದ ಮೈಲಾರ ಮಹಾದೇವ, ಮಹಾದೇವ ಮೋಟೆ ಬೆನ್ನೂರು, ಮೈಲಾರ ಮಹಾದೇವ ನನ್ನ ಶಿಷ್ಯ ಮುಂತಾದ ಸಾಹಿತ್ಯ ಕೃತಿಗಳನ್ನು ರಚಿಸಿ ಮಾರ್ಗ ಸಾಹಿತ್ಯ ಚರಿತ್ರೆಯಲ್ಲಿ ಅವರನ್ನು ಅಮರರನ್ನಾಗಿರಿಸಿದ್ದಾರೆ.

ಹುತಾತ್ಮರಾದ ಮೈಲಾರ ಮಹಾದೇವಪ್ಪನವರ ಬಗೆಗೆ ಲಾವಣಿ ರಚನೆಯಲ್ಲಿ ಅವರ ರಾಷ್ಟ್ರೀಯ ಬದುಕನ್ನು ಕಾಣುತ್ತೇವೆ. ಹಾಗೇ ಜನಪದ ಬಿಡಿ ಗೀತೆಗಳಲ್ಲೂ ಅವರ ಬದುಕಿನ ಮಿಂಚುಗಳು ತೋರುತ್ತವೆ.

ಸ್ವಾತಂತ್ರ್ಯ ವೀರ ಮಹಾದೇವಪ್ಪ ಮೈಲಾರ (೧೯೧೩–೧೯೪೩) ಅವರು ಒಟ್ಟು ಬದುಕು ಮೂವತ್ತು ವರ್ಷ ಎಂಬುದನ್ನು ಸ್ಪಷ್ಟವಾಗಿ ತಿಳಿಯುತ್ತೇವೆ. ಭಾರತದಲ್ಲಿ ವೀರರ ಮಹಾತ್ಮರ ಬದುಕುಗಳು ನಡೆದಂತೆಯೇ ಇವರ ಬದುಕು ಸಾಗಿ ಹೋಗಿದೆ.

ಇಲ್ಲಿ ಗರತಿಯೋರ್ವಳು ನೀಡಿದ ಹೃದಯಗೀತೆಯನ್ನ ಭೂಮಿ ತೂಕದ ಮೈಲಾರ ಎಂಬುದಾಗಿ ಕಾಣುತ್ತೇವೆ.

ಇಂಗ್ರೇಜಿಯರನ್ ಹೊಡೆಯುವುದಕ ಯಾರ್‍ಯಾರಬೇಕ
ಭೂಮಿ ತೂಕದ ಮೈಲಾರ। ಇರುವಾಗ
ನಾವ್ಯಾಕ ಚಿಂತಿ ಮಾಡಬೇಕ॥

ಕನ್ನಡ ಗರತಿ ಗಂಗವ್ವ ಹೇಳುವ ಮಾತಿನ ಭೂಮಿ ತೂಕದ ಮೈಲಾರ ಎಂಬ ಜನಪದ ದೃಷ್ಟಾಂತವನ್ನು ತಿಳಿದರೆ ಶಕ್ತಿ ಮತ್ತು ಸ್ಪಷ್ಟತೆಯ ಅರ್ಥ ನಮಗಾಗದೇ ಇರದು!

ಮೈಲಾರ ಮಹಾದೇವ ಅವರು ಭಾರತ ರಾಷ್ಟ್ರೀಯ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಪ್ರಭಾವ ಇನ್ನಿತರರ ಮೇಲಾಗಿತ್ತು ಎಂಬುದರ ಬಗೆಗೆ ತ್ರಿಪದಿಯೊಂದು ಸ್ಪಷ್ಟಪಡಿಸುತ್ತದೆ. ಅವರು ಖಾದಿ ಧರಿಸುತ್ತಿದ್ದರು. ಈ ಖಾದಿ ಭಾರತೀಯರಿಗೆ ಸುಖದ ಹಾದಿಯಾಗಿತ್ತು.

ಪದ

ಖಾದಿಯ ಉಟ್ಟಾರ ಖಾದಿಯ ತೊಟ್ಟಾರ
ಖಾದಿಯಿಂದ ದಾರಿ ತೋರ್‍ಯಾರ ಮೈಲಾರ ಮಹಾದೇವ
ಖಾದಿಯ ಸಂದೇಶ ನೀಡ್ಯಾರ॥

ಹತ್ತಿಯನ್ನು ಹಿಂಜಿ ಕೈಯಿಂದ ಬಿಂಗರಿ (ತಕಲಿ) ತಿರುಗಿಸಿ, ನೂಲನ್ನು ತೆಗೆದು ಸ್ವತಃ ನೆಯಿಗೆ ಮಾಡುವ ಕಾರ್ಯವನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡುತ್ತಿದ್ದ ಇತಿಹಾಸ ನಮ್ಮ ಕಣ್ಮುಂದೆ ಇದೆ. ಈ ಉದ್ಯೋಗವನ್ನು ಮಾಡುವ ಕುಟುಂಬದವರಿಗೆ ಜಾಡರು ಎಂದು ಕರೆಯಲಾಗಿದೆ

ಯಂತ್ರಗಳನ್ನು ಉಪಯೋಗಿಸದೆ ಕೈಯಿಂದ ಹತ್ತಿ ಹಿಂಜಿ ತಕಲಿ ಅಥವಾ ಚರಖಾಗಳಿಂದ ನೂಲು ಮಾಡಿಕೊಂಡು ಕೈಮಗ್ಗಗಳಿಗೆ ಹಾಕಿ ತಯಾರಿಸಿದ ಬಟ್ಟೆ ಖಾದಿ' ಎಂದು ಹೆಸರು. ಮೊದಲು ಇದಕ್ಕೆ ಕೊಡೆಯ ಅರಿವೆ ಎಂತಲೂ, ಚೊಣ್ಣದ ಅರಿವೆಯಂತಲೂ ಭಾರತದ ಬೇರೆ ಬೇರೆ ಭಾಗಗಳಲ್ಲಿ ಕರೆಯಲಾಗುತ್ತಿತ್ತು, ಕೈ ನೂಲಿನ ಬಟ್ಟೆಗೆ ಗುಜರಾತಿ ಭಾಷೆಯಲ್ಲಿ ಖಾದಿ' ಎಂದು ಹೇಳುತ್ತಿದ್ದರಿಂದಲೂ ಹಾಗೂ ಅಲ್ಲಿನವರೇ ಆದ ಗಾಂಧೀಜಿಯವರಿಂದಾಗಿ ಎಲ್ಲ ಕಡೆಗೆ ಖಾದಿ ಎಂದೂ ಕರೆಯುವ ರೂಢಿ ಪ್ರಾರಂಭವಾಯಿತು?

ಖಾದಿ ಸುಖದ ಹಾದಿ ಎಂಬ ಮಂತ್ರವನ್ನು ಹಳ್ಳಿ ಹಳ್ಳಿಗಳಲ್ಲಿ ಮಹಾದೇವಪ್ಪನವರು ಪ್ರಚಾರ ಮಾಡುತ್ತಿದ್ದರೆಂಬುದನ್ನು ಅವರ ಸಮಕಾಲೀನರಾದ ಈಗಲೂ ಜೀವಂತವಾಗಿರುವ

ಗೊಂದಲಿ ಸಮಾಜದ ಗುಳೇದಗುಡ್ಡದ ಸಾಯಬಣ್ಣ (ಸಾಬಣ್ಣ) ಸಿಂಧೆಯವರು ನನಗೆ ಅವರ ಸಂದರ್ಶನ ಕಾಲದಲ್ಲಿ ತಿಳಿಸಿದ್ದುಂಟು ಶ್ರೀ ಸಾಯಬಣ್ಣ ಸಿಂಧೆಯವರು ಸ್ವಾತಂತ್ರ್ಯ ಹೋರಾಟಗಾರರದು ಒಂದೊಂದು ರೀತಿಯಾದ ಸಾಹಸಮಯವಾದ ಬದುಕು ಕಣ್ಣಿಗೆ ಕಟ್ಟುವಂತಿದೆ. ಆದರೆ ನಕಲಿ ಸ್ವಾತಂತ್ರ್ಯಯೋಧರು ಸರಕಾರಿ ಹಣ ಕಬಳಿಸಲು ಅನುಕೂಲತೆಗಳನ್ನು ಪಡೆಯಲು ಹುಟ್ಟಿದರೆಂಬ ದುಃಖವನ್ನೂ ಶ್ರೀ ಸಿಂಧೆಯವರು ವ್ಯಕ್ತ ಪಡಿಸಿದ್ದಾರೆ. ಮಹಾದೇವ ಮೈಲಾರ ಅವರ ಕಾರ್ಯ ಚಟುವಟಿಕೆಗಳನ್ನು ಅವರ ರಾಷ್ಟ್ರೀಯ ಮನಸ್ಸನ್ನು ಮನಮುಟ್ಟುವಂತೆ ತಿಳಿಸಿದ್ದಾರೆ. ಶ್ರೀ ಮೈಲಾರ ಮಹಾದೇವಪ್ಪನನ್ನು ಶ್ರೀ ಸಿಂಧೆ ಅವರು ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ಪ್ರತ್ಯಕ್ಷ ಕಂಡಿದ್ದರು. ಕೂಡಿ ಕೆಲಸಗಳನ್ನು ಮಾಡಿದ್ದರು. ಮಹಾತ್ಮಾ ಗಾಂಧೀಜಿಯರನ್ನು ಸಾಕ್ಷಾತ ದೇವರ ಅವತಾರವೆಂದೇ ಭಾವಿಸಿ ನಡೆದವರು.[೧]

ರಾಷ್ಟ್ರಬಂಧು ಎಂದು ಕರೆಯಿಸಿಕೊಂಡ ಮೈಲಾರ ಮಹಾದೇವಪ್ಪ ಅವರ ಬಗೆಗೆ ಎರಡು ಲಾವಣಿಗಳು ಒಂದು ಸಖಿಪದ ಮತ್ತೊಂದು ಗೊಂದಲಿ ಸಮಾಜದ ಬುಡಬುಡಕಿಯವ ಪದವನ್ನು ಇಲ್ಲಿ ಸಾಕ್ಷಿ ಪಡಿಸೋಣ. ಜನಪದವನ್ನು ನಿರ್ಮಾಣ ಮಾಡಿರುವುದರಲ್ಲಿ ಪ್ರತಿಯೊಬ್ಬ ಗಾಯಕನು ಇಲ್ಲಿ ಮಹತ್ವದವನಾಗಿ ತೋರುವನು.

ರಾಣೆಬೆನ್ನೂರ ಸಮ್ಮಸಾಬ ಅವರ ಲಾವಣಿಯನ್ನು ಅರಿಯೋಣ

## (ಮೈಲಾರ ಮಹಾದೇವಪ್ಪ)

### ಲಾವಣಿ

ಕಾಂತಾನ ಕಳಕೊಂಡು ಕಾಮಿಣಿಯಂತೆ- ಭಾರತ ಹಾಕ್ಯದು ಕಣ್ಣೀರ
ಶಾಂತಿ ಸಮರದಲಿ ಗುಂಡಿನೇಟಿನೊಳು ಮಡಿದ ಮಹಾದೇವ ಮೈಲಾರ
ಕರಿನಾಡಿನ ಕರಿವೀರಕೇಸರಿಯೆ ನೆನಪಿರಲಿ ಎನ್ನತ ನಿರಂತರ
ಬರಿದಾನು ಲಾವಣಿಕಾರನು ಹರಡಿದ ಹಾಡಲಿ ನಾನಾತರ
ತುಂಟರ ತುಂಟನು ಭಂಟರ ಭಂಟನು ಸಾತ್ವಿಕದೊಳು ಸರದಾರಾ
ದಿಟ್ಟನ ಹೆಸರನು ಹುಟ್ಟಿದ ಕೂಸಿಗೆ ಇಟ್ಟರು ತೀರದು ಪಕಾರಾ

### ಇಳುವು

ರಾಣೆಬೆನ್ನೂರ ತಾಲೂಕಿನೊಳಗೆ ಐತಿ ಸಣ್ಣ ಹಳ್ಳಿ
ಘನಹಳ್ಳಿ ಎಂಬುದು ಮೋಟೆ ಬೆನ್ನೂರು ಎಂಬಲ್ಲಿ
ಜನಸಿದನು ನಮ್ಮ ವೀರರ ವೀರನು ಅಲ್ಲಿ

೧. ರಾ. ಮಂಜಪ್ಪ ಹರ್ಡೇಕರ, ಖಾದಿಶಾಸ್ತ್ರ ಪು. ೧೦೩

ಲಾವಣಿಕರನು ಚಾಲತಿ ಮತ್ತು ಇಳುವು ಹನಿಗಳಲ್ಲಿ ಚರಿತ್ರೆಯ ವಿಷಯವನ್ನು ಹೇಳುತ್ತ ವಿರುದನಿಯಲ್ಲಿ ಮಹಾದೇವಪ್ಪ ಮೈಲಾರರವರಿಗೆ ಗುಂಡು ಬಡಿದ ಸಂಗತಿಯನ್ನು ತಿಳಿಸುತ್ತಾನೆ.

ಬಿತ್ತಿ ಜಗತ್ತಿಗೆ ಅನ್ನವ ಇಕ್ಕುವ ರೈತರೊಳು ಹುಟ್ಟಿದ ಗಂಭೀರ
ಶಾಂತಿ ಸಮರದೊಳು ಗುಂಡಿನೇಟನೊಳು ಮಡಿದ ಮಹಾದೇವಣ್ಣಾ ಮೈಲಾರ॥೧॥

ಇನ್ನೊಬ್ಬ ಲಾವಣಿಕಾರ ಬಸಪ್ಪ ಸಂಗಪ್ಪ ಬೆಟಗೇರಿ (ಭೀಮಸಿಂಗ) ಅವರು ಮೈಲಾರ ಮಹಾದೇವಪ್ಪನ ಬಾಲ್ಯತನದ ಅಂತರಂಗ ಬಹಿರಂಗದ ಗುಣಗಳನ್ನು ಗಾನರೂಪದಲ್ಲಿ ಸೂಸಿದ್ದಾನೆ.

(ಮೈಲಾರ ಮಹಾದೇವಣ್ಣ)

ಭಾರತಾಂಬೆಯ ಬಂಧನವ ದೂರಮಾಡುವಗೋಸ್ಕರ
ಮನಸ ನಿರ್ಧಾರ ಧೈರ್ಯದಲಿ ಚತುರ ಹುಟ್ಟಿದ ಗಂಭೀರ
ಜನ್ಮಸ್ಥಾನ ಇತ್ತ ಮೋಟೆಬೆನ್ನೂರ ಮಹಾಶೂರ ಮಹಾದೇವ ಮೈಲಾರ॥ಪ॥

ಸನ್ ಹತ್ತೊಂಬತ್ತನೂರಾ ಹದಿಮೂರರಲ್ಲಿ ಈ ಧೀರ ಜನಿಸಿ ಬಂದಾರ
ರೂಪದಲ್ಲಿ ಚಂದ್ರನಂತೆ ಸುಂದರ
ಅಂತರಂಗದಲಿ ಶಾಂತಿ ಸಮರ
ಧನ್ಯಧನ್ಯದಯಾಭರಿತ ಸುಕುಮಾರ
ಹುಟ್ಟುಗುಣ ರಾಷ್ಟ್ರಾಭಿಮಾನ ಶ್ರೇಷ್ಠ ಜೀವನ ಕಷ್ಟ ಸಹನ
ನಿಷ್ಠಾವಂತ ದಿಟ್ಟತನದ ವೀರ ಶ್ರೇಷ್ಠ ಉತ್ಕೃಷ್ಟ ಹೃದಯದ್ವಾರ
ಸೃಷ್ಟಿಯೊಳು ತೊಟ್ಟ ಅಗಷ್ಟ ಅವತಾರ
ಇಂಗ್ರೇಜಿ ಸಾಲಿಗೆ ಓದುವಾಗ ಹಿಂದೂಸ್ಥಾನದೊಳಗ ಗಾಂಧೀಜಿಯ ಕೂಗ
ಕೇಳಿ ಬಂತಾಗ ಕಿವಿಯೊಳು ಪೂರಾ
ಮನದೊಳು ತಿಳಿದ ಹೊಳೆದ ವಿಚಿಯಾರಾ.

ಬಾಲಕನಿದ್ದಾಗ ಶಾಲೆಗೆ ಮೈಲಾರ ಮಹಾದೇವಪ್ಪನು ಹೋಗುತ್ತಿರುತ್ತಾನೆ. ಆಗಲೇ ಭಾರತ ದೇಶವು ಸ್ವಾತಂತ್ರ್ಯ ಪಡೆಯುವ ಹೋರಾಟದ ರಣರಂಗವನ್ನು ಪ್ರವೇಶಿಸಿದ್ದವು.

ರಾಣೆಬೆನ್ನೂರಿನ ಸಮ್ಮ ಸಾಬನು ತನ್ನ ಲಾವಣಿಯಲ್ಲಿ ಮೊಳಗಿದ ವಿವರವನ್ನು ತಿಳಿಯೋಣ

ಸಣ್ಣಾನ ನಿರತಲೆ ಶಾಲೆಗೆ ಹೋದರೆ
ಸ್ವಾತಂತ್ರ್ಯ ವೀರ ಚರಿತೆಯನು
ಬಣ್ಣದ ಮಾತಿಗೆ ಕಣ್ಣನು ಎತ್ತದೆ
ಓದುವ ಆಶೆಯ ಇಟ್ಟಿದ್ದನು

ಆಹಾ ಸ್ವಾತಂತ್ರ್ಯ ಮಹಾಸ್ವಾತಂತ್ರ್ಯ
ಸ್ವಾತಂತ್ರ್ಯ ಮರುಗಿಸಿತು ಅವನನ್ನು
ಮಹಾದೇವಣ್ಣನ ನಾಡಿಯ ರಕ್ತವು
ಪಠಿಸಿತು ಆ ಮಹಾ ಮಂತ್ರವನು
ಆರ್ಯಕಾಲದ ಭಾರತ ಸಿರಿಯೇನು
ಮನದಲಿ ನೆನೆಯುತ ಮರುಗಿದನು
ಭಾರತ ಭಾಗ್ಯದ ಮಹಾತ್ಮಾಗಾಂಧೀಯ
ಸ್ವಾತಂತ್ರ್ಯ ಕೂಗನು ಕೇಳಿದನು.

**ಇಳುವು**

ಕಡು ಹರುಷದಲಿ ಶಾಲೆಗೆ ಶರಣು ಹೊಡೆದಾನಾ ಭಂಟ
ಬಾಡಿದ್ದ ಭಾರತದ ಸ್ವಾತಂತ್ರ್ಯ ಪಣವನು ತೊಟ್ಟ
ಕುಡು ಮೀಸೆಯ ತೀಡಿದ ಶಾಂತಿ ಕಾಳಗದೆ ಹೊಂಟ

**ಏರು**

..................................................................
..................................................................
ಮಡಿದ ಮಹಾದೇವಣ್ಣ ಮೈಲಾರ ॥೨॥

ಇವರ ಮನೆತನದ ಹಿನ್ನೆಲೆ ಮತ್ತು ತಂದೆ ತಾಯಿಯವರ ಗುಣಸ್ವಭಾವಗಳನ್ನು ತಿಳಿಸುವ ನಬಿ ಎಂಬ ಕವಿಯು ಮಾಡಿದ ಸಖಿ ಪದವು ಅತ್ಯಂತ ಮಹತ್ವದ್ದಾಗಿದೆ.

**(ಸಖಿ) ನೋಡಬಾ ಹುತಾತ್ಮ ಮೈಲಾರನಾ**

ನೆನೆಯೋಣ ಬಾ ಕ್ರಾಂತಿಯ ಪುರುಷನಾ (ಗೀ ಗೀ ಗೀಯಗಾ)
ನಮ್ಮ ಹುತಾತ್ಮ ಮೈಲಾರ ಮಹಾದೇವನಾ ॥ಪ॥

ಭಾರತದೊಳು ಕರ್ನಾಟಕ ಶ್ರೇಷ್ಠ
ಕರ್ನಾಟಕದೊಳು ಧಾರವಾಡ ಜಿಲ್ಲೆ ಶ್ರೇಷ್ಠ
ಅದರಾಗ ಬ್ಯಾಡಗಿ ತಾಲೂಕ ಮೋಟೆಬೆನ್ನೂರಾ
ರೈತ ಕುಟುಂಬದ ಮಾರ್ತಾಂಡಪ್ಪ-ಬಸಮ್ಮಾ
ದೈವಭಕ್ತ ದಂಪತಿಗಳ ಉದರ ದಿಂದಾ
ಜನಿಸಿ ಬಂದಾನ ಮಹಾದೇವಪ್ಪನವರಾ॥ ೧॥

ಚಿಕ್ಕಂದಿನಲಿ ಚೆಂಡಾಡುವ ಚಂದ್ರಮಾ
ಶಾಲಿ ಕಲಿಯುತ ಕುಣದಾಡಿದಾ
ಮೋಟೆಬೆನ್ನೂರು ಮೈಲಾರ ಮಹಾದೇವನೂರಾ

ಸಾರಿ ಹೇಳತಾನ ಭರಪೂರಾ
ಖಾದಿ ಗಂಟು ಹೊತ್ತ ಹಳ್ಳಿಪಟ್ಟಣಕ ಹೋದ
ಮಹಾದೇವನ ಖಾದಿ ಆಯ್ತು ಸುಖದ ಸಾರ||೨||

ಮಹಾದೇವ ಮೈಲಾರಪ್ಪನ ಮದುವೆ ಸಿದ್ದಮ್ಮ ಎಂಬುವಳ ಸಂಗಡ ಆಯಿತು. ಚರಿತ್ರೆಯಲ್ಲಿ ಆಕೆಯನ್ನು ದಂಡಿಗೆ ಕರೆದುಕೊಂಡು ಹೋದ ಸಂಗತಿ ತಿಳಿಯುತ್ತದೆ. ಮನೆಯ ಮಗ, ಒಕ್ಕಲುತನ ಹಾಳು, ಸಂಸಾರ ಹಾಳುಮಾಡಿಕೊಂಡು ದೇಶಕ್ಕಾಗಿ ಮನೆಮಾರ ತೊರೆದು, ಇಂಗ್ರೇಜಿಯವರನ್ನು ಹೊರಹಾಕುವ ರಾಷ್ಟ್ರೀಯ ಅನೇಕ ಕಾರ್ಯಗಳನ್ನು ಕೈಕೊಂಡು, ತಿಳಿಯದೆ ಟೀಕಿಸಿದ ಸಂಗತಿಯನ್ನು ಕವಿ ನಬಿ ಜನಪದ ಸಖಿ ಪದದಲ್ಲಿ ಮುಂದೊರೆಯುತ್ತದೆ.

ಮಹಾದೇವನ ನಿಂದೆ ಮಾಡವರಾ
ನಾಡಿಮ್ಯಾಲ ಬದಿಕ್ಯಾರ ಲಫಂಗರಾ
ಇವರಿಗೇನ ಗೊತ್ತಿಲ್ಲ ಭಾರತಾ
ಹಾಳು ಮಾಡುವಂತಹ ಇಂಗ್ರೇಜರಾ।

ಯಾವುದು ಗೊತ್ತಿಲ್ಲ ಪೂರಾ
ಉಂಡಮನಿ ಜಂತಿ ಎಣಿಸವರಾ
ಗಂಡಿಗ್ಯಾರಾಗಿ ಬದಕಿದವರಾ
ಮೈಲಾರ ಮಹಾದೇವನ ಕಂಡಿಲ್ಲ।

ಚಲೇಜಾವ ಚಳವಳಿ ಮಾಡಿದವೀರಾ
ಮಂದಿಗೆ ಹೇಳ್ಯಾನ ಭರಪೂರಾ
ಮಾಡಿರಂತಾನ ಭಾರತ ಮಾತಾ ಸೇವಾ
ಸ್ವತಂತ್ರ ಆಗೂದು ನಮ್ಮ ದೇಶಾ।

ಸ್ವತಂತ್ರವಾಗಿ ಜನಗಳನ್ನು ಸೇರಿಸಿ **'ಕಭೀರ'** ಎಂಬ ತಂಡವನ್ನು ಕಟ್ಟಿ, ಕೂಟಯುದ್ಧವನ್ನು ಇಂಗ್ರೇಜಿಯರ ವಿರುದ್ಧ ನಡೆಯಿಸಿದನು. ಚಾವಡಿ ಸುಡುವುದು. ರೈಲು ಬಂದು ಮಾಡುವುದು, ತಾರಕಂಬ ಇಲ್ಲದಂತೆ ಮಾಡುವುದು, ಪೊಲೀಸರ ವಸ್ತ್ರ ಕಸಿಯುವುದು, ಸಾರಿಗೆ ಅಸ್ತವ್ಯಸ್ಥಗೊಳಿಸುವುದು, ಸರಕಾರಿ ಹಪ್ತೆ ಬಂದು ಮಾಡುವುದು ಇತ್ಯಾದಿ ಬ್ರಿಟಿಷರಿಗೆ ಅಸಹಕಾರ ತೋರಿದವು. ಈ ವಿಷಯವನ್ನು ಜನಪದ ಕವಿ ಮುಂದೊರೆದು ತಿಳಿಸುತ್ತಾನೆ.

ಊರೂರ ತಿರುಗ್ಯಾನ, ಮಹಾದೇವ
ಕಬೀರ ತಂಡ ಎದ್ದಿತ ಚಳವಳಿಗೆ
ಮಾಡಿದಾನ ಮಸಲತ ವಿಚಾರಾ
ಇಂಗ್ರೇಜಿಯರೋಡುದು ಖಚಿತಾ||

ಮೋಟಬೆನ್ನೂರಿನ ಮಹಾದೇವನೂರಾ
ಸಾರಿ ಹೇಳತಾನ ಚಳವಳಿಯಪೂರಾ
ಮಹಾತ್ಮಾ ಗಾಂಧೀಜಿ ಅಂತರವರಾ
ಮಹಾದೇವ ನನ್ನ ಖಾಸಮಗಾ॥

ಮುಡದ ದೇಶಕ ಮಹಾದೇವ
ನೀಡಿದಾನ ಪ್ರಾಣ ಸಿಂಧೂರಾ
ಮೋಟಬೆನ್ನೂರು ಆತ ಅಮರಾ
ಸಾಬ ನಬಿಯ ಹೇಳತಾನ ಮಜಕೂರಾ॥

ಮದುವೆಯಾದ ನಂತರ ಸತಿ ಸಿದ್ದಮ್ಮನನ್ನು ಕೂಡಿಕೊಂಡು ಸಾಬರಮತಿ ಆಶ್ರಮಕ್ಕೆ ಹೋಗಿ ಮಹಾತ್ಮಾ ಗಾಂಧೀಜಿಯವರನ್ನು ದರ್ಶನ ಮಾಡಿಕೊಂಡು ಭಾರತ ರಾಷ್ಟ್ರ ಸೇವೆ ಮಾಡುವುದಕ್ಕೆ ಚೇತನಗೊಂಡರು ಮೈಲಾರ ಮಹಾದೇವಪ್ಪನವರು. ಮತ್ತು ಕರ್ನಾಟಕದ ಮೊದಲನೆಯ ರಾಷ್ಟ್ರವೀರನೆಂದು ಪ್ರಖ್ಯಾತಿಗೊಂಡರು, ಸಮ್ಮ ಸಾಬರ ಲಾವಣಿಯು ಮುಂದೊರೆಯುತ್ತದೆ.

ಗಾಂಧೀ ದೀಕ್ಷೆ ಹೊಂದುತ್ತ ಹಿಂದುಸ್ಥಾನ ಜನಗಳ ಮೂಲಹಿತ
ಖಾದಿ ಕೈಗಾರಿಕೆಯ ಕಾರ್ಯದೊಳು ಹಳ್ಳಿಗರಿಗರ್ಪಿತವೆಂದವನರಿತ
ಉಪ್ಪಿನ ಸತ್ಯಾಗ್ರಹದೊಳು ಗಾಂಧೀ ಒಪ್ಪಿದ ಶಿಷ್ಯನು ಎಂದರಿತ
ಹೊತ್ತ ಕೀರ್ತಿ ಮೊದಲನೆಯ ವೀರನೆಂದೆನಿಸುತ್ತ

.....................................................................

ಇಳುವು

ಬಂದೊಡನೆ ಕೂಗಿದನು ಭಾರತ ವೀರರೇ ಏಳಿ
ಖಾದಿಯ ತೊಡುತಲಿ ಸುಖದಿಂ ಬಾಳಿ
ಎಂದ್ಹೇಳುವ ಮಾತನು ಎಲ್ಲಾ ಜನಗಳು ಕೇಳಿ.

೧೯೩೦ ರ ಸತ್ಯಾಗ್ರಹ ಮುಗಿಯುತ ಮಹಾತ್ಮಾ ಗಾಂಧೀಜಿನಯವರ ಉಪದೇಶದಂತೆ. ಪತಿಯಕೂಡ ಸತಿ ಸಿದ್ದಮ್ಮ ಜನ ಜಾಗ್ರತ ಕಾರ್ಯ ಮಾಡಲು ತಮ್ಮ ತಮ್ಮ ಸ್ಥಳಗಳಿಗೆ ಮರಳಿದರು.

ಮುಂದಿನ ಕಾರ್ಯಕಲಾಪಗಳನ್ನು ಹೇಗೆ ನಡೆಯಿಸಿದರೆಂಬುದನ್ನು ಹುಲಕುಂದ ಭೀಮಸಿಂಗ ಕವಿಯು ತಿಳಿಸಿದ್ದನ್ನು ಇಲ್ಲಿ ನೋಡುವಾ.

### ಚಲ್ತಿ ಚಾಲ

ಇಬ್ಬರು ಕೂಡಿ ಆಶ್ರಮ ತಗದವರ ಮೆಟ್ಟ ಮಾಡ್ತಾರ ಬಂದ ಕೊರಡೂರ
ಗ್ರಾಮೋದ್ಯೋಗ ಖಾದಿಯ ಕೇಂದ್ರ ಹಳ್ಳಿ ಸ್ವಾವಲಂಬನ ಪ್ರಚಾರ
ಸ್ವದೇಶಿ ಸಾದಾ ಸಾತ್ವಿಕ ಹಾರಾ ಸದಾ ಬೋಧಾಮೃತದಿ ನಿರತರ
ಅಜ್ಞ ಜನರ ಬುದ್ಧಿ ತಿದ್ದುಗೋಸ್ಕರ ಯಜ್ಞ ಮಾಡಿ ನಡಿಸ್ತಾರ ತಮ್ಮ ಶರೀರ
ಜನರಲ್ಲಿ ಜಾಗೃತಿ ಮಾಡಿಬಿಟ್ಟಾರ ತನು ಮನಧನ ರಾಷ್ಟ್ರಕ ನೀಡಿದರ
ಗಾಂಧೀಜಿಯ ಕರೆ ಬಂದಾಗ ಘೋರ ಸತ್ಯಾಗ್ರ ಸಮರ ಧುಮುಕುವರ
ನಿರ್ವಂಚನೆ ನಿಷ್ಕಾಮಕರ್ಮಿ ಇವರ ನಿಸ್ಪೃಹ ನಿಸ್ವಾರ್ಥ ಬುದ್ಧಿಯವರ
ಪ್ರತಿಷ್ಠೆ ದೂರಿಕರಿಸಿದವರ ಮಾತಿನಂತೆ ನೀತಿಲಿ ನಡೆಯುವವರ ಮೈಲಾರ ದಾದಾರಾ

ಬರಬರುತ್ತ ಭಾರತ ಸ್ವಾತಂತ್ರ್ಯದ ಉರಿ ಹಬ್ಬಿತು. ಬ್ರಿಟಿಷರಿಗೆ ಭಯ ಹೆಚ್ಚಾಯಿತು. ದೇಶದ ತುಂಬೆಲ್ಲ ಚಳವಳಿಯನ್ನು ಹತ್ತಿಕ್ಕಲಾಗಲಿಲ್ಲ. ಬ್ರಿಟಿಷರ ವಿರುದ್ಧ ಬಂಡಾಯ ಹೂಡಿಯಾಗಿತ್ತು. ಮಹಾತ್ಮಾಗಾಂಧೀಜಿಯವರ ವಿರುದ್ಧ ಬಂಡಾಯ ಹೂಡಿಯಾಗಿತ್ತು. ಮಹಾತ್ಮಾ ಗಾಂಧೀಜಿಯವರ ಮಾತುಗಳು ಜನತೆಗೆ ಮಂತ್ರಗಳಾಗಿ ಪರಿಣಮಿಸಿದವು. ಸಿಕ್ಕ ಸಿಕ್ಕ ಸ್ಥಳದಲ್ಲಿ ಬ್ರಿಟಿಷರು ಅಸಹಕಾರಿಗಳನ್ನು ಚಳುವಳಿಕಾರರನ್ನು ಹಿಡಿದು ಜೇಲು ತುಂಬ ತೊಡಗಿದರು. ಇದರಿಂದ ಜನ ರೊಚ್ಚಿಗೆದ್ದಿತು. ಪೊಲೀಸರ ರಾಯಫಲ ಕಸಿದುಕೊಂಡು ಅವರನ್ನೆ ಜನರು ಕೊಂದರು.

ಮೈಲಾರ ಮಹಾದೇವಪ್ಪನವರು ಹೊಸರಿತ್ತಿಯಲ್ಲಿ ಅಸಹಕಾರ ಚಳುವಳಿಯನ್ನು ನಡೆಯಿಸಿದರು. ಮುಂದಿನದನ್ನು ಲಾವಣಿಕಾರ ಭೀಮಸಿಂಗನಿಂದಲೇ ಕೇಳೋಣ

ದಾಪಮಾಡದ ಹಾದಿ ಹಿಡಿದ ನಡದಾರ
ನಾಲ್ವತ್ತು ಮೂರನೆ ಇಸ್ವಿಯ ಎಪ್ರೇಲ ತಾರೀಖ
ಮೊದಲು ಅರುಣೋದಯದ ಕಾಲ
ಹೊಸರಿತ್ತಿಯ ಗ್ರಾಮದಲ್ಲಿ ಪೊಲೀಸರ ಗುಂಡಿನೇಟಿಗೆ ಆಹುತಿಯಾದಾರಾ

### ಏರು

ಗಾಬರ್‍ಯಾಗಿ ಬೋರ್‍ಯಾಡಿ ಅಳತಾರ ಮುನಿದ ಶಂಕರ
ಹೋದ ಮಂಗಳ ಸೂತ್ರ ಆತ ಬಹಳ ಘೋರ ಸ್ವಾತಂತ್ರ್ಯದ ಅಡಿಗಲ್ಲಾದ ಪತಿವೀರ
ಹುಲಕುಂದಭೀಮ ಜಾಹೀರ ಮಾಡಿದ ಶಾಹೀರ ॥೨॥

ಕೊನೆಯದಾಗಿ ಮಹಾದೇವ ಮೈಲಾರರ ಬಗೆಗೆ ಬುಡಬುಡಕಿಯವನು ಹೇಳಿದ ಸ್ತುತಿ ಪದವನ್ನು ಕೇಳಬೇಕು.

---

ದಾದಾರಾ = ಅಣ್ಣನವರ
ಮೆಟ್ಟಮಾಡು = ನೆಲೆ ನಿಲ್ಲು

## ಜಯವಾಗಿಲಿ

ಜಯತು ಜಯವಾಗಲಿ
ಜಯತು ಜಯವಾಗಲಿ
ಜಯವಾಗತೈತಿ ಜಯವಾಗತೈತಿ॥ಪಲ್ಲ॥
ಇಂಗ್ರೇಜಿಯವರನು ಅಟ್ಟುವ
ಬಿಕ್ಕಟ್ಟು ಬಲು ಹೆಚ್ಚಾಗತೈತಿ।

ಮಹಾದೇವ ಮೈಲಾರರ ಶಕ್ತಿ
ಚಳವಳಿಯ ವೀರರಿಗೆ ಯುಕ್ತಿ।

ಮಹಾತ್ಮಾ ಗಾಂಧೀಜಿಯವರ ವಾಣಿ
ಮಾಡಿರಿ ಇಲ್ಲವೆ ಮಡಿಯಿರಿ।

ತುಂಬಿದೆ ಚಲೇಜಾವ ಚಳವಳಿ
ಮಹಾತ್ಮರ ದಂಡಿಯಾತ್ರೆಯ ಮಳಿ।

ಕನ್ನಡ ವೀರರ ದಂಡು
ಇಂಗ್ರೇಜಿಯರಿಗದು ಗುಂಡು।

ಸೆರೆಮನೆಯ ಸೇರೂರಬಂದ
ಸವಿನಯ ಕಾಯಿದೆ ಭಂಗ।

ಗುಂಡಿನೇಟಿಗೆ ಎದೆಗೊಟ್ಟಾರ
ವೀರರು-ಧೀರರು ಮದಿಡಾರ।

ಜಯವಾಗತೈತಿ ಭಾರತಮಾತೆಗೆ
ಜಯತು ಜಯವಾಗತೈತಿ ತಾಯಿಗೆ॥[೨]

ಮೈಲಾರ ಮಹಾದೇವಪ್ಪನವರ ಚರಿತ್ರೆಯನ್ನು ದೇವತ್ವಕ್ಕೇರಿಸಿ ಹಾಡಿಕೊಂಡ ತ್ರಿಪದಿಗಳನ್ನೂ ಹಂತಿ ಪದಗಳನ್ನು, ಕರ್ಬಲ್ ಪದಗಳನ್ನೂ ನಾನಿಲ್ಲಿ ಸೇರಿಸಿ, ಬರಹ ಬರೆದಿರುವುದಿಲ್ಲ.

---

೨. ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ ಡಾ॥ ಶಿವಾನಂದ ಸುಬ್ಬಣ್ಣವರ ಅಕ್ಷಯ ಪ್ರಕಾಶನ ಧಾರವಾಡ ೧೯೯೧ (ಮೈಲಾರ ಮಹಾದೇವಪ್ಪ) ೧. ಕರ್ತೃ ರಾಣೆಬೆನ್ನೂರ ಸಮ್ಮ ಸಾಬ (ಮೈಲಾರ ಮಹಾದೇವಣ್ಣ) ೨. ಕರ್ತೃ ಬಸಪ್ಪ ಸಂಗಪ್ಪ ಬೆಟಗೇರಿ (ಭೀಮಸಿಂಗ)

## ಜಾನಪದದಲ್ಲಿ
## ಸ್ವಾಮಿ ರಾಮಾನಂದ ತೀರ್ಥರು

ಸ್ವಾಮಿ ರಮಾನಂದ ತೀರ್ಥ ಅಥವಾ ರಾಮಾನಂದ ತೀರ್ಥ ಎಂಬ ಹೆಸರು ಪಡೆದು ಪ್ರಖ್ಯಾತರಾಗಿ ಅಮರತ್ವ ಪಡೆದ ಕನ್ನಡ ಭೂಮಿ ವಿಜಾಪೂರ ಜಿಲ್ಲೆಯ ಸಿಂದಗಿಯವರಾದ ಶ್ರೀ ವೆಂಕಟೇಶ ಭವಾನರಾವ ಖೇಡಗಿಯವರು ಎಂಬುದು ಐತಿಹಾಸಿಕ ದಾಖಲೆಗಳ ಸಾಕ್ಷಿಯಾಗಿ ಹೆಮ್ಮೆ ಪಡೆಯುತ್ತಿವೆ.[೩]

ಸ್ವಾಮಿ ರಮಾನಂದ ತೀರ್ಥ (೧೯೦೩-೧೯೭೨) ರ ನಿಜ ಚರಿತ್ರೆಯನ್ನು ಬರೆಯಲು ಹೋಗಿ ಡಾ|| ಸೂರ್ಯನಾಥ ಕಾಮತರ ಸಂಪಾದಕತ್ವದಲ್ಲಿ ತಯಾರಾದ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ದ್ವಿತಿಯ ಸಂಪುಟದಲ್ಲಿ ತಪ್ಪು ಮಾಹಿತಿಗಳನ್ನು ನೀಡಲಾಗಿದೆ. ಆ ಮಾಹಿತಿ ಹೀಗಿದೆ ಸ್ವಾಮಿ ರಮಾನಂದ ತೀರ್ಥರು ಗುಲಬರ್ಗಾಜಿಲ್ಲೆಯ ಚಿನ್ಮಳಿ ಗ್ರಾಮದಲ್ಲಿ ಜನಿಸಿದ (೩-೧೧-೧೯೦೩) ಸ್ವಾಮಿಜಿಯವರ ಪೂರ್ವದ ಹೆಸರು ವೆಂಕಟೇಶ ಭಗವಾನರಾವ್ ಖೇಡ್ಗಿಕರ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕಲ್ಯಾಣದಲ್ಲಿ ಮುಗಿಯಿಸಿ ಸೊಲ್ಲಾಪುರದಲ್ಲಿ ಹೈಸ್ಕೂಲು ಶಿಕ್ಷಣ ಪಡೆಯುತ್ತಿದ್ದಾಗಲೇ ಬಾಲಕ ವೆಂಕಟೇಶ ರಾಷ್ಟ್ರೀಯವಾದಿಯಾಗಿದ್ದ.

ನಿಜ ಚರಿತ್ರೆಯನ್ನು ತೋರುವ ಹೈದ್ರಾಬಾದ ಸ್ವಾತಂತ್ರ್ಯ ಸೂರ್ಯ, ಪೂಜ್ಯಶ್ರೀ ಸ್ವಾಮಿ ರಾಮಾನಂಧ ತೀರ್ಥರು ಎಂಬ ಕೃತಿಯನ್ನು ೧೯೭೭ರಲ್ಲಿ ಡಾ|| ಮಲ್ಲಿಕಾರ್ಜುನ ಸಿಂದಗಿಯವರು ರಚಿಸಿದ್ದಾರೆ.

ಈ ಕೃತಿಯು ೯೮ ಪುಟಗಳ ಚರಿತ್ರೆಯ ನಿಜಾಂಶಗಳನ್ನು ತೋರುತ್ತಿದೆ. ೯೮ನೆಯ ಪುಟದಲ್ಲಿ ಕರ್ನಾಟಕ ಸರಕಾರದ ಜನನ ಪ್ರಮಾಣ ಪತ್ರವನ್ನು ಪಡೆಯಲಾಗಿ ಅದನ್ನು, ಫೋಟೋ ಕಾಫಿ ಮಾಡಿ ಪ್ರಕಟಿಸಲಾಗಿದೆ. ಅದರಲ್ಲಿ ಜನನವಾದ ತಾರೀಖು ೨೬-೨-೧೯೦೩ ಮಗುವಿನ ಹೆಸರು ವೆಂಕಟೇಶ, ಜನನವಾದ ಸ್ಥಳ ಸಿಂದಗಿ, ತಂದೆಯ ಹೆಸರು ಭವಾನರಾವ್ ಅಂಣಾಜಿ ಖೇಡಗಿ ರಜಿಸ್ಟರ್ ನಂ. ೮೬ ರಜಿಸ್ಟರ್ ಸಿಂದಗಿ ಜಿಲ್ಲಾ ವಿಜಾಪೂರ ತಾಲೂಕ ಸಿಂದಗಿ ಮುಂತಾದ ದಾಖಲೆಗಳನ್ನು ತಹಶೀಲ್ದಾರ ಸಿಂದಗಿಯವರು ಸಿಕ್ಕಾ (ಮೋರ) ನೀಡಿ ರುಜುವಾತು ಮಾಡಿರುವುದು ಸ್ಪಷ್ಟವಿದೆ. ಅಲ್ಲದೆ ಈ ಕೃತಿಯಲ್ಲಿ ಭವಾನರಾವ ಅವರ ಹೊಲ ಮನೆಗಳನ್ನು ಗುರುತಿಸಲಾಗಿದೆ., ಅವರ ಬೀಗರಾದ ಕುಲಕರ್ಣಿಯವರ ರಕ್ತ ಸಂಬಂಧದ ವಿವರಗಳನ್ನು ಸಾಕ್ಷಿ ಆಧಾರಗಳಿಂದ ಪ್ರಕಟಿಸಲಾಗಿದೆ.

---

೩. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪಾದಕರು ಡಾ|| ಸೂರ್ಯನಾಥ ಕಾಮತ ದ್ವಿತಿಯ ಸಂಪುಟ ಪುಟ ೮೦೧ ಗೀತಾ ಬುಕ್ ಹೌಸ ಮೈಸೂರು ಪ್ರಕಟಣೆ ೧೯೭೭ ಈ ಗ್ರಂಥವನ್ನು ಸ್ವಾಮಿ ರಮಾನಂದ ತೀರ್ಥ ಅವರ ಸ್ಮರಣೆ ಎಂದು ಅರ್ಪಿಸಲಾಗಿದ್ದು ಬಿದಿ ಪುಟದಲ್ಲಿ ಅವರ ಭಾವಚಿತ್ರವನ್ನು ಚಿತ್ರಿಸಲಾಗಿದೆ.

ಸಿಂದಗಿಯ ಇಡೀ ಜನತೆ ಹೆಮ್ಮೆ ಪಡೆಯುವ ಮತ್ತು ರಾಮಾನಂದ ತೀರ್ಥರ ಸ್ಮಾರಕ ಮಾಡುವ ಹುಮ್ಮಸ್ಸಿನಲ್ಲಿದ್ದಾರೆ. ಕರ್ನಾಟಕ ಸರಕಾರ, ಭಾರತಕ್ಕೆ ಸ್ವಾತಂತ್ರ್ಯ ಬಂದ ಸುವರ್ಣ ಜಯಂತಿಯಲ್ಲಿ ಸ್ಮಾರಕಕ್ಕೆ ಒಪ್ಪಿಗೆ ನೀಡಿಯಾಗಿದೆ.

ಸ್ವಾಮಿ ಶ್ರೀ ರಮಾನಂದ ತೀರ್ಥರವರ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಇನ್ನೊಬ್ಬ ತ್ಯಾಗಿಯಾದಿ ಯೋಗಿವರ್ಯ ಶ್ರೀ ಸ್ವಾಮಿ ರಾಮತೀರ್ಥರವರ ಜೀವನ ಚರಿತ್ರೆ ಒಂದಿಷ್ಟು ಸಂಶಯ- ಸಂಕೀರ್ಣತೆಯನ್ನು ತಂದೊಡ್ಡುವುದು. ಈ ಸ್ವಾಮಿ ರಾಮತೀರ್ಥರು ಯಾರು ಎಂಬುದನ್ನು ಸ್ವಲ್ಪಗಮನಿಸೋಣ.

ಶ್ರೀ ಸ್ವಾಮಿ ರಾಮತೀರ್ಥ ಅಥವಾ ತೀರ್ಥರಾಮ ಎಂಬ ಪ್ರಸಿದ್ಧಿ ಹೆಸರನ್ನು ಪಡೆದವರು. ಮೂಲತಃ ಪಂಜಾಬದವರು, ಇವರು ದಿನಾಂಕ ೨೨-೧೦-೧೮೭೩ರಲ್ಲಿ ಪಂಜಾಬ ಪ್ರಾಂತದ ಗುಜರನ್ ವಾಲಾ ಜಿಲ್ಲೆಯಲ್ಲಿರುವ ಮುರಲಿವಾಲಾ ಗ್ರಾಮದಲ್ಲವಿ ಜನಿಸಿದವರಾಗಿದ್ದಾರೆ. ಬಾಲ್ಯದಲ್ಲಿಯೇ ಬ್ರಹ್ಮಚಾರಿಯಾಗಿ ಬದುಕುತ್ತೇನೆಂದು ಹಟ ಹಿಡಿದು ಆಜನ್ಮ ಬ್ರಹ್ಮಚರ್ಯವನ್ನು ಪಾಲಿಸಿಕೊಂಡು ಬಂದವರು, ಇಡೀ ಭಾರತವೇ ತಮ್ಮ ಕಾರ್ಯಕ್ಷೇತ್ರ ಜನಾಂಗವೇ ಸಹೋದರರು. ಸಹೋದರಿಯರು ಎಂದು ಅರಿತವರು. ಅವರು ಮಹಾಯೋಗಿಗಳೂ ತತ್ತ್ವಜ್ಞಾನಿಗಳೂ, ಪ್ರತಿಭಾಶಾಲಿ ಗವಿಗಳೂ ಆಗಿದ್ದರಲ್ಲದೆ ಉತ್ತಮ ವಾಗ್ಮಿಗಳೂ ಆಗಿದ್ದರು. ದೇಶಭಕ್ತರಾಗಿ ಭರತಖಂಡವನ್ನೆಲ್ಲ ಸುತ್ತು ಹಾಕಿ ಉಪನ್ಯಾಸಗಳನ್ನು ನೀಡಿ, ಜನತೆಗೆ ಸ್ಫೂರ್ತಿಯನ್ನು ಹೆಚ್ಚಿಸಿದರು. ಸ್ವಾಮಿ ವಿವೇಕಾನಂದರಂತೆ ಅಮೇರಿಕಾವನ್ನು ಸಂದರ್ಶಿಸಿದ್ದರು. ಹಿಂದಿ ಭಾಷೆಯಲ್ಲಿ ರಾಮಾಯಣ ಬರೆದು ವಾಲ್ಮೀಕಿಯ ಅವತಾರವೆಂದು ಪ್ರಖ್ಯಾತಿ ಪಡೆದರು. ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ತುಳಸಿದಾಸರ ಸಂತತಿಗೆ ಸೇರಿದವರಾಗಿದ್ದಾರೆ.

ಅಮೇರಿಕಾದಲ್ಲಿ ಭರತಖಂಡದ ಪರವಾಗಿ ಅಮೇರಿಕಾಕ್ಕೆ ವಿಜ್ಞಾಪನೆ ಎಂಬ ಅವರ ಉಪನ್ಯಾಸವು ಅಮೇರಿಕಾದ ಜನತೆಗೆ ಇನ್ನೊಬ್ಬ ವಿವೇಕಾನಂದ ಎಂದೆನಿಸಿದ ನಿಜ ಸಂಗತಿ ಚರಿತ್ರಾರ್ಹ ಮತ್ತು ಗಮನಾರ್ಹ ಸಂಗತಿಯಾಗಿದೆ ಮೂವತ್ತುಮೂರುವರುಷ ಬದುಕಿದ ಈ ಮಹಾಪುರುಷರು ಭಾರತದ ಮಹಾಶರಣರಾಗಿದ್ದರು. ಇವರು ೧೯೦೬ರಲ್ಲಿ ತೀರಿಕೊಂಡರು.

---

೪. ಹೈದರಾಬಾದ ಸ್ವಾತಂತ್ರ್ಯ ಸೂರ್ಯ, ಪೂಜ್ಯಶ್ರೀ ಸ್ವಾಮಿ ರಾಮಾನಂದತೀರ್ಥರು ಡಾ।। ಮಲ್ಲಿಕಾರ್ಜುನ ಸಿಂದಗಿ, ಪ್ರಕಟಣೆ ಸ್ವಾಮಿ ರಾಮಾನಂದ ತೀರ್ಥ ಅಧ್ಯಯನ ಕೇಂದ್ರ, ಶಿರೂರ ಪಾರ್ಕಮೇನ್‌ರೋಡ, ವಿದ್ಯಾನಗರ ಹುಬ್ಬಳ್ಳಿ.ದಿನಾಂಕ ೨೨-೧-೧೯೯೭

ಶ್ರೀ ಹರ್ಡೇಕರ ಮಂಜಪ್ಪನವರು ರಾಮತೀರ್ಥರವರ ಜೀವನ ಚರಿತ್ರೆ ಹಾಗೂ ಅವರ ಉಪನ್ಯಾಸಗಳನ್ನು ಕನ್ನಡಕ್ಕಿಳಿಸಿ ಮಹಾಕಾರ್ಯ ಮಾಡಿದ್ದಾರೆ.

ಸ್ವಾಮಿ ರಾಮಾನಂದ ತೀರ್ಥರನ್ನು ಅವರ ಜೀವನ ಚರಿತ್ರೆಯನ್ನು ಬರೆಯಲು ಮನಸ್ಸು ಮಾಡಿ ಸಂಶೋಧನೆಯ ಆಳಕ್ಕಿಳಿದು ಕೃತಿ ರಚಿಸಿ ಡಾ॥ ಮಲ್ಲಿಕಾರ್ಜುನ ಸಿಂದಿಗೆಯವರು ನನ್ನ ನುಡಿ ನೈವೇದ್ಯ ಎಂಬ ಮಾತನ್ನು ನೆನಪಿಸುವುದು ಸ್ತುತ್ಯ ಸಂಗತಿಯಾಗಿದೆ.

ಸಿಂದಗಿಯ ಊರವರಿಂದ ಹೊಗಳಿಸಿಕೊಂಡ ಶರಣಗೌಡರು ಬುದ್ದ ಸಿಂದಗಿ ಊರವರೇನೂ ಅಲ್ಲ. ಕೇವಲ ರಜಾಕಾರರನ್ನು ಓಡಿಸಿ ಲೂಟಿಯಾಗವುದನ್ನು ತಪ್ಪಿಸಿ, ಮಹಿಳೆಯರ ಗೌರವ ಕಾಪಾಡಿದ್ದ ಶರಣಗೌಡರನ್ನೇ ಹೊಗಳುತ್ತಿದ್ದ ಸಿಂದಗಿ ಊರವರಿಗೆ ಇಡೀ ಹೈದರಾಬಾದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶಿಲ್ಪಿ ಎನಿಸಿದ್ದ ಸ್ವಾಮಿ ರಮಾನಂದ ತೀರ್ಥರು ಖಾಸ ಸಿಂದಗಿ ಊರವರು ಎಂದು ಗೊತ್ತಾಗಿದ್ದರೆ, ಅವರನ್ನು ಎಷ್ಟು ವೈಭವದಿಂದ ಮೆರೆಯಿಸುತ್ತಿದ್ದರೋ ಹೇಳಲಿಕ್ಕೆ ಆಗಲಿಲ್ಲ. ಆದರೆ ಸಿಂದಗಿಯ ಖೇಡಗಿಯ ಮನೆತನದ ದಾರ್ಶನಿಕ ಹಾಗೂ ಯೋಗಿಯಾಗಿದ್ದ ಶ್ರೀಭವಾನರಾಯರ ಉದರದಲ್ಲಿ ಹುಟ್ಟಿದ್ದ ವೆಂಕಟೇಶ ಅವರೇ ಮುಂದೆ ಶ್ರೀ ರಮಾನಂದ ತೀರ್ಥರು ಎಂಬ ವಿಷಯ ಅಂದು ಸಿಂದಗಿ ಊರಿನವರಿಗೆ ತಿಳಿದಿರಲೇ ಇಲ್ಲ, ಕ್ರೂರ ಹೈದರಾಬಾದಿನ ನವಾಬರ ಆಳಿಕೆಯಲ್ಲಿ ಧ್ವನಿಯೇ ಅಡಗಿದ್ದ ಜನರ ಕೊರಳಿಗೆ ಉಸಿರುಕೊಟ್ಟವರು, ನವಾಬರನ್ನು ಸಿಂಹಾನಸದಿಂದ ಕೆಳಗಿಳಿಸಿದ ಗಂಡಗಬರು ಹೈದರಾಬಾದಿನ ಸ್ವಾತಂತ್ರ್ಯ ಸೂರ್ಯ ಎನಿಸಿದ ಸ್ವಾಮಿ ರಾಮಾನಂದ ತೀರ್ಥರು ಸಿಂದು ಊರವರು. ಸಿಂದಗಿಯಲ್ಲಿಯೇ ಜನಿಸಿದ ಲೇಖಕರು ಚರಿತ್ರೆಯ ಆಧಾರಗಳು ತಮಗೆ ದೊರೆತಾಗ ಅಧ್ಯಾತ್ಮದ ಹಮ್ಮಸ್ಸು ಸಂಶೊಧನೆಯ ಆಳವನ್ನು ಅರಿವಿನ ಮಡಲಿಗೆ ಸೇರಿಸಿ ಆನಂದ ಭರಿತರಾಗಿರುವುದನ್ನು ಕಾಣುತ್ತದೆ.

ಶ್ರೀ ವೆಂಕಟೇಶ (ಶ್ರೀ ರಾಮಾನಂದ ತೀರ್ಥರು) ತೀರ ಚಿಕ್ಕ ಪ್ರಾಯದಲ್ಲಿಯೇ ಸಿಂದಗಿ ಊರನ್ನು ಬಿಟ್ಟರು. ಗಾಣಗಾಪೂರದಲ್ಲಿ ಅಕ್ಕನ ಮನೆಯಲ್ಲಿದ್ದುಕೊಂಡು ಕನ್ನಡ ಶಾಲೆ ಪೂರೈಸಿದರು. ಮಾಧ್ಯಮಿಕ ಶಿಕ್ಷಣಕ್ಕಾಗಿ ಸೊಲ್ಲಾಪೂರಕ್ಕೆ ಹೋದರು. ಉನ್ನತ ಶಿಕ್ಷಣವೆಲ್ಲ ಪುಣೆಯಲ್ಲಾಯಿತು ಅವರ ಕಾರ್ಯಕ್ಷೇತ್ರ ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶಗಳಾದುದರಿಂದ ಅವರು ತಮ್ಮ ಆಯುಷ್ಯವನ್ನೆಲ್ಲ ಕರ್ನಾಟಕದ ಹೊರಗೇ ಉಳಿದರು.

---

೫. ರಾಷ್ಟ್ರ ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಪುಟ ೫೧೬-೫೧೭ ಲೇಖಕರು ಪ್ರೊ॥ ಗ.ಸ. ಹಾಲಪ್ಪ ಸ್ಮಾರಕ ಗ್ರಂಥಮಾಲೆ ಧಾರವಾಡ ೧೯೬೬

೬. ಓಂ ಹೈದರಾಬಾದ ಸ್ವಾತಂತ್ರ್ಯ ಸೂರ್ಯ, ಪೂಜ್ಯಶ್ರೀ ಸ್ವಾಮಿ ರಮಾನಂದ ತೀರ್ಥರು. ಲೇಖಕರು ಡಾ॥ ಮಲ್ಲಿಕಾರ್ಜುನ ಸಿಂದಗಿ ಪುಟ ೫೯ ಸ್ವಾಮಿ ರಾಮಾನಂದತೀರ್ಥ ಅಧ್ಯಯನಕೇಂದ್ರ ೧೯೯೭

ಈ ಕಾರಣದಿಂದಾಗಿಯೇ ಕನ್ನಡಿಗರಿಗೆ ಅವರು ಅಪರಿಚಿತರಂತಾದರು. ಹೈದರಾಬಾದ ನವಾಬನಲ್ಲಿ ಆವನ ದುರಾಡಳಿತಯುದ್ಧದಲ್ಲಿ ಅಂದು ಇದ್ದ ೨೨೫೦೦ ಹಳ್ಳಿ ಪಟ್ಟಣಗಳಲ್ಲಿದ್ದ ಸುಮಾರು ೧೬ ಮಿಲಿಯನ್ ಜನಗಳ ಸ್ವಾತಂತ್ರ್ಯ ಶಾಂತಿ ಸೌಖ್ಯಗಳಿಗಾಗಿ ಅವರು ತಮ್ಮನ್ನು ತಾವು ಕರ್ಪೂರದಂತೆ ಸುಟ್ಟುಕೊಂಡರು. ಶ್ರೀಗಂಧದ ಕೊರಡಿನಂತೆ ತೇಯ್ದುಕೊಂಡರು.

ಬಾಲಕರಿದ್ದಾಗ ವೆಂಕಟೇಶ ಸಾರ್ವಜನಿಕ ಸಭೆಗಳಿಗೆ ಹೋದರು ೧೯೨೭ರಲ್ಲಿ ಸೊಲ್ಲಾಪುರದಲ್ಲಿ ಕಾರ್ಮಿಕರಂಗ ಪ್ರವೇಶಿಸಿದರು. ಅನಂತರ ಉಸ್ಮಾನಾಬಾದ ಜಿಲ್ಲೆಯ ಹಿಪ್ಪರಗಾದಲ್ಲಿ ರಾಷ್ಟ್ರೀಯ ಶಾಲೆಯೊಂದರ ಮುಖ್ಯಾಧ್ಯಾಪಕರಾದರು. ಕಾರ್ಮಿಕ ಚಳವಳಿಯಿಂದ ಬಂದಿತರಾದರು. ಶ್ರೀ ಎಸ್. ಎಂ. ಜೋಶಿಯವರೊಂದಿಗೆ ಜೊತೆಗಾರರಾದರು. ೧೯೩೦ರಲ್ಲಿ ಮೋಮಿನಾಬಾದ ಒಂದು ಹೈಸ್ಕೂಲಿನ ಮುಖ್ಯಾಧ್ಯಾಪಕರಾದರು. ಅಖಂಡ ಬ್ರಹ್ಮಚರ್ಯ ಪಾಲನೆ. ಖಾದಿ ಉಡುಪು ದಿನನಿತ್ಯ ಹದಿನೆಂಟು ತಾಸು ದುಡಿಮೆ ಅವರ ದೈನಂದಿನ ಕಾರ್ಯಗಳಾದವು. ೧೯೩೮ರಲ್ಲಿ ರಾಷ್ಟ್ರೀಯ ಪರಿಷತ್ತಿನ ಕಾರ್ಯದರ್ಶಿಗಳಾದರು. ೧೯೪೭ ರಲ್ಲಿ ಹೈದ್ರಾಬಾದ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಆ ವೇಳೆಗೆ ಕಾವಿಧಾರಿಗಳಾಗಿದ್ದರು.

ನಮ್ಮ ಮಾಜೀ ಪ್ರಧಾನಿ ಶ್ರೀ ಪಿ.ವಿ. ನರಸಿಂಹರಾವ ಅವರ ಬಗೆಗೆ ಹೇಳಿದ ಮಾತುಗಲನ್ನು ಆಲಿಸೋಣ ಕರ್ನಾಟಕದಲ್ಲಿಯೇ ಹುಟ್ಟಿದವರಾಗಿದ್ದು ಆ ಭಾಗದಲ್ಲಿ ಹೆಮ್ಮೆಯ ಭಾವ ಹುಟ್ಟಿಸಿದವರು. ಅವರ ತೀವ್ರ ಚಟುವಟಿಕೆಗಳಿಂದ ಮತ್ತು ತ್ಯಾಗಗಳಿಂದ ಶೈಕ್ಷಣಿಕ, ರಾಜಕೀಯ, ಆಧ್ಯಾತ್ಮಿಕ ರಂಗಗಳಲ್ಲಿ ಸೇರಿ ಮರಾಠವಾಡಾ ಪ್ರದೇಶದಲ್ಲಿ ತೆಲಾಂಗಣಾ ಪ್ರದೇಶದಲ್ಲಿ ಇತಿಹಾಸ ನಿರ್ಮಿಸಿದರು. ಅವರ ವ್ಯಕ್ತಿತ್ವಕ್ಕೆ ಬೇರೊಂದು ಕಂಡು ಹಿಡಿಯುವುದು ಕಷ್ಟ. ೧೯೩೮ರಲ್ಲಿ ಜೇಲು ಸೇರಿದರು ೧೯೪೦ರಲ್ಲಿ ಮತ್ತೆ ಜೇಲು ೧೯೪೧–೧೯೪೭ ರಲ್ಲಿ ಬಂದಿತರಾಗಿ ಒಟ್ಟು ಹದಿನಾರು ತಿಂಗಳು ಜೇಲಿನಲ್ಲಿ ಕಳೆದರು ಸ್ವಾತಂತ್ರ್ಯ ದೊರಕಿದ ನಂತರ ಸ್ವಾಮಿಜಿ ದೇಹಲಿಗೆ ಹೋದರು. ಕೇಂದ್ರ ನಾಯಕ ಮಣಿಗಳನ್ನು ಕಂಡರು. ಶ್ರೀ ಕೆ.ಎಂ. ಮುನಸಿ ಅಗ ಹೈದ್ರಾಬಾದಿಗೆ ಎಜಂಟ ಜನರಲ್ ಆಗಿದ್ದರು. ಉಕ್ಕಿನ ಮನುಷ್ಯ ವಲ್ಲಭಾಯಿ ಪಟೇಲರವರಿಗೆ ಅದೆಷ್ಟೊ ಸಲ ಭೆಟ್ಟಿಯಾದರು ಶ್ರೀ ಕೆ.ಎಂ. ಮುನಸಿಯವರು ಶ್ರೀರಾಮಾನಂತದ ತೀರ್ಥರ ವ್ಯಕ್ತಿತ್ವ ಕಂಡು ಉಕ್ಕಿನಂತಹ ಸ್ವಾಮಿ ರಾಮಾನಂದರು ಎಂದು ಉದ್ಗರಿಸಿದರು. ಅವರಿಗೆ ತಮ್ಮ ಜಿವನ ಚರಿತ್ರೆ (ಆತ್ಮಚರಿತ್ರೆ) ಬರೆಯಲು ಶ್ರೀ ಮುನಸಿ ವಿನಂತಿಸಿಕೊಂಡರು ಮತ್ತೆ ತೆಲಾಂಗಾಣ ರೈತರ ಸಮಸ್ಯೆಗಳಿಗೆ ಮುಖ್ಯರಾದರು. ಭಾಷಾವಾರ ಪ್ರಾಂತ ರಚನೆಗೆ ತೀವ್ರ ಬೆಂಬಲ ನೀಡಿದರು. ವಿಷಯ ನಾಯಕರುಗಳಿಗೆ ತಿಳಿಸಿದರು. ದಿನಾಂಕ ೨೨-೧-

---

೭. ಅದೇ ಪುಟ ೬೦

೮. ಅದೇ ಪುಟ ೬೨

೧೯೭೨ ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು. ಶ್ರೀ ಸ್ವಾಮೀಜಿಯವರು ತಮ್ಮ ಜೀವನದಲ್ಲಿ ಸತ್ಯ, ಅಹಿಂಸೆ ಬ್ರಹ್ಮಚರ್ಯ (ಇಂದ್ರಿಯ ನಿಗ್ರಹ) ಅಸ್ತೇಯ (ಕವಿಯದಿರುವುದು ಅಪರಿಗ್ರಹ ಸ್ವದೇಶಿ, ನಿರ್ಭಯ, ಮುಂತಾದ ಮಾನವೀಯ ಗುಣಗಳನ್ನು ಕಾಪಾಡಿಕೊಂಡು ಬಂದವರಾಗಿದ್ದರು.

ಶ್ರೀ ಸ್ವಾಮಿ ರಾಮತೀರ್ಥ ಅವರ ಗ್ರಂಥಗಳನ್ನು ಶ್ರೀ ವೆಂಕಟೇಶ ಅವರು ಅಧ್ಯಯನ ಮಾಡಿದ್ದರು ಆ ಅಧ್ಯಯನದಿಂದ ಅವರು (ಶ್ರೀ ವೆಂಕಟೇಶ) ರಾಮತೀರ್ಥರ ಶಿಷ್ಯಂದಿರಾಗಬೇಕೆಂದು ಬಯಸಿ ಪುಸ್ತಕ ಪ್ರಕಾಶನಕ್ಕೆ ಕಾಗದ ಬರೆದರು. ಅಲ್ಲಿ ರಾಮತೀರ್ಥರ ಶಿಷ್ಯರಾದ ನಾರಾಯಣ (ಅವರೂ ಸ್ವಾಮಿ ನಾರಾಯಣ ಎಂದೇ ಪ್ರಸಿದ್ಧಿ ಪಡೆದಿದ್ದರು) ಅವರ ಕೈಗೆ ಸೇರಿತು ಬಳಿಕ ಸ್ವಾಮಿ ನಾರಾಯಣ ಅವರು ವೆಂಕಟೇಶ ಅವರಿಗೆ ಶ್ರೀ ಸ್ವಾಮಿ ರಮಾನಂದ ತೀರ್ಥ (ರಾಮಾನಂದ ತೀರ್ಥ) ಎಂದು ಸಂನ್ಯಾಸ ದೀಕ್ಷೆ ನೀಡಿದರು. (ಹೆಸರಿಟ್ಟರು) ಈ ಪ್ರಸಂಗವನ್ನು ಗರತಿಯೊಬ್ಬಳು ಹಾಡಿಕೊಂಡ ರೀತಿಯನ್ನು ತಿಳಿಯೋಣ.

ಸಾಧುರ ಹೌದವ್ವ ಇವರು *
ಓದವ ಹೇಳೂರ।
ಹಾದಿ ಹಂತಿಕ ಹಾದಿ
ತೋರ್‍ಯಾರ ಸಾಧೂರ ಹೌದವ್ವ ಇವರು ॥ಪ॥

ಖಾದಿಯ ತೊಟ್ಟಾರ ಕ್ಯಾವಿಯ ಹೊತ್ತಾರ
ಕಾರಣೆಕರಾಗಿ ತಿರುಗ್ಯಾರ। ವೆಂಕಟೇಶ
ರಾಮಾನಂದರೆಂದು ಹೆಸರ ಪಡದಾರ

ರಾಮಾನಂದರೆಂದು ಹೆಸರ ಪಡದಾರ
ಸಿಂದಗಿಯ ಸ್ವಾಮಿ। ರಾಮತೀರ್ಥರ
ಶಿಷ್ಯನ ಪಡದಾರ॥

ರಾಮತೀರ್ಥರ ಶಿಷ್ಯಸ್ವಾಮಿ ನಾರಾಯಣ
ಸನ್ಯಾಸಿ ದೀಕ್ಷೆ ನೀಡ್ಯಾರ। ವೆಂಕಟೇಶಗೆ
ಸಿಂದಗಿಯ ರಮಾನಂದ ತೀರ್ಥರೆಂದರ॥

ಸಿಂದಗಿಯ ರಮಾನಂದತೀರ್ಥಸ್ವಾಮಿ
ಹೈದರಾಬಾದಿನ ಸ್ವಾತಂತ್ರ ಸೂರ್ಯ। ಈ ದೇವ
ಹೆಸರ ಮಾಡ್ಯಾರ ಜಗದಾಗ॥

ಹೆಸರುಳ್ಳ ಸಾಧೂರ ತಿರುಗಿ ಬರಲಾರರೇನ?
ಹೊಸದಾಗಿ ಬೇಡಿ ಬಗಿಸೇವ। ಈ ದೇವ
ಹೊಸದೊಂದು ಅವತಾರ ಧರಿಸೂರ ॥

---

* ಹಾಡಿದವರು : ಶ್ರೀಮತಿ ಲಕ್ಕವ್ವ ಹಣಮತಂ ಪೂಜೇರ
ಊರು : ಸಿಂದಗಿ, ತಾ॥ ಸಿಂದಗಿ
ಸಂಗ್ರಹ : ೧-೧೨-೧೯೯೭
ಸಂಗ್ರಹಕಾರ : ಡಾ॥ ನಿಂಗಣ್ಣ ಸಣ್ಣಕ್ಕಿ (ಹಸ್ತ ಪ್ರತಿಯಿಂದ)

ಸ್ವಾಮಿ ರಾಮಾನಂದ ತೀರ್ಥರ ಚರಿತ್ರೆ, ರಾಷ್ಟ್ರೀಯ ಚಳುವಳಿಯಲ್ಲಿ ಜನರ ಬಾಯಿಂದ ಬಾಯಿಗೆ ಹರಿದು ಬಂದಿತು. ಅವರ ಕಾರ್ಯ ಕ್ಷೇತ್ರ ಕರ್ನಾಟಕದಲ್ಲಿ ಕಡಿಮೆ ಎಂದೆನಿಸಿದರೂ ಹೈದರಾಬಾದ ಕರ್ನಾಟಕಕ್ಕೆ ತಮ್ಮ ಕಾರ್ಯಗಳ ಮೂಲಕ ಚಿರಪರಿಚಿತರಾಗಿದ್ದರು. ಇಂದಹವರ ಹೆಸರು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಹುಲಕುಂದದ ಜನಪದ ಕವಿ ಶಿವಲಿಂಗಸ್ವಾಮಿಯವರಿಗೆ ತಿಳಿದು ಬಂದೀತು. ಬ್ರಹ್ಮಚರ್ಯ ಪಾಲನೆಯಲ್ಲಿ ರಾಷ್ಟ್ರೀಯ ಲಾವಣಿ ಮತ್ತು ಗೀಗೀ ಪದಗಳನ್ನು ರಚಿಸಿ ಅಪಾರ ಜನಪದ ಶಿಷ್ಯರನ್ನು ಪಡೆದ ರವಿಯಂತೆ ಶಿವಲಿಂಗ ಕವಿ ಸ್ವಾಮಿ ರಮಾನಂದ ತೀರ್ಥರ ಬಗೆಗೆ ರಚಿಸಿದ ಗೀತವನ್ನು ಇಲ್ಲಿ ನೋಡುವಾ.

ಮರಿ ಹಿಟ್ಲರನೆಂದು ಹೆಸರಾದ ಕಾಶಿಂ ರಜವಿಯ ಆಡಳಿತೆ- ಜನತೆಗೆ ಬಹು ಕಂಟಕ ಪ್ರಾಯವಾಗಿತ್ತು. ಅಂತಹ ನಿಜಾಮರ ವಿರುದ್ಧ ಚಳವಳಿ ಹೂಡಿದ ವಿಷಯ ಮತ್ತು ಹೈದರಾಬಾದವು ಭಾರತದಲ್ಲಿ ವಿಲೀನವಾದ ಸಂಗತಿಯನ್ನು ಮರೆಯುವಂತಿಲ್ಲ!

## ರಮಾನಂದ ತೀರ್ಥರು

ಹುಟ್ಟಿದಾರ ಕನ್ನಡ ನಾಡಿನ ಸಿಂದಗಿಯಲಿ
ಅಟ್ಟಿದಾರ ದಮಾಕರನ ಹೈದರಾಬದಿನಲಿ ಗೀಗೀ ॥ಪಲ್ಲ॥

ಏಕಚಕ್ರಾಧಿಪತಿ ನಗರವಾಸಿ
ಹೈದರಾಬಾದಕ ಮುಸಲಮಾನನಾಗಿದ್ದ ನಿಜಾಮಪತಿ।
ನಿರಂಕುಶ ದೊರೆಯಾಗಿ ಸಾಹಿದ ಸವಲತ್ತಾ
ಹೂಡಿದ್ದ ಜನ ದೋಡೆಯುವ ಮಸಲತ್ತಾ ॥೧॥

ಹೇಳುವರು ಕೇಳವರು ಯಾರೂ ಇಲ್ಲ ಇಂವಗ
ಅವನಹೆ ಪೊಲೀಸನ ಇಲಾಖೆ ಎಲ್ಲಾ।
ಸ್ವಾಮಿ ರಾಮತೀರ್ಥ ಹೊಕ್ಕಾನ ಅಲ್ಲಿ
ಸಹಾಸಿಯಾಗಿ ವೀರ ಅಭಿಮನ್ಯುವಿನಂತಾ॥೨॥

ಬಲಾಢ್ಯ ನವಾಬನ ವಿರುದ್ಧ ಮಾಡುದೇನಾ
ಪ್ರಜೆಗಳಿಗಿರಲಿ ಯಾವುದೂ ಶಿಬಿರಾ।

ರಾಮಾನಂದತೀರ್ಥರಂತಾರ ಏಳಿರೇಳಿರಿ ಜನಾ
ಎದ್ದೇಳಿರಿ ಭಾರತ ತಾಯಿ ಸ್ವಾತಂತ್ರಕೆ ||೩||

ಹೈದರಾಬಾದ ಸಂಸ್ಥಾನದಲಿ ಇತ್ತ ಜನಾ
ಹದಿನಾರು ಮಿಲಿಯಾ ಮಿಕ್ಕಿ ಮಿಕ್ಕಿ।
ಹಳ್ಳಿ ಪಟ್ಟಣಗಳ ಅಂಕಿ ಸಂಖೆ ಸಾರಿತತಿ
ಇಪ್ಪತ್ತೆರಡು ಸಾವಿರದಾ ಮತ್ತುವರಿ||೪||

ಜನರಿಗೆ ರಮಾನಂದ ತೀರ್ಥರು ಕರೆದರಾ
ಹೇಳ್ಯಾರ ಎಚ್ಚರ ನೀವು ಭಾರತದವರಾ।
ನಿಜಾಮರಾಜ್ಯ ತ್ಯಜಿಸಿರ ಮೊದಲಾ
ಚಾರಿತ್ರ್ಯ ಹಿಡಿಯಿರಿ ಭಾರತದಾ||೫||

ತಿಳಿಸ್ಯಾರ ವಿಚಾರ ಹೊಳಿಸ್ಯಾರೊ ಜನರನಾ
ಆತ್ಮಬಲ ಬಂದಿತೊ ಜನರ ಮನಕಾ।
ಕಾವಿಯಿಂದ ಬೀತರಿಸಿತೊ ಖಾದಿ ಜನಾ
ಸ್ವದೇಶಿ ಜಾಗ್ರತಿ ಮೂಡೇತಿ ಜನ–ಮನ||೬||

ಸ್ವಾಮಿ ರಾಮಾನಂದ ತೀರ್ಥರಿಗಾತೋಹರುಷಾ
ಜೀವಂತ ನಿದರ್ಶನಕೆ ಹೌಹಾರಿದೋ ನಿಜಾಮಾ।
ಗೌರವಿಸಿತೋ ಜನಾ ಒಂದೇ ಸವನಾ
ಹೈದರಾಬಾದ ನಿಜಾಮನೋಗಿ ಆದೋ ಹಜಾಮಾ||

ಎದ್ದಿರಲಿಲ್ಲೋ ಭಾರತದ ನಮ್ಮ ಜನಾ
ವಿದ್ದರಾಗುವರೋ ನರಸಿಂಹನಂತಾ।
ಬುದ್ಧಿ ಹೇಳಬೇಕೋ ಎಚ್ಚರಿಂದ್ದವನಾ
ಇದ ತಿಳಿ ಹೇಳಿದ ಹುಲಕುಂದ ಶಿವಲಿಂಗ ಕವಿವರಾ||

ಸಮಗ್ರ ಭಾರತದ ನಕ್ಷೆಯನ್ನು ಕಂಡು, ಪವಿತ್ರ ಭಾರತ ಮಾತೆಯ ಸೇವೆ ಮಾಡಿದ ಮಹಾಶರಣ ಶ್ರೀ ಸ್ವಾಮಿ ರಾಮಾನಂದ ತೀರ್ಥರು ಸ್ವಾಮಿ ನಾರಾಯಣ ಅವರು ಸಂನ್ಯಾಸ ದೀಕ್ಷೆಯನ್ನು ನೀಡುವಾಗ ನೀನು ದೇಶ, ಭಾಷೆ, ಬಣ್ಣ ಸೀಮೆ, ಇವುಗಳನ್ನು ಗೆದ್ದು ವಿಶ್ವ ಪ್ರಜೆಯಾಗು. ಅಯ್ಯಾ ನೀನು ದೇಹವಲ್ಲ ಅಹಂಕಾರಿಯಲ್ಲ ನೀನು ಪರಮಾತ್ಮನ ಅಮೃತ ಪುತ್ರ. ಮಾನವಕುಲವೇ ನಿನ್ನ ಕುಟುಂಬ ಎಂಬ ಮಾತುಗಳು ಆತ್ಮದ ಒಳ ಸೇರಿದ್ದವು.

ಸ್ವಾಮಿ ರಾಮತೀರ್ಥರ ಶಿಷ್ಯ ಸ್ವಾಮಿ ನಾರಾಯಣರಿಂದ ಸಂನ್ಯಾಸ ಉಪದೇಶ ಪಡೆದು ಶ್ರೀ ವೆಂಕಟೇಶನು ಸ್ವಾಮಿ ರಾಮಾನಂದ ತೀರ್ಥರಾಗಿ ಹೆಸರುವಾಸಿಯಾಗಿ ದೇಶಕ್ಕಾಗಿ ದುಡಿದ ಮಹನೀಯರಿಗೆ ಕನ್ನಡ ನಾಡಿನಲ್ಲಿ ಶರಣರೆಂದು ಕರೆಯಲಾಗುತ್ತಿದೆ. ಅಂತವರಾದ ಗರತಿಯ ಅಂತರಂಗದಿಂದ ಹೊರಬಂದ ಶರಣರಿಗಾರುತಿ ಬೆಳಗಿರೆ ನಿಜ ಶರಣ ಶ್ರೀ ಸ್ವಾಮಿ ರಾಮಾನಂದ ತೀರ್ಥರಿಗೆ ಆರೂತಿ ಬೆಳಗಿರಿ ಎಂಬ ಮಾತಿನೊಂದಿಗೆ ಈ ಚಿಕ್ರ ಪ್ರಬಂಧ ಮುಗಿಸೋಣ.

# ಸ್ವಾತಂತ್ರ್ಯ ಸಂಗ್ರಾಮ ಮತ್ತು ಹೈದರಾಬಾದ ವಿಮೋಚನೆ

ಭಾರತೀಯರಿಗೆ

ಬ್ರಿಟಿಷ ಕಪಿಮುಷ್ಟಿಯಿಂದ ಭಾರತವನ್ನು ಬಿಡುಗಡೆ ಮಾಡುವುದು ಬೇಕಾಗಿತ್ತು. ಈ ಸ್ವಾತಂತ್ರ್ಯದ ನಿಜ ಚಳವಳಿ ಸುರುವಾದದ್ದು ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಎಂಬುದನ್ನು ಇತಿಹಾಸ ನಮಗೆ ತಿಳಿಸಿದೆ, ತಿಲಿಸುತ್ತಿದೆ. ಹತ್ತೊಂಬತ್ತರ ಪೂರ್ವದಲ್ಲಿ ಬ್ರಿಟಿಷರ ವಿರುದ್ಧವಾಗಿ ನಡೆದ ಘಟನೆಗಲನ್ನು ದಾಖಲಾಗದಂತೆ ನೋಡಿಕೊಂಡ ಪ್ರಸಂಗಗಳು ಹಲವಾರುಂಟು. ಅವು ಕೆಲವೆಡೆ ಜನಪದರ ನಾಲಿಗೆಯ ಮೇಲಿವೆ. ಜನಪದ ಸಾಹಿತ್ಯವಿಲ್ಲದೆ, ನಮ್ಮ ಇತಿಹಾಸ ಪೂರ್ಣವಾಗದು ಎಂಬ ವಾದವಂತೂ ಇದ್ದೇ ಇದೆ. ಶತಮಾನದ ಉದ್ದಕ್ಕೂ ಹೋರಾಟ ಮಾಡಿದ ಘಟನೆಗಳು ಬ್ರಿಟಿಷರಿಗೆ ಪೆಟ್ಟುಕೊಟ್ಟು, ಘಾಯಮಾಡಿ, ವಿಚಾರಕ್ಕೆ ಸುರುವಾದಾಗ, ಮಹಾತ್ಮಾಗಾಂಧೀಜಿಯು ಆ ಕಾಲದ ಮುಖ್ಯತ್ವ ವಹಿಸಿ, ಭಾರತಕ್ಕೆ ಸ್ವಾತಂತ್ರ್ಯ (೧೫-೮-೧೯೪೭) ದೊರತದ್ದು ಜಗತ್ತಿನ ಹಾಗೂ ಭಾರತದ ಇತಿಹಾಸದಲ್ಲಿ ಸ್ಮರಣೀಯ ದಿನವಾಗಿದೆ. ಬಾರತದ ಪಿತಾಮಹ ಮಹಾತ್ಮಾಗಾಂಧೀಜಿ' ಎಂಬ ಸತ್ಯ ಸಂಗತಿಯು ಸಾಗಿದೆ. ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಸರ್ವಪರಿಕಲ್ಪನೆಗಳನ್ನು ಒಪ್ಪುತ್ತಾರೆ. ಆಧ್ಯಾತ್ಮದ ನಿಜ ತತ್ವಗಳನ್ನೂ ಒಪ್ಪುತ್ತಾರೆ. ೧೮೯೩ರ ಅಮೇರಿಕೆಯ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಸಿಂಹಗರ್ಜನೆ ಮಾಡಿದ ವಾಣಿಗಳೆಲ್ಲವೂ ಭಾರತದ ಬಲಿಷ್ಠ ಶಕ್ತಿಯೆಂಬುದನ್ನು ಒಪ್ಪುತ್ತಾರೆ.

'ರಾಷ್ಟ್ರ ದೇವೋ ಭವ' ಎಂಬ ಹೊಸ ಸಿದ್ಧಾಂತವೂ ಸರಿಯಾಗಿಯೇ ಇದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಗಳಾದ ಸರ್ವಜನತೆಯ ತ್ಯಾಗ ಬಲಿದಾನಗಳು ಈ ವರೆಗೂ ದಾಖಲಾಗುತ್ತಲೇ ಇವೆ. ಬ್ರಿಟಿಷರ ವಿರುದ್ಧವಾಗಿ ಸಿಡಿದೆದ್ದ ಜನರ ಹೋರಾಟಗಳು ಗ್ರಂಥಗಳಾಗಿ ಹೊರ ಬಂದಿವೆ.

ದಕ್ಷಿಣ ಭಾರತದಲ್ಲಿ ಹೈದರಾಬಾದ ಸಂಸ್ಥಾನವು ನಿಜಾಮರ ಕಪಿಮುಷ್ಠಿಯಿಂದ ಬಿಡುಗಡೆಯಾಗಲಿಲ್ಲ. ಜನತೆಗೆ ನಿಜಾಮರ ಆಡಳಿತ ಕೊನೆಗಾಣಬೇಕಾಗಿತ್ತು. ಅದಕ್ಕಾಗಿ ಮೊದಲಿನಿಂದಲೂ (ಅಂದರೆ ೧೯೩೦) ವಂದೇ ಮಾತರಂ' ಚಳವಳಿಯು ಹೈದರಾಬಾದ ಸಂಸ್ಥಾನಕ್ಕೂ ಬಿಸಿ ತಟ್ಟಿಸಿಯೇ ಇತ್ತು. ಹೈದರಾಬಾದಿನ ವಿವಿಧೆಡೆ ಬ್ರಿಟಿಷ ಸರಕಾರದ ವಿರುದ್ಧ ಪ್ರತಿಭಟನೆಗಳು ನಡೆದವು. ಆಗ ಕಾಶಿಮ ರಜಾಕನ ಎದೆ ನಡುಗಲು ಸುರುವಾಯ್ತು! ಇದೇ ವೇಳೆಗೆ ಜನತೆಯನ್ನು ಒಗ್ಗೂಡಿಸಲು ಆಂಧ್ರ ಮಹಾಸಭಾ ಕರ್ನಾಟಕ ಪರಿಷತ್ ಮಹಾರಾಷ್ಟ್ರ ಪರಿಷತ್ ಮುಂತಾದ ಸಂಘಟನೆಗಳು ಹುಟ್ಟಿಕೊಂಡವು. ಇವುಗಳು ವಂದೇ ಮಾತರಂ' ಮಂತ್ರವನ್ನೂದಿ ಜನ ಒಗ್ಗೂಟ್ಟಿಕ್ಕೆ ಚಳುವಳಿಗೆ, ರಜಾಕರ ಧಿಕ್ಕಾರಕ್ಕೆ ಸಜ್ಜುಗೊಂಡವು. ಆ ವೇಳೆಗೆ ರಜಾಕರು ಐದು ನೂರು ಜನರನ್ನು ಬಂದಿಸಿತೆಂದು ವರದಿಯಾದ ಬಳಿಕ, ಮತ್ತೆ ಜನರು ಚೇತನಗೊಂಡರು. ಚಳುವಳಿಗೆ ಬಲ ತಂದರು. ರಜಾಕರು ಆಂದೋಳನ ಹತ್ತಿಕ್ಕಲು ಹೊರಟರು. ಶಾಲಾ ಕಾಲೇಜು ವಿದ್ಯಾರ್ಥಿ ಬಳಗವು ಅಸಹಕಾರ ಚಳುವಳಿಯನ್ನು ನಡೆಯಿಸಿದರು. ಕೆಲವರನ್ನು ಬಂಧನದಲ್ಲಿಡಲಾಯಿತು. ವಿದ್ಯಾರ್ಥಿಗಳಿಗೆ ಬಂಧನವಾದ ನಂತರ ಜನತೆಯ ಒಗ್ಗಟ್ಟು ಮತ್ತಷ್ಟು ಬಲವಾಯಿತು. ಆ ವೇಳೆಗೆ ರವಿ ನಾರಾಯಣರೆಡ್ಡಿ, ಎಂ. ಹಣಮಂತರಾವ, ಎಂ ರಾಮಚಂದ್ರರಾವ್, ಎನ್. ಪ್ರತಾಪರೆಡ್ಡಿ, ಎನ್.ಕೆ. ರಾವ್ ಮುಂತಾದ ಗಣ್ಯರು ಪಣತೊಟ್ಟು ಹೈದರಾಬಾದ ವಿಮೋಚನೆಗೆ, ಭಾರತದ ಸ್ವಾತಂತ್ರ್ಯದ ಬಿಡುಗಡೆಗೆ ಸಜ್ಜಾದ ಮುಖ್ಯಸ್ಥ ಮಹನೀಯರಾಗಿದ್ದರು. ವಿದ್ಯಾರ್ಥಿಗಳ ಹೋರಾಟವು ಸತತ ನಡೆಯಿತು. ವಂದೇ ಮಾತರಂ ಗೀತೆ ಅಲ್ಲಿ ನಡೆದ ಯಾವುದೇ ಬಿರುಗಾಳಿಯಂತೆ ಬೀಸತೊಡಗಿತು ಅಲ್ಲಿ ನಡೆದ ಯಾವುದೇ ಚಳುವಳಿಯಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಲೇ ಕಾಣತೊಡಗಿದರು.

'ಕಾಶೀಮರಜ್ವಿ' ಎಂಬ ವಕೀಲನೊಬ್ಬ ನಿಜಾಮರಲ್ಲಿ ತನ್ನ ಶಕ್ತಿ ಸಾಮರ್ಥ್ಯದ ಬಲ ತೋರಿ ರಜಾಕರನ್ನು ನಿರ್ಮಾಣ ಮಾಡಿದನು. ಇವನು ಇತ್ತ ಹಾದುಲ್ ಮುಸಲ್ಮಾನ್' ಸಂಘಟನೆ ಮಾಡಿದನು. ತಮ್ಮದು ಇದು ಧರ್ಮಯುದ್ಧ (ಜೆಹಾದ್) ಎಂದು ಸಾರಿಕೊಂಡರು.

**ರಜಾಕಾರರ ದುಷ್ಟತನ**

ಹೈದರಾಬಾದದ ಸಮೀಪ ಪ್ರದೇಶಗಳಾದ ಗುಲಬರ್ಗಾ, ಬೀದರ ರಾಯಚೂರ ಪ್ರದೇಶಗಳಲ್ಲೂ ರಜಾಕಾರರ ಹಾವಳಿ ನಡೆಯಿತು. ಕಡೆಯಿರಿ ಬಡೆಯಿರಿ ಹೊಡೆಯಿರಿ (ಹಾಟೋ ಲೂಟೋ ಬಾಟೋ) ಎಂಬ ದುಷ್ಟ ಮಂತ್ರ ರಜಾಕಾರರದಾಯಿತು. ಈ ಸಂಗತಿಯನ್ನು ಶ್ರೀ ನಲವಡಿ ಶ್ರೀಕಂಠಶಾಸ್ತ್ರಿಗಳು ತಮ್ಮ ಲಾವಣೆಯಲ್ಲಿ ಚಿತ್ರಿಸಿದ್ದಾರೆ.

ಹೈದರಾಬಾದಿನಲ್ಲಿ ನಡೆಯಿಸಿದ ರಜಾಕಾರರ ಅನ್ಯಾಯ ಸ್ತ್ರೀಯರ ಮಾನಭಂಗ ಕೂಸುಗಳ ಹತ್ಯಾ ಪಾಪಕೃತ್ಯಗಳು ಸಾಗಿದವು.

ಹೈದರಾಬಾದಿನ ನಾಲ್ಕು ನಿಟ್ಟಿನಲ್ಲಿ ನಡೆಸಿದ ನಾಡಿನೊಳನ್ಯಾಯ
ಸುಲಿಗೆ ಕೊಳ್ಳೆ ಕೊಲೆ ಮಾಡಿರೆಂದು ರಜಕಾರರನ್ನಟ್ಟಿದ ಪಾಪಮಯ
ಅಕ್ಕ ತಂಗೇರಮಾನಭಂಗಕ್ಕೆ ಮಾಡಿಸಿದನು ನಿಷ್ಕರುಣಾಹೃದಯ
ನಡೆದ ತ್ಯಾಚಾರವ ಕೇಳಿದರೂ ಮಿಡಕಲಿಲ್ಲ ಜಿನ್ನಾ ಹೃದಯ ॥೫॥

ಸಾವಿರಾರು ಜನ ನಿರಪರಾಧಿಗಳ ಸಜೀವ ಸುಡಿಸಿದ ಚಿತ್ರಗಳು
ಗಂಡರ ಕಂಬಕೆ ಕಟ್ಟಿ ಹೆಂಡರನು ಕೆಡಿಸಿದ ಪಾಪದ ಕೃತ್ಯಗಳು
ಸಣ್ಣ ಕೂಸುಗಳ ಚೆಂಡಾಡಿ ತೂರಾಡಿದ ರಾಕ್ಷಸ ನೃತ್ಯಗಳು
ಮಾನಕಂಜಿ ಭಾವಿಯ ಹಾರಿದರು ಅಸಂಖ್ಯ ಹಿಂದು ಮಾತೃಗಳು
ಪಾಪಕೃತ್ಯಗಳ ನೋಡಿ ಭಾರತೀಯು ಕಣ್ಣಲಿ ನೀರನು ಸುರಿಸಿದಳು ॥೬॥

ಮೇಲಿನ ಎರಡು ನುಡಿಗಳ ಘಟನೆಗಳು ಹೃದಯ ವಿದ್ರಾವಕವಾದವುಗಳಾಗಿವೆ.

## ಸ್ವಾಮಿ ರಾಮಾನಂದರಾಗಮನ

ಹೈದರಾಬಾದದ ಸ್ವಾತಂತ್ರ್ಯದ ಸೂರ್ಯನೆಂದೇ ಕರೆಯಿಸಿಕೊಂಡ ಶ್ರೀ ರಾಮಾನಂದ ತೀರ್ಥರು. ಈ ಚಳುವಳಿಯಲ್ಲಿ ಪ್ರಮುಖವಾಗಿ ಭಾಗವಹಿಸಿದರು. ಹೈದರಾಬಾದ ಸಂಸ್ಥಾನವು ಆಂಧ್ರ, ಕರ್ನಾಟಕ, ಮಹಾರಾಷ್ಟ್ರದ ಕೆಲವು ಭಾಗಗಳನ್ನು ಹೊಂದಿತ್ತು. ಮೀರ ಉಸ್ಮಾನ ಅಲಿಖಾನ ಆ ಸಂಸ್ಥಾನದ ಆಧಿಪತ್ಯವನ್ನು ಕೈಯಲ್ಲಿಟ್ಟುಕೊಂಡಿದ್ದನು. ಭಾರತದಲ್ಲಿ ಇಂತಹ ೫೬೨ ಸಣ್ಣ ದೊಡ್ಡ ಸಂಸ್ಥಾನಗಳು ತಾವೇ ಸ್ವತಂತ್ರ್ಯವೆಂದು ಕೂಗನ್ನೆಬ್ಬಿಸಿದವು. ಕರ್ನಾಟಕದವರಾದ ಶ್ರೀ ಸ್ವಾಮಿ ರಾಮಾನಂದ ತೀರ್ಥರು ಹೈದರಾಬದ ವಿಮೋಚನೆಗೆ ಒಂದು ಮಹಾನ್ ಶಕ್ತಿಯನ್ನು ತಾಳಿ ಕಾರಣಕರ್ತರಾದುದನ್ನು ಇತಿಹಾಸ ನೆನಪಿನಲ್ಲಿಟ್ಟಿದೆ. ಈ ಇತಿಹಾಸವನ್ನು ಲಾವಣಿಕಾರ ಹೇಳುವದನ್ನು ನಾವು ನೆನಪಿಡಬೇಕಾದ ಸತ್ಯ ಸಂಗತಿ.

ಹತ್ತೊಂಬೊತ್ತನೂರಾ ನಾಲ್ವತ್ತೆಂಟನೆಯ ಜನವರಿ ತಿಂಗಳ ಕಡೆ ಮೊದಲು
ಕೊಲೆಗಾರಂಭವಾದಾಯಿತು ಹೈದರಾಬಾದಿನ ಹಿಂದೂ ಜನತೆಯೊಳು
ಮೂರುನೂರು ಐವತ್ಮೂರು ಹಳ್ಳಿಗಳ ಸುಟ್ಟ ಸುಲಿದ ಚಿನ್ನಾಟಗಳು
ಸಿರಿವಂತರ ಮನೆ ಲೂಟಿಸಿ ಜಗ್ಗಿದ ಕೋಟ್ಯಾವಧಿ ಧನ-ನಾಣ್ಯಗಳು
ಹರಿದು ಹೋಗತಿರೆ ಸ್ವಾಮಿ ರಾಮಾನಂದರು ಕೇಳ್ದರು ನಾಡಿನಗೋಳು ॥೭॥

ಶ್ರೀ ರಾಮಾನಂದರು ಶಿಕ್ಷಣ ರಂಗದಲ್ಲಿ ಪರಿಪೂರ್ಣವಾಗಿ, ಜನತೆಗೆ ಜ್ಞಾನ ನೀಡಿದವರು, ಲೋಕಾನುಭವಿಗಳೂ ಆಗಿದ್ದರು. ಮಾನವ ಸ್ವಾತಂತ್ರ್ಯಬೇಕು ಮತ್ತು ಸಂಪೂರ್ಣ ಸ್ವಾತಂತ್ರ್ಯವಾಗಲೂ ಭಾರತದಲ್ಲಿರುವ ಸಂಸ್ಥಾನಗಳೆಲ್ಲ ವಿಲೀನೀಕರಣವಾಗಲೇ ಬೇಕು ಎಂದು ಸಾರ ತೊಡಗಿದರು. ಜನತೆಯಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯಾಭಿಮಾನ, ರಾಷ್ಟ್ರಭಕ್ತಿ-ಯುಕ್ತಿಗಳನ್ನು ಬಿತ್ತಿದರು. ಛಲಗಾರ ಸಂನ್ಯಾಸಿ, ಹೋರಾಟಗಾರ ನಿಷ್ಕಾಮಿಕರ್ಮಿ ಎಂದು ಹೊಗಳಿಸಿಕೊಂಡರು.

ಭಾರತ ಸ್ವಾತಂತ್ರ್ಯದಲ್ಲಿ ತಾವಿಲ್ಲಿ ಸ್ವತಂತ್ರರು ಎಂದು ಹೈದರಾಬಾದ ನಿಜಾಮರು ಹೇಳಿದಗಾ, ಭಾರತದ ಪ್ರತಿಷ್ಠಿತರು ಹೈದರಾಬಾದ ಸಂಸ್ಥಾನದ ವಿಮೋಚನಗೆ ಸಜ್ಜಾದರು. ಎಲ್ಲ ದಿಕ್ಕಿನಿಂದಲೂ ರಜಾಕರ ಕಡೆಗೆ ಲಕ್ಷವಹಿಸಲಾಯಿತು. ಸ್ವತಂತ್ರ ಭಾರತದ ಮೊದಲು ಪ್ರಧಾನಿ ಪಂಡಿತ ಜವಾಹರಲಾಲ ನೆಹರೂಜಿ, ರಾಷ್ಟ್ರಾಧ್ಯಕ್ಷ ಡಾ|| ಬಾಬು ರಾಜೇಂದ್ರ ಪ್ರಸಾದ, ಗೃಹಮಂತ್ರಿ ಹಾಗೂ ಸಂರಕ್ಷಣಾಮಂತ್ರಿ, ಉಕ್ಕಿನ ಮನಷ್ಯ ಸರದಾರ ವಲ್ಲಭ ಬಾಯಿ ಪಟೇಲ ಮುಂತಾದವರು ಸಭೆ ಸೇರಿದರು ಸರದಾರ ವಲ್ಲಭಾಯಿ ಅವರಿಗೆ ಎಲ್ಲರೂ ಅನುಕೂಲಾಗಿ ವಿಮೋಚನೆಗೆ ಜಯ ತಂದರು.

ಹತ್ತಿವಿಮಾನದಿ ಬಂದ ಪಟೇಲರು ಸೈನ್ಯಕಿತ್ತ ಸಂದೇಶದಲಿ ಸುತ್ತ ವೀರರಸ ಉಕ್ಕಿತು ಸೈನ್ಯದಿ ಪಶ್ಚಿಮ ದಂಡಿನ ಯಾತ್ರೆಯಲಿ ||೨೩|| ಸಂಪೂರ್ಣ ಯಶವನ್ನು ಹೊಂದುವವರೆಗೆ ವಲ್ಲಭ ಬಾಯಿ ಅವರು

ತಮ್ಮ ಸಾಮರ್ಥ್ಯದ ದೃಷ್ಟಿಯನ್ನು ನೆಟ್ಟರು

## ವಿಮೋಚನೆಗೆ ಜಯ

ಹೈದರಾಬಾದದ ನಿಜಾಮರು ತಾವು ಸ್ವತಂತ್ರವಾಗಿರುವ ಕನಸುಕಂಡಿದ್ದರು. ರಜಾಕಾರರ ಹಾವಳಿಯಲ್ಲಿ ಇರ್ಷೆಯಿಂದ ಹಿಂದು ಜನತೆಗೆ ಹಿಂಸೆ ನೀಡಿದರು.

ಭಾರತ ಸರಕಾರವು ದಂಡನಾಯಕ ಲೆ. ಜ. ಮಹಾರಾಜಾ ಸಿಂಗ ಅವರನ್ನು ಮುಖ್ಯವಾಗಿಟ್ಟುಕೊಂಡಿತು. ಅನೇಕ ಸೈನ್ಯದ ತುಕುಡಿಗಳನ್ನು ವಲ್ಲಭ ಬಾಯಿ ಪಟೇಲರು ಆಜ್ಞೆ ನೀಡಿ ಕಾರ್ಯಾಚರಣೆಗೆ ಸಿಲುಕಿಸಿದರು. ಸಪ್ಟೆಂಬರ ೧೩ರ ನೆಯದಿನ ೧೯೪೮ ಭಾರತ ಸರಕಾರ ಹೈದರಾಬಾದ ಸಂಸ್ಥಾನದ ಸೈನ್ಯ ದಿಕ್ಕೆಟ್ಟು ಓಡಿಹೋಗುವಂತೆ ಮಾಡಿತು. ಆದಿನ ಹಿಂದುಗಳಿಗೆ ಹಾಗೂ ಇತರ ಜನಾಂಗದವರಿಗೆ ಬಂಧ ಮುಕ್ತವಾದ ದಿನವಾಯಿತು.

ಅಂದಿನ ಸಪ್ಟೆಂಬರ ಹದಿಮೂರು ಬೆಳಗು ಮೂಡುವುದರೊಳಗಾಗಿ
ಬಂದ ಮೂರ ಸಾವಿರ ನೈಜಾಮರ ಸೈನ್ಯ ತಕ್ಷಣ ಹತವಾಗಿ
ಅಂದವಾಗಿ ನೆಲದುರ್ಗ ಕೋಟೆಯದು ಹಿಂದೀ ಸೈನ್ಯದ ವಶವಾಗಿ
ಮುಂದೆ ನಡೆದ ಚೌದರಿಯ ಸೈನ್ಯವದು ಮಿಂಚಿನವೇಗದಿ ಮುಂದಾಗಿ
......................................................................................||೨೭||
ಮೃತರಾದರು ರಜಾಕಾರರು ರಣದಲಿ ಕಾಶೀಮ ರಜಮೀಯ ನೆನೆನೆನೆದು
..........................................................................................
ಗತಿಯಾವದು ಶರಣಾಗತಿ ಎಂದನ್ನುತ್ತಿದ್ದರು ಸರ್ವರ ಕೈಮುಗಿದು ||೪೮||

---

೧. ನಲವಡಿ ಕೃಷ್ಣಶಾಸ್ತ್ರಿ ಹೈದರಾಬಾದ ರಜಾಕಾರ ಲಾವಣಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಪು-೧೯೯೮

ನಿಜಾಮರ ವಿರುದ್ಧ ೧೯೩೦ರಿಂದಲೇ ಭಾರತೀಯರು ಸಂಸ್ಥಾನವು ಭಾರತದಲ್ಲಿ ವಿಲೀನವಾಗಲಿ ಎಂದು ಹಂಬಲಿಸುತ್ತಿದ್ದರು. ಒಳಗಿಂದೊಳಗೆ ಭಾರತದ ಸ್ವಾತಂತ್ರ್ಯದ ದಿನವೇ ಈ ಸಂಸ್ಥಾನಗಳು ವಿಲೀನಗೊಳ್ಳಬೇಕಾಗಿತ್ತು, ಭಾರತದ ಒಕ್ಕೂಟ ಸೇರಲು (೧೫-೮-೧೯೪೭) ಸಜ್ಜಾಗಬೇಕಾಗಿತ್ತು. ಆದರೆ ಈ ವಿಮೋಚನೆಗೆ ಜನತೆಯು ಜಾಗ್ರತವಾಗಿ ಸರಕಾರವನ್ನೊಳಗೊಂಡು ಯುದ್ಧ ಮಾಡಲೇಬೇಕಾಗಿ ಬಂತು.

ನಿಜಾಮ ಶಾಹಿಯ ದುಷ್ಟತನದ ದಬ್ಬಾಳಿಕೆಯಿದಂ ಹೈದರಾಬಾದ ಸಂಸ್ಥಾನವನ್ನು ಸಪ್ಟೆಂಬರ ೯ರಂದು ೧೯೪೮ರಲ್ಲಿ ಸೈನ್ಯದ ಕಾರ್ಯಾಚರಣೆಯಾಗಬೇಕಾಯಿತು. ಅದನ್ನು ಪೊಲೀಸ ಕಾರ್ಯಾಚರಣೆ ಎಂದು ಕೆಲವರು ಕರೆದರು. ಒಟ್ಟು

ನಾಲ್ಕು ದಿನಗಳ ನಿರಂತರ ಕಾರ್ಯಾಚರಣೆಯಿಂದ ನಿಜಾಮರ ಸಾಕಿದ ಸೈನಿಕರು ಸೋತು ಶರಣಾಗತಿಯಾದರು. ರಜಾಕರ ಹಾವಳಿಯು ನಿಂತಿತು.

ಹೈದರಾಬಾದ ರಜಾಕಾರರ ಕೈಗೊಂಬೆಯಾಗಿರುವ ನಿಜಾಮ ಮೀರ ಉಸ್ಮಾನ ಅಲಿಖಾನ ಹಾಗೂ ಅವನು ರಚಿಸಿಕೊಂಡ ಸಚಿವ ಸಂಪುಟ ಕೈ ಚೆಲ್ಲಿ ಕುಳಿತುಕೊಂಡು, ಭಾರತ ಸರಕಾರಕ್ಕೆ ಶರಣಾಗತಿಯಾದರು.

ಕಾಸಿಮ್ ರಜ್ವಿ ಸಾಮಾನ್ಯ ಮನುಷ್ಯನಾಗಿದ್ದನು. ಧರ್ಮದ ಹೆಸರಿನಿಂದ ದುಷ್ಟಶಕ್ತಿಯನ್ನು ಪಡೆದು ಹೆಸರು ಪಡೆದನು. ರಜಾಕಾರರ ಪಡೆ ಎಂದು ಹೆಸರು ಪಡೆದನು.

ಕೊನೆಗೆ ನಿಜಾಮರ ಕನಸುಗಳೆಲ್ಲ ನುಚ್ಚು ನೂರಾಗಿ, ಹುಸಿ ಕನಸುಗಳಾದವು. ಕನ್ನಡದ ಲಾವಣಿಕಾರರು ಶ್ರೀ ನಲವಡೆ ಶ್ರೀ ಕಂಠ ಶಾಸ್ತ್ರಿಗಳು ಕೆಳಗಿನಂತೆ ಹಾಡಿಕೊಂಡಿದ್ದಾರೆ.

ಕಡೆಗಾಣದ ನೈಜಾಮರು ಕೊನೆಯಲಿ ಶರಣಾಗತಿಯನ್ನು ಸಾರಿದರು।
ಸಡಲಿದ ಹೈದರಾಬಾದಿನ ಶಕ್ತಿಯು ಪತನದ ವಾರ್ತೆಯ ಕೇಳಿದರು।
ತಡಮಾಡದೆ ಭಾರತ ಸೇರ್ಪಡೆಯಾಗಲು ಎಂಡ್ರೂಸನ್‌ರಟ್ಟಿದರು।
..............................................................................
ನುಡಿದರು ಜಯ ಜಯ ಹಿಂದ ಎಂದು ಜೈ ಧನಿಯಲಿ ಹಿಂದಿ ಸೈನಿಕರು॥೩೦॥

---

೭. ಅದೇ ಪುಟ. ೧೦

ನಡೆದ ಘಟನೆಗಳು ಸಾವಿರಾರು ಎಲ್ಲ ಘಟನೆಗಳಲ್ಲಿ ಭಾರತೀಯರು ಕೆಚ್ಚೆದೆಯಿಂದ ಕಾದಿರುವರು. ಅವೆಲ್ಲವುಗಳು ಕನ್ನಡ, ಮರಾಠಿ, ತೆಲುಗು, ಭಾಷೆಗಳ ಜಾನಪದದಲ್ಲಿವೆ. ಜನರ ನಾಲಿಗೆಗಳಲ್ಲಿ ಜೀವಂತವಾಗಿವೆ. ಸಂಗ್ರಹಕಾರರು ಸಂಶೋಧನೆ ನಡೆಯಿಸಿರುವರು

ಭಾರತ ಸ್ವಾತಂತ್ರ್ಯದ ಪರಿಕಲ್ಪನೆಗೆ ಪಾಲ್ಗೊಂಡಿದ್ದ ಮಹಾನ್ ಚೇತನಗಳು ಅವರ ಜೀವನ ಬದುಕು ಇನ್ನೂ ಬೆಳಕು ಕಾಣಬೇಕಾದುದು ಅವಶ್ಯವಿದೆ.

ಆ ಅವಧಿಯಲ್ಲಿ ನಾಡಿನ ಹಾಗೂ ರಾಷ್ಟ್ರದ ಪತ್ರಿಕೆಗಳು ಸಾವಿರಾರು ಘಟನೆಗಳನ್ನು ಮಾಡುವುದರ ಜೊತೆ, ಜನತೆಗೆ, ಸ್ಫೂರ್ತಿಗಳನ್ನು ನೀಡಿವೆ.

○